# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ. ಸಂಚಿಕೆ ೫೦ – ಡಿಸೆಂಬರ್, ೨೦೨೪**




KARNATAKA CULTURAL ORGANIZATION BRINDAVANA (KCOB) NJ, USA

## ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಬೃಂದಾವನದ ಸಮಸ್ತ ಕನ್ನಡ ಓದುಗರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು!




KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


ಅಧ್ಯಕ್ಷರ ಅಪೂರ್ವ ಅಂಕಣ..........................................೫

ಯುವಜನತೆಯ ಸಂಸ್ಕಾರಹೀನತೆ ......................................೭

ಬೃಂದಾವನ ವಾಣಿ - ೫೦ ಹಿನ್ನೋಟದ ಹಾದಿಯಲ್ಲಿ..................೯

ವಿಂಶತಿ ವೈಭವ ಬೃಂದಾವನೋತ್ಸವ – 20...........................೧೩

ಸಾಧಕರು ...........................................................೨೧

ಕಥಾ ಸ್ಪರ್ಧೆ - ಮೆಚ್ಚುಗೆ ಬಹುಮಾನಗಳು...........................೩೦

ಕಥೆಗಳು...........................................................೪೦

ಸತ್ಯ ಕಥೆ ಆಧಾರಿತ ಬರಹಗಳು.......................................೪೫

ಶ್ರದ್ಧಾಂಜಲಿ.......................................................೪೮

ಕವನಗಳು..........................................................೫೧

ಚಿಣ್ಣರ ಮುತ್ತುಗಳು...............................................೫೪

ಕ್ಯಾಮೆರಾ ಕಣ್ಣು..................................................೫೭

# ಸಂಪಾದಕೀಯ

**ಬೃಂದಾವನ ದ್ವಿದಶಮಾನೋತ್ಸವ "ವಿಂಶತಿ ವೈಭವ"ದೊಡನೆ ವಾಣಿಯ ಸುವರ್ಣ ಸಂಭ್ರಮ**

ಎಲ್ಲ ಬೃಂದಾವನದ ಕನ್ನಡ ಓದುಗರಿಗೆ ನಮಸ್ಕಾರಗಳು.

20ರ ಹರೆಯದ ಬೃಂದಾವನಕ್ಕೆ ನಿಮ್ಮೆಲ್ಲರಿಗೂ ಸುಸ್ವಾಗತ. ಎರಡು ದಿನಗಳ ವಿಜೃಂಭಣೆಯಿಂದ ನಡೆದ ಬೃಂದಾವನ "ವಿಂಶತಿ ವೈಭವ" ಕಾರ್ಯಕ್ರಮಗಳು ಚಿರ ಸ್ಮರಣೀಯ. "ವಿಂಶತಿ ವೈಭವದ" ವಿಶೇಷಣಗಳು ಸುಂದರವಾದ ಸ್ಮರಣ ಸಂಚಿಕೆಯಲ್ಲಿ ಮೂಡಿ ಬರಲಿದೆ. ಈ ಬೃಂದಾವನ ವಾಣಿಯ ವಿಶೇಷ ಸುವರ್ಣ ಸಂಚಿಕೆ ನಿಮ್ಮೆಲ್ಲರ ಮನ ಮುಟ್ಟಲ್ಲೆಂದು ಆಶಿಸುತ್ತೇವೆ.

ಈ ಸಂಚಿಕೆಯಲ್ಲಿ ವಿಶೇಷವಾಗಿ ಬೃಂದಾವನ ವಾಣಿ ನಡೆದು ಬಂದು ದಾರಿಯ ಕೆಲವು ತುಣುಕುಗಳ ನಡುವೆ 50 ರ ಸಂಭ್ರಮದ ವಾಣಿಯಲ್ಲಿ , ಹಿಂದಿನ ಸಂಪಾದಕರ ಕೆಲವು ಲೇಖನಗಳು ನೆನಪಿನ ಬುತ್ತಿಯಲ್ಲಿ ಕೈ ಹಾಕಿ ವಿಷಯಗಳ ಹೆಕ್ಕಿ ತೆಗೆದಿದ್ದಾರೆ . ವಿಂಶತಿ ವೈಭವದಲ್ಲಿ ವಾಣಿಯ 50ರ ಸಂಭ್ರಮವನ್ನು ನಾವು ವಿಡಿಯೋ ಮೂಲಕ ಹಂಚಿಕೊಂಡಾಗ , ಕಳೆದ ಎಲ್ಲಾ ಸಂಚಿಕೆಗಳ ಮುಖ ಪುಟಗಳು ಹಾಗು ಸಂಪಾದಕ ತಂಡದವರ ಅನುಭವಗಳನ್ನು ಹಂಚಿಕೊಂಡಾಗ , ನಮ್ಮ ಮುಖ್ಯ ಅತಿಥಿಯಾಗಿದ್ದ ಶ್ರೀ ಡುಂಡಿರಾಜ್ ಅವರು, ತಮ್ಮ ಮೊದಲ ಸಂಚಿಕೆಯ ಶುಭ ಹಾರೈಕೆಯ ಸಂದೇಶ ನೋಡಿ ಬಹಳ ಸಂತೋಷ ಪಟ್ಟರು . ಅನಿವಾಸಿ ಕನ್ನಡಿಗರಲ್ಲಿ 10 ವರ್ಷಗಳ ಕಾಲ ಸತತವಾಗಿ ಉತ್ತಮ ಗುಣಮಟ್ಟದ ಪತ್ರಿಕೆಗೆ ಮನಃ ಪೂರ್ವಕವಾಗಿ ಶ್ಲಾಘಿಸಿದರು.

ಅಪೂರ್ವ ತಂಡದ ಅತ್ಯಂತ ವೈಭೋವೋಪೇತ ಕಾರ್ಯಕ್ರಮ ವಿಂಶತಿ ವೈಭವದಲ್ಲಿ ಹಲವಾರು ಕಾರ್ಯಕ್ರಮಗಳು ಜನರ ಮನ ಸೂರೆಗೊಂಡವು.
ಮನೋ ಮೂರ್ತಿ ಅವರ ವಾದ್ಯ ಘೋಷ್ಟಿಯಂತೂ
ಎಲ್ಲರೂ ಕುಳಿತಲ್ಲೇ ಹೊಸ ಲೋಕಕ್ಕೆ ಕರೆದೊಯ್ಯಿತು.
ಡುಂಡಿರಾಜರ ಕಾರ್ಯಕ್ರಮವಂತೂ ಎಲ್ಲರನ್ನು ನಗೆ ಗಡಲಿನಲ್ಲಿ ತೇಲಿಸಿತು.

10 ವರ್ಷಗಳ ಬೃಂದಾವನ ವಾಣಿಯಲ್ಲಿ ಹಲವಾರು ಕವಿಗಳ ಸಂದರ್ಶನ , ಕನ್ನಡದ ಹಿರಿಯ ನಟ ಜಗ್ಗೇಶ್ ,ಖ್ಯಾತ ಹಾಡುಗಾರ್ತಿ ಶ್ರೀಮತಿ ಬಿ ಆರ್ ಛಾಯಾ ಅವರೊಡನೆ ಸಂದರ್ಶನ , ಆರೋಗ್ಯ ಅಂಕಣಗಳು, ಬಿ ಆರ್ ಲಕ್ಷ್ಮಣ್ ರಾವ್ ಕವಿ ಲೇಖನಗಳು , ಚುಟುಕಗಳು , ಹನಿ ಗವನಗಳು , ಜ್ಞಾನ ಸಂಪಾದನೆಗೆ ಶ್ರೀ M G ಪ್ರಸಾದ್ ಹಾಗು ಶ್ರೀ ಯೋಗಿಂದ್ರ ಭಟ್ ಅವರ ಜೀವನ ಯುಕ್ತ ಲೇಖನಗಳು. ಮಕ್ಕಳ ವಿಭಾಗದಲ್ಲಿ ನಮ್ಮ ಬೃಂದಾವನ ಕನ್ನಡ ಶಾಲೆಯ ಮುದ್ದು ಮಕ್ಕಳ ಬರವಣಿಗೆ , ಚಿತ್ರ ಲೇಖನಗಳು ಹಾಗು Photo graphy ವಿಭಾಗದಲ್ಲಿ ಸುಂದರವಾದ ಛಾಯಾ ಚಿತ್ರಗಳು ಮನ ಸೂರೆಗೊಂಡಿದೆ. ಕೋವಿಡ್ ಸಮಯದಲ್ಲಿ ಬೃಂದಾವನ ವಾಣಿ , ಓದುಗರಲ್ಲಿ ಹೊಸ ಹುರುಪನ್ನು ತರಲು ಹಲವಾರು ಲೇಖನಗಳ ಮೂಲಕ ವಿಷಯ ಮಾಹಿತಿ ಸಂಗ್ರಹಿಸಿ , ಉಪಯುಕ್ತ ಕಾಣಿಕೆಯನ್ನು ನೀಡಿತು. ಆರೋಗ್ಯ ಮಾಹಿತಿಗಾಗಿ ಹಲವಾರು ಡಾಕ್ಟರ್ ಗಳ ಸಂದರ್ಶನ ಮಾಡಿ , ಅವರ ಕಾರ್ಯ ಪ್ರಶಂಸೆಯನ್ನು ಪತ್ರಿಕೆ ಮೂಲಕ ಮಾಡಿತು. ಅಪೂರ್ವ ಸಾಹಿತ್ಯ ತಂಡದ "ಕನ್ನಡ ಕಾರಂಜಿ" ವೇದಿಕೆಯಲ್ಲಿ ಶ್ರೀ ಗೋವಿಂದನ್ ಕಾರ್ಯಕ್ರಮದೊಂದಿಗೆ ಪ್ರಾರಂಭಿಸಿತು , ಹಲವಾರು ಭಾವಗೀತೆಗಳ ಕಾರ್ಯಕ್ರಮ "ನಿನ್ನೊಲುಮೆಯಿಂದಲೆ " ಸಹ ನಡೆಯಿತು. "ಓದುಗರ ಚಾವಡಿ "ಯಲ್ಲಿ ಹಲವಾರು ಹೆಸರಾಂತ ಕನ್ನಡ ಲೇಖಕರ ಪುಸ್ತಕಗಳನ್ನು ಬೃಂದಾವನ ಸಾಹಿತ್ಯಾಸಕ್ತರು ವಿಮರ್ಶಿಸಿದರು. ಈ ಪುಸ್ತಕ ಕ್ಲಬ್ ನಲ್ಲಿ ಮುಖತಃ ಮೊನ್ನೆ ಭೇಟಿ ಮಾಡಿ ವಸುದೇಂದ್ರ ಅವರ "ರೇಷ್ಮೆ ಬಟ್ಟೆ "ಯ ಬಗ್ಗೆ ಗಹನವಾಗಿ ಚರ್ಚೆಯಾಯಿತು.

ಈ ವರ್ಷದಲ್ಲಿ ಬೃಂದಾವನ ಕನ್ನಡ ಕೂಟ, ಈಸ್ಟ್ ವಿಂಡ್ಸರ್ ಹಾಗು ಎಡಿಸನ್ ನಗರದಿಂದ ನವೆಂಬರ್ 1 ತಾರೀಕು , ಕನ್ನಡ ದಿನವೆಂದು ಘೋಷರಿಸಿ ಪ್ರಕಟಣೆ ಹೊರಡಿಸಿದರು. ಈ ವಿಶೇಷ ಪ್ರಶಂಸೆಗೆ ಕನ್ನಡ ಕೂಟ ಅಭಾರಿಯಾಗಿದೆ. ಇದು ಬೃಂದಾವನ ದ್ವಿಶಮಾನೋತ್ಸವ ಸಂದರ್ಭದಲ್ಲಿ ಬಂದಿರುವುದು ಎಲ್ಲ ಕಾರ್ಯಕರ್ತರ ಹಾಗು ಕನ್ನಡಿಗರಿಗೆ ಸಂದ ಗೌರವ ಎಂದು ಭಾವಿಸುತ್ತೇವೆ.

ಈ ಡಿಸೆಂಬರ್ ನಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ ದಲ್ಲಿ ನಡೆಯಿತು. ಶ್ರೀ ಗೋ ರು ಚೆನ್ನಬಸಪ್ಪ ನವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನ , ನಮ್ಮ ಬೃಂದಾವನದ ಸ್ಥಾಪಕರಾದ ಶ್ರೀ ಪ್ರಸನ್ನ ಕುಮಾರ್ ಹಾಗು ಶ್ರೀಮತಿ ಉಷಾ ಪ್ರಸನ್ನ ಅವರಿಗೆ ವಿಶೇಷವಾಗಿ ಅನಿವಾಸಿ ಕನ್ನಡಿಗರ ಸೇವೆ ಸ್ಮರಿಸಿ , ಸನ್ಮಾನಿಸಲಾಯಿತು . ಇದು ನ್ಯೂ ಜೆರ್ಸಿ ಬೃಂದಾವನ ಕನ್ನಡಿಗರೆಲ್ಲರಿಗೂ ಸಂದ ಗೌರವ ಹಾಗು ಬಹಳ ಸಂತೋಷದ ವಿಷಯ.

ಮತ್ತೊಮ್ಮೆ ಅಭಿಮಾನಿ ಓದುಗರಿಗೆ ,ಅಪೂರ್ವ ತಂಡದ ಎಲ್ಲ ಸದಸ್ಯರು , ವಿಶ್ವಸ್ತ ಮಂಡಳಿ , ನಿರ್ದೇಶಕರಿಗೆಲ್ಲರಿಗೂ ಹಾಗು ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರಿಗೂ ಬೃಂದಾವನ ವಾಣಿ ಸಂಪಾದಕೀಯ ತಂಡದ ಧನ್ಯವಾದಗಳು.

ಸಂಪಾದಕೀಯ,
ರಾಘವೇಂದ್ರ ಕುಂದಲಗುರ್ಕಿ

**ಸಂಪಾದಕೀಯ ತಂಡ:**


**ಉಷಾ ಗಣಪತಿ**


**ಕೆ.ರಾಘವೇಂದ್ರ**


**ಪವಿತ್ರಾ ರಾಜೀವ್**


**ಚಂದ್ರ**


**ವಿನಯ್**


**ಪ್ರಶಾಂತ್**

# ಅಧ್ಯಕ್ಷರ ಅಪೂರ್ವ ಅಂಕಣ

ಬಾಕ್ಸಿಂಗ್ ಡೇ ಟೆಸ್ಟ್ ಸೀರೀಸ್ ನಡುವೆ ಫಾಸ್ಟೆಸ್ಟ್ 50 ಇನ್ 20 ಹೊಡೆದದ್ದು ಯಾರು ಗೊತ್ತಾ??? ನಮ್ಮ ಬೃಂದಾವನ ವಾಣಿ ಮಾರಾಯ್ರೆ !! ಹೇಗೆ ಅಂತೀರಾ!!! ನೀವು ಕ್ರಿಕೆಟ್ ಸಮಾಚಾರ ಓದುತ್ತಿದ್ದರೆ, ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಈಗ ಮೆಲ್ಬೋರ್ನ್ ನಲ್ಲಿ ಬಾಕ್ಸಿಂಗ್ ಡೇ ಟೆಸ್ಟ್ ಶುರುವಾಗಿದೆ ಅಂತ ಗೊತ್ತಿರುತ್ತೆ, ಇದರ ನಡುವೆ 20 ವರ್ಷ ಪೂರೈಸಿದ ಬೃಂದಾವನದಲ್ಲಿ 50 ಸಂಚಿಕೆ ಹೊರತಂದಿದ್ದು ನಮ್ಮ ಬೃಂದಾವನ ವಾಣಿ!!! ಹಾಗಾಗಿ, ನಾವೇ ಆಲ್ವಾ, ಫಾಸ್ಟೆಸ್ಟ್ ???

ಬೃಂದಾವನ ಬಂಧು ಬಾಂದವರೆಲ್ಲರಿಗೂ ನಮಸ್ಕಾರ ನಮಸ್ಕಾರ ನಮಸ್ಕಾರ

ಹೌದು, ನಮ್ಮ ಬೃಂದಾವನ ವಾಣಿಗೆ ೫೦ ತುಂಬುತ್ತಿದೆ; ಅಂದ್ರೆ, ಈ ವಾರ ಬೃಂದಾವನ ವಾಣಿಯ ೫೦ ನೆಯ ಸಂಚಿಕೆ ಬಿಡುಗಡೆಯಾಗುತ್ತಿದೆ.

ನಿಮ್ಮೆಲ್ಲರ ಶುಭ ಹಾರೈಕೆಯೊಂದಿಗೆ, ಸುಮಾರು ೧೦ ವರ್ಷಗಳ ಹಿಂದೆ ಬೃಂದಾವನದಲ್ಲಿ ಕನ್ನಡ ಭಾಷಾಪ್ರೇಮಿಗಳ ಲೇಖನ, ಕತೆ, ಕವನಗಳ ಮಿಲನದಿಂದ ಶುರುವಾಗಿ, ಹಲವಾರು ಬೃಂದಾವನ ವಾಣಿ ತಂಡದವರ ಪರಿಶ್ರಮದಿಂದ, ಕನ್ನಡ ಅಭಿಮಾನಿಗಳಿಗೆ, ಸಾಹಿತ್ಯದ ಸೌರಭ ಪಸರಿಸಿ, ಪ್ರಗತಿಯ ಪಥದಲ್ಲಿ ಅಪೂರ್ವ ಉಡುಗೊರೆಯಾಗಿರುವ ನಮ್ಮ ಬೃಂದಾವನ ವಾಣಿಯು, ಸುವರ್ಣ ಸಂಚಿಕೆಯನ್ನು ನೀಡಲಿದೆ, ಎಂದು ಹೆಮ್ಮೆ ಎನಿಸುತ್ತಿದೆ. ಹೀಗೆಯೇ ರಜತ ಮಹೋತ್ಸವದೆಡೆ ಮುಂದುವರೆಯಲಿ; ಬೃಂದಾವನ ವಾಣಿಯ ಇನ್ನೂ ಹೆಸರುವಾಸಿಯಾಗಲಿ, ಎಂದು ಆಶಿಸುತ್ತೇನೆ. ಇನ್ನೂ ಹೆಚ್ಚಿನ ಲೇಖಕರ ಪ್ರತಿಭೆಯನ್ನು ಉತ್ತೇಜಿಸುವ ಮಾಧ್ಯಮವಾಗಲಿ. ಕಾಲಕ್ರಮೇಣ, ಕಾಲಕ್ಕೆ ತಕ್ಕಂತೆ ಬದಲಾವಣೆಗಳಾದರೂ, ಬೃಂದಾವನ ವಾಣಿ ಶುರು ಮಾಡಿದ ಉದ್ದೇಶ ಹೀಗೆಯೇ ಮುಂದುವರೆಯಲಿ.

ಈ ಅಂಕಣದಲ್ಲಿ ಕಾಲ, ಸಮಯದ ಬಗ್ಗೆಯೇ ಯೋಚನೆ ಮಾಡುತ್ತಿದ್ದೇನೆ. ಬೃಂದಾವನಕ್ಕೆ ಇಪ್ಪತ್ತು; ಬೃಂದಾವನ ವಾಣಿ ಶುರುವಾಗಿ ಹತ್ತು; ಸಂಚಿಕೆ ಐವತ್ತು; ಹೌದು, ಕಾಲವನ್ನು ತಡೆಯೋರು ಯಾರೂ ಇಲ್ಲ. ಮೊನ್ನೆ ಮೊನ್ನೆಯಷ್ಟೇ 2003ರಲ್ಲಿ, ಸಾಹಿತ್ಯ ನಿರ್ದೇಶಕ ಶ್ರೀ ರಾಘವೇಂದ್ರ ಕುಂದಲಗುರ್ಕಿಯವರು ಅಧ್ಯಕ್ಷರ ಅಂಕಣದ ಬಗ್ಗೆ ಕೇಳಿದಾಗ, ಏನು ಬರೆಯಲಿ ಎಂದು ಯೋಚನೆ ಮಾಡಿದ್ದೆ. ಎಷ್ಟು ಬೇಗ 2 ವರ್ಷ ಆಯಿತು ನೋಡಿ. ಈಗ ಅಪೂರ್ವ ತಂಡದ ವತಿಯಿಂದ ಕೊನೆಯ ಅಧ್ಯಕ್ಷರ ಅಂಕಣದ ಬಗ್ಗೆ ಶ್ರೀ ರಾಘವೇಂದ್ರ ಅವರು ಪುನಃ ಕೇಳಿದಾಗ, ಕಳೆದ ಸಂಚಿಕೆಯಿಂದ ಈ ಸಂಚಿಕೆಯವರೆಗೆ ಏನೇನೆಲ್ಲ ಬರೆಯಲಿ ಎಂದು ಯೋಚಿಸಿ ಬರೆಯುತ್ತಿದ್ದೇನೆ.

ಅಪೂರ್ವ ಸಾಧನೆಗಳ ಸ್ಮೃತಿಪಟಲಗಳನ್ನು ಮೆಲುಕುಹಾಕುತ್ತಾ ಮುನ್ನಡೆಯುವ ಸಮಯ

ಈ ಎರಡು ವರ್ಷಗಳ ನಮ್ಮ ಅಪೂರ್ವ ತಂಡದ ಸುಂದರ ಪಯಣದ ಪುಟಗಳನ್ನು ತಿರುವಿಹಾಕುವಾಗ, ನಮ್ಮ ಬೃಂದಾವನ ಬೆಳೆದಿರುವ ರೀತಿ, ಅದು ಮಾಡಿರುವ ಸಾಧನೆಗಳು, ಇನ್ನೂ ಸಾಧಿಸಬೇಕಾದ ಕೆಲಸಗಳ ಸಿಂಹಾವಲೋಕನ, ಈ ಅವಧಿಯ ಹಾದಿಯಲ್ಲಿ ಸಿಕ್ಕಿದ ಅತಿರಥ ಮಹಾರಥರ ಸಹಕಾರ, ಅನೇಕ ಮರೆಯಲಾಗದ ಅಭೂತಪೂರ್ವ ಕ್ಷಣಗಳು, ಇವೆಲ್ಲವನ್ನೂ ನೆನೆಸಿಕೊಳ್ಳುತ್ತಿರುವಾಗ ನನ್ನ ಮನಸ್ಸಿನಲ್ಲಿ ಆಗ್ತಾ ಇರುವ ಸಂತೋಷ, ಹೆಮ್ಮೆ, ಕೃತಜ್ಞತೆಯ ಆ ಭಾವ, ಪದಗಳಲ್ಲಿ ವರ್ಣನೆ ಮಾಡೋದಿಕ್ಕೆ ಅಸಾಧ್ಯ. ಈ ಅದ್ಭುತ ಪಯಣದ ಸಾರಥ್ಯವನ್ನು ಮುಂದಿನ ತಂಡಕ್ಕೆ ಹಸ್ತಾಂತರಿಸುವ ಸಮಯದಲ್ಲಿ, ಪ್ರಕಟಿಸಲರ್ಹವಾದ ನಮ್ಮ ತಂಡದ ಐತಿಹಾಸಿಕ ಸಾಧನೆಗಳನ್ನು ಈ ಕೆಳಕಂಡಂತೆ ನಿಮ್ಮ ಮುಂದೆ ಪ್ರಸ್ತುತ ಪಡಿಸುವುದಕ್ಕೆ ಹರ್ಷವಾಗುತ್ತಿದೆ.

ನಮ್ಮ ಬೃಂದಾವನಕ್ಕೆ ಮಾತ್ರವಲ್ಲದೆ, ಇಡೀ ಕನ್ನಡಿಗರು ಹೆಮ್ಮೆ ಪಡುವಂಥ ವಿಚಾರವೆಂದರೆ ನ್ಯೂ ಜೆರ್ಸಿ ರಾಜ್ಯದ ರಾಜ್ಯಪಾಲರಾದ ಶ್ರೀ ಫಿಲ್ ಮರ್ಫಿ ಯವರು, 2024 ನವೆಂಬರ್ ಒಂದನ್ನು ಕನ್ನಡ ರಾಜ್ಯೋತ್ಸವವೆಂದು ಪರಿಗಣಿಸಿ, ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದು. ಇದು ಜನ್ಮಭೂಮಿ ಕರುನಾಡಿಗೆ ಮತ್ತು ಕರ್ಮಭೂಮಿ ನ್ಯೂ ಜೆರ್ಸಿಯ ನಡುವೆ ಸಾಂಸ್ಕೃತಿಕ ಸೇತುವೆಯಂತಿರುವ ಕನ್ನಡಿಗರಿಗೆ ಮಾತ್ರವಲ್ಲದೆ ಇಡೀ ಕನ್ನಡ ನಾಡಿಗೆ, ಕನ್ನಡ ನುಡಿಗೆ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊರೆತ ಗೌರವವೂ ಹೌದು. ಈ ಸಂದರ್ಭದಲ್ಲಿ ಇಲ್ಲಿನ ಈಸ್ಟ್ ವಿಂಡ್ಸರ್ ಮೇಯರ್ ಮತ್ತು ಎಡಿಸನ್ ನಗರದ ಮೇಯರ್ ತಮ್ಮ ತಮ್ಮ ನಗರಗಳಲ್ಲಿ ನವೆಂಬರ್ ಒಂದನ್ನು ಕನ್ನಡ ಭಾಷಾ ದಿನ ಮತ್ತು ಕನ್ನಡ ರಾಜ್ಯೋತ್ಸವವೆಂದು ಅಧಿಕೃತ ಪ್ರೊಕ್ಲಮೇಶನ್ನುಗಳಿಗೆ ಸಹಿಹಾಕಿದ್ದು ನಮ್ಮ ಬೃಂದಾವನದ ಅವಿರತ ಪ್ರಯತ್ನದಿಂದ ಎಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆಯಾಗುತ್ತಿದೆ.

ನಿಮಗೆಲ್ಲರಿಗೂ ತಿಳಿದೇ ಇರುವ ಹಾಗೆ, ಬೃಂದಾವನದ ಕನ್ನಡ ಕೂಟದ ಮೂಲ ಧ್ಯೇಯವೇ ಭರತಖಂಡದಿಂದ ಸಪ್ತ ಸಾಗರದಾಚೆಯ ನ್ಯೂ ಜೆರ್ಸಿಯಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆ, ಭಾಷೆ ಮತ್ತು ಪರಂಪರೆಯ ತಾಣವನ್ನು ಸೃಷ್ಟಿಸುವುದು. ಈ ದಿಸೆಯಲ್ಲಿ ಕಳೆದೆರಡು ವರ್ಷಗಳಲ್ಲಿ ನಮ್ಮ ತಂಡದಿಂದ ಆಯೋಜಿಸಲ್ಪಟ್ಟ ಹತ್ತು ಹಲವಾರು ಕಾರ್ಯಕ್ರಮಗಳು ನಮ್ಮ ಇಲ್ಲಿನ ಕನ್ನಡಿಗರನ್ನು ಒಂದು Vibrant ಮತ್ತು Dynamic ಸಮುದಾಯವಾಗಿ ಹತ್ತಿರ ತಂದಿರುವುದು ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಇದಕ್ಕೆ ತಾಜಾ ಉದಾಹರಣೆ, ನಿಮ್ಮೆಲರಿಗೆ ತಿಳಿದಿರುವಂತೆ, ನವೆಂಬರ್ 2 ಮತ್ತು 3 ರಂದು ನಾವು ಅದ್ದೂರಿಯಾಗಿ ಆಚರಿಸಿದ "ವಿಂಶತಿ ವೈಭವ" - ಬೃಂದಾವನದ ಇಪ್ಪತ್ತನೇ ಹುಟ್ಟುಹಬ್ಬ. ಆ ಎರಡು ದಿನಗಳಲ್ಲಿ ಆಯೋಜಿಸಿದ ಕಾರ್ಯಕ್ರಮಗಳು ನಮ್ಮ ಬೃಂದಾವನದ ಸಂಪತ್ತನ್ನು ಪ್ರದರ್ಶಿಸಿದ್ದು ಮಾತ್ರವಲ್ಲದೆ, ಕನ್ನಡ ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿಯ ಚಿರಪ್ರೇಮಿಗಳನ್ನೆಲ್ಲಾ ಒಂದೇ ಸೂರಿನಡಿ ತಂದು ಸಂಭ್ರಮಿಸುವಂತೆ ಮಾಡಿತು. ಆ ಸಂಭ್ರಮಾಚರಣೆಗಳ ಸಮಯದಲ್ಲಿ ನಾವು ಅನುಭವಿಸಿದ ಹಾಸ್ಯ, ಸಂತೋಷ, ಮತ್ತು ಒಗ್ಗಟ್ಟಿನ ಕ್ಷಣಗಳು ಮುಂದಿನ ಹಲವಾರು ದಶಕಗಳಿಗೆ ನನ್ನ ನೆನಪಿನಾಳದಲ್ಲಿ ಸದಾ ಉಳಿಯಲಿವೆ.

ಈ ವರ್ಷ ಅಪೂರ್ವ ತಂಡದ ವಿಶೇಷ ದೇಣಿಗೆ, ನಾವು ನಡೆಸಿದ ೫ ರಕ್ತದಾನ ಶಿಬಿರಗಳು. ಹಾಗೆಯೇ, ವಿಂಶತಿ ವೈಭವ ಆಚರಣೆಯು ನವೆಂಬರ್ ಒಂದರೊಂದು, ಹಾರ್ಟ್ಫುಲ್ನೆಸ್ಸ್ ಸಂಸ್ಥೆಯಿಂದ zoom ನಲ್ಲಿ ನಡೆದ "ದಿಲ್ ಸೆ ವಿಥ್ ದಾಜಿ " ಕಾರ್ಯಕ್ರಮದಲ್ಲಿ ಸಭಿಕರಿಂದ ಧ್ಯಾನ ಹಾಗೂ ಆರೋಗ್ಯದ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮವು, ಅಪೂರ್ವ ತಂಡದ ಆರೋಗ್ಯದ ಗುರಿಯನ್ನು ದೃಢ ಪಡಿಸಿತು.

ಕನ್ನಡ ಕಲಿಸೋಣ ಅಭಿಯಾನದಲ್ಲಿ ಬೃಂದಾವನ ನಡೆಸುತ್ತಿರುವ 7 ಕನ್ನಡ ಶಾಲೆಗಳಲ್ಲಿ 250 ಕ್ಕೂ ಹೆಚ್ಚು ಮಕ್ಕಳು ಕನ್ನಡ ಕಲಿಯುತ್ತಿರುವುದು ನಮಗೆ ಹಿರಿಮೆಯ ವಿಚಾರ. ನಮ್ಮ ಬೃಂದಾವನದ ಅವಿರತ ಪ್ರಯತ್ನದಿಂದ, ನ್ಯೂ ಜೆರ್ಸಿ ರಾಜ್ಯವು ಹಲವಾರು ಶೈಕ್ಷಣಿಕ ಜಿಲ್ಲೆಗಳಲ್ಲಿ Seal of Biliteracy for Kannada ವನ್ನು ಅನುಮೋದಿಸಿದೆ. ಇದೊಂದು ವಿಶಿಷ್ಟ ಗೌರವ ಮತ್ತು ಇದರ ಸದುಪಯೋಗವನ್ನು ಮುಂದಿನ ದಿನಗಳಲ್ಲಿ ಬೃಂದಾವನ ಕನ್ನಡ ಶಾಲೆಗಳ ಹಲವಾರು ಮಕ್ಕಳು ಪಡೆಯುವುದರಲ್ಲಿ ಸಂದೇಹವೇ ಇಲ್ಲ. ಇನ್ನೂ ಒಂದು ಸಿಹಿ ಸುದ್ದಿಯೆಂದರೆ, ನಮ್ಮ ಅಪೂರ್ವ ತಂಡ ಮಕ್ಕಳಿಗೆ ಮಾತ್ರವಲ್ಲದೆ ೧೮ ವರ್ಷ ಮೇಲ್ಪಟ್ಟವರಿಗಾಗಿ ಸೆಂಟ್ರಲ್ ಜೆರ್ಸಿ ಕನ್ನಡ ಶಾಲೆಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿದೆ. ಕನ್ನಡ ಕಲಿಯಲು ಅಮೇರಿಕಾದಲ್ಲಿ ಮಾತ್ರವಲ್ಲದೇ, ಜರ್ಮನಿ, ಇಟಲಿ ದೇಶಗಳಿಂದಲೂ ಆಸಕ್ತಿವಹಿಸಿ ಹಲವಾರು ಮಂದಿ ಅರ್ಜಿ ಸಲ್ಲಿಸುರುತ್ತಾರೆ ಎಂದು ಹೇಳಿಕೊಳ್ಳಲು ಅತೀವ ಸಂತಸವಾಗುತ್ತಿದೆ.

ಇಡೀ ಅಪೂರ್ವ ತಂಡದ ಯಶಸ್ಸುಗಳ ಹಿಂದೆ ಅಹರ್ನಿಶಿ ಕೆಲಸ ಮಾಡಿದ ನನ್ನ ತಂಡ ಮತ್ತು ತಂಡದ ಎಲ್ಲ ನಿರ್ದೇಶಕರ ಸಾಂಘಿಕ ಪರಿಶ್ರಮದ ಬಗ್ಗೆ ಬರೆಯುತ್ತಾ ಹೋದರೆ ಅದಕ್ಕೊಂದು ಆತ್ಮಚರಿತ್ರೆಯನ್ನೇ ಮೀಸಲಿಡಬೇಕಾಗುತ್ತದೆ. ಅಪೂರ್ವ ನಿರ್ದೇಶಕರುಗಳಾದ ಶ್ರೀ ಸುನಿಲ್ ಹುಲಿಕೆರೆ (ಉಪಾಧ್ಯಕ್ಷರು), ಶ್ರೀ ಅನಿಲ್ ಭಾರದ್ವಾಜ್ (ಕಾರ್ಯದರ್ಶಿ), ಶ್ರೀಮತಿ ನಾಗಶ್ರೀ ಶಾಸ್ತ್ರಿ (ಸಂಸ್ಕೃತಿ), ಶ್ರೀ ರಾಘವೇಂದ್ರ ಕುಂದಲಗುರ್ಕಿ ಮತ್ತು ತಂಡ (ಸಾಹಿತ್ಯ- ಶ್ರೀ ಚಂದ್ರು , ಶ್ರೀಮತಿ ಉಷಾ ಗಣಪತಿ, ಶ್ರೀಮತಿ ಪವಿತ್ರ ರಾಜೀವ್, ಶ್ರೀ ವಿನಯ್ ಜಾನಕೀರಾಂ), ಶ್ರೀಮತಿ ರೋಹಿಣಿ ಮಹೇಶ್ (ಶಾಲಾ ಜಂಟಿ ನಿರ್ದೇಶಕರು) , ಶ್ರೀ ಸತ್ಯನಾರಾಯಣ್ ಕೃಷ್ಣಮೂರ್ತಿ (ಶಾಲಾ ಜಂಟಿ ನಿರ್ದೇಶಕರು) ಮತ್ತು ಸ್ವಯಂ ಪ್ರೇರಿತ ಶಿಕ್ಷಕರ ವೃಂದ, ಶ್ರೀ ಶೇಖರ್ ಜಯರಾಮ್ (ಖಜಾಂಚಿ), ಶ್ರೀ ನಂದೀಶ್ ಮಠದ್ (ಉಪ ಖಜಾಂಚಿ), ಶ್ರೀ ಉಮೇಶ್ ರಾಜೇಗೌಡ (ಮೂಲ ಸೌಕರ್ಯ), ಶ್ರೀ ಪ್ರಸನ್ನ ಕೋರಿ (ಊಟೋಪಚಾರ), ಶ್ರೀ ಸಂತೋಷ್ ಪ್ರಸಾದ್ (ಮಾಧ್ಯಮ ಮತ್ತು ತಂತ್ರಜ್ಞಾನ) ,ಶ್ರೀಮತಿ ಸರಯೂ ಘಟ್ಟು (ಖಜಾನೆ), ಶ್ರೀಮತಿ ಶುಭಾ ಅಚ್ಚಯ್ಯ (ಚಾರಿಟಿ), ಶ್ರೀ ಸುಹಾಸ್ ಕುಮಾರ್ (ಬೃಂದಾವನ ಯುವ ಜಂಟಿ ನಿರ್ದೇಶಕ), ಕುಮಾರಿ ಅನನ್ಯ ಕಟ್ಟೀಮನಿ (ಬೃಂದಾವನ ಯುವ ಜಂಟಿ ನಿರ್ದೇಶಕ); ಜೊತೆಗೆ ನಮ್ಮ ವಿಶ್ವಾಸಾರ್ಹ ವಿಶ್ವಸ್ಥ ಮಂಡಳಿಯ ಸದಸ್ಯರಾದ ಶ್ರೀಮತಿ ಪದ್ಮಿನಿ ಹೇಮಂತ್, ಶ್ರೀ ಪ್ರಸನ್ನ ಕುಮಾರ್, ಶ್ರೀ ಬೆನ್ ಕಾಂತಾರಾಜು, ಶ್ರೀ ಸತೀಶ್ ಹೊಸನಗರ ಮತ್ತು ಹಲವಾರು ಕಾಣದ ಕೈಗಳಿಗೆ ಅನಂತಾನಂತ ಧನ್ಯವಾದಗಳು ಮತ್ತು ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ನೀವಿರದಿದ್ದರೆ ಅಪೂರ್ವ ತಂಡ ನಿಜಕ್ಕೂ ಅಪೂರ್ಣವಾಗುತ್ತಿದುದರಲ್ಲಿ ಎರಡು ಮಾತೇ ಇಲ್ಲ.

ನಮ್ಮ ಈ ಎಲ್ಲ ಸಾಧನೆಗಳ ಹಾದಿಯಲ್ಲಿ ನಾವಿಟ್ಟ ಪ್ರತಿ ಹೆಜ್ಜೆಗೂ, ತಾವು ಅಂದರೆ ನಮ್ಮ ಪ್ರೀತಿಯ ಪ್ರತಿಯೊಬ್ಬ ಬೃಂದಾವನಿಗರೂ ನೀಡಿದ ಸಹಕಾರ, ಬೆಂಬಲ, ತೋರಿದ ಔದಾರ್ಯ, ಪ್ರೀತಿಗೆ ಬೆಲೆಕಟ್ಟಲು ಸಾಧ್ಯವಿಲ್ಲ. ನಿಮ್ಮಿಂದಲೇ ಈ ಬೃಂದಾವನ ಎಂದು ಹೇಳಿಕೊಳ್ಳುವುದರಲ್ಲಿ ತಂಡದ ಅಧ್ಯಕ್ಷೆಯಾಗಿ ಮತ್ತು ನಮ್ಮ ತಂಡದ ಪರವಾಗಿ ಧನ್ಯತೆಯಿದೆ. ನಿಮ್ಮ ಅಭೂತಪೂರ್ವ ಉತ್ಸಾಹ, ನಿರಂತರ ನಿಷ್ಠೆ, ಸಕ್ರಿಯ ಪಾಲ್ಗೊಳ್ಳುವಿಕೆ, ಮತ್ತು ನಿಮ್ಮ ಅತ್ಯಮೂಲ್ಯ ಕೊಡುಗೆಗಳಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಮುಂದಿನ ತಂಡದ ನಾಯಕತ್ವದಲ್ಲಿ ಬೃಂದಾವನ ಇನ್ನೂ ಹೊಸ ಎತ್ತರವನ್ನು ತಲುಪುವುದು ಎಂಬ ನಂಬಿಕೆ ಇದೆ. ನಮ್ಮ ತಂಡಕ್ಕೆ ನೀಡಿದಂತೆ, ಮುಂದಿನ ಎರಡು ವರ್ಷಕ್ಕೂ ನಿಮ್ಮ ಬೆಂಬಲ ಇನ್ನೂ ಹೆಚ್ಚಿನ ರೀತಿಯಲ್ಲಿ ಹರಿದುಬರುತ್ತದೆ ಎಂದು ವಿಶ್ವಾಸವಿದೆ. ನಮ್ಮ ಭಾಷೆ, ಕಲೆ, ಸಂಸ್ಕೃತಿ, ಸಾಹಿತ್ಯದ, ಅದ್ಭುತ ಪರಂಪರೆಯ ರಾಯಭಾರಿಗಳಾಗಿ ನೀವು ಬೃಂದಾವನದ ನಿರಂತರ ಪ್ರಯಾಣದಲ್ಲಿ ಸಕ್ರಿಯ ಭಾಗವಾಗಿ ಮುಂದುವರೆದು, ನಮ್ಮ- ನಿಮ್ಮೀ ಬೃಂದಾವನವನ್ನು ಉನ್ನತ ಸ್ಥಾಯಿಗೆ ತಲುಪಿಸುವಿರಿ ಎಂಬ ಭರವಸೆಯೊಂದಿಗೆ, ಅಪೂರ್ವ ತಂಡದ ಪರವಾಗಿ ಮುಂದಿನ ತಂಡಕ್ಕೆ ಶುಭವನ್ನು ಕೋರುತ್ತೇನೆ.

ಪರಿತೃಪ್ತ ಭಾವದೊಂದಿಗೆ ಕೃತಜ್ಞತಾ ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತಿರುವ,



**---ಅರ್ಚನಾ ಆಚಾರ್ಯ,**
**ಅಧ್ಯಕ್ಷೆ , ಅಪೂರ್ವ ತಂಡ,**
**ಬೃಂದಾವನ, ನ್ಯೂ ಜೆರ್ಸಿ.**

# ಯುವಜನತೆಯ ಸಂಸ್ಕಾರಹೀನತೆ



**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*




ಚಿತ್ರ ಕೃಪೆ: ಕೃತಕ ಬುದ್ಧಿಮತ್ತೆ

ಮಕ್ಕಳಿಕೆ ಸರಿಯಾದ ಸಂಸ್ಕಾರ ಕೊಡುವುದೇ ಹೆತ್ತವರಿಗಿರುವ ದೊಡ್ಡ ಹೊಣೆಗಾರಿಗೆ ಹೊರತು ಅವರನ್ನು ಸದಾ ಸುಖದ ಸುಪ್ಪತ್ತಿಗೆಯಲ್ಲಿಡುವುದು ಅಥವಾ ಅವರಿಗೋಸ್ಕರ ಆಸ್ತಿ ಮಾಡಿಡುವುದಲ್ಲ. ಆದರೆ ಇಂದು ಎಷ್ಟೋ ಮಂದಿ ಪೋಷಕರಿಗೆ ಈ ವಿಷಯ ಮನಸ್ಸಿನೊಳಗೆ ಹೋಗುವುದೇ ಇಲ್ಲ. ಮಕ್ಕಳ ಮೇಲಿನ ಅತಿಯಾದ ವ್ಯಾಮೋಹವೋ, ಕಾಳಜಿಯೋ ಅಥವಾ ಮುಂದೇನಾಗಬಹುದು ಎಂಬುವುದನ್ನು ಕಿಂಚಿತ್ತು ಯೋಚಿಸದಷ್ಟು ಸಮಯ ಮತ್ತು ವ್ಯವಧಾನದ ಕೊರತೆಯೋ ಗೊತ್ತಿಲ್ಲ. ಆದರೆ ಆಧುನಿಕ ತಂದೆತಾಯಿಗಳಂತೂ ತಮ್ಮ ಮಕ್ಕಳಿಗೆ ಕೊಡುವ ಸುಖಸವಲತ್ತುಗಳನ್ನು ಹೆಚ್ಚಿಸುತ್ತಲೇ ಇದ್ದಾರೆ ಮತ್ತು ಅವರಿಗೋಸ್ಕರ ದುಡಿಯುತ್ತಾ ದೊಡ್ಡ ಪ್ರಮಾಣದ ಆಸ್ತಿ ಪಾಸ್ತಿ ಮಾಡಿಡುವ ಪ್ರಯತ್ನದಲ್ಲಿ ಸಂಪೂರ್ಣವಾಗಿ ಮಗ್ನರಾಗಿಬಿಟ್ಟಿದ್ದಾರೆ. ತತ್ಪರಿಣಾಮವಾಗಿ ಇಂದು ಅನೇಕ ಮಕ್ಕಳು ದಾರಿತಪ್ಪುತ್ತಿದ್ದಾರೆ ಹಾಗೂ ಅದಕ್ಕೆ ಅವರ ಹೆತ್ತವರೇ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣಕರ್ತರಾಗುತ್ತಿದ್ದಾರೆ.

ಮಕ್ಕಳು ಚಿಕ್ಕವರಿರುವಾಗಲೇ ಅವರಿಗೆ ಸರಿತಪ್ಪುಗಳ ಸರಿಯಾದ ಪರಿಚಯವಾಗಬೇಕು. ಜೀವನದ ಕಷ್ಟಸುಖಗಳ ಬಗೆಗಿನ ಅರಿವು ಮೂಡಿಸಬೇಕು. ಈ ಪ್ರಪಂಚದಲ್ಲಿ ಸುಲಭವಾಗಿ ಯಾವುದೂ ಸಿಗುವುದಿಲ್ಲ ಮತ್ತು ಇರುವ ಸುಖಸಂಪತ್ತುಗಳು ಶಾಶ್ವತವಲ್ಲ ಎನ್ನುವ ಸತ್ಯದ ಮನವರಿಕೆಯಾಗಬೇಕು.

ಅತಿಯಾದ ಪ್ರೀತಿಯಿಂದ ಈಗಿನ ಹೆತ್ತವರು ಮಕ್ಕಳಿಗೆ ಅವರ ತಪ್ಪೇನೆಂಬುವುದನ್ನೂ ತಿಳಿಸಿಕೊಡುವುದಿಲ್ಲ. ಸೋಲೆಂಬುವುದನ್ನಂತೂ ಅವರ ಬಳಿ ಸುಳಿಯಲೇ ಬಿಡುವುದಿಲ್ಲ. ಆಧುನಿಕ ಮನಃಸ್ಥಿತಿಯ ಅಜ್ಜ, ಅಜ್ಜಿಯರು ಕೂಡ ಹಾಗೆಯೇ ಆಗಿ ಬಿಟ್ಟಿದ್ದಾರೆ. ಮಕ್ಕಳ ಜೊತೆಗಿನ ಚಿಕ್ಕ ಪುಟ್ಟ ಆಟಗಳಲ್ಲಿಯೂ ಉದ್ದೇಶಪೂರ್ವಕವಾಗಿ ತಾವೇ ಸೋತುಬಿಡುತ್ತಾರೆ. ಅವರಿಗೆ ಬೇಕು ಬೇಕಾದದ್ದನ್ನೆಲ್ಲ ತಾವೇ ಮಾಡಿಕೊಡುತ್ತಾರೆ. ಒಂದು ಹೆಜ್ಜೆಯೂ ನಡೆಯಲು ಬಿಡದೆ ಎಲ್ಲೆಡೆಗೆ ವಾಹನದಲ್ಲೇ ಕರೆದುಕೊಂಡು ಹೋಗುತ್ತಾರೆ. ಉತ್ತಮೋತ್ತಮವಾದ ಬಟ್ಟೆಬರೆಗಳು, ಆಟಿಕೆಗಳನ್ನೇ ಕೊಡಿಸುತ್ತಾರೆ. ಹೀಗೆ ಅತಿಯಾದ ಕಾಳಜಿಗಳೊಂದಿಗೆ ಬೆಳೆದ ಮಕ್ಕಳು ಮುಂದೆ ಸ್ಪರ್ಧಾತ್ಮಕ ಪ್ರಪಂಚದಲ್ಲಿ ತಾವು ಹೇಗೆ ಬದುಕಬೇಕೆಂಬುದನ್ನೇ ತಿಳಿಯದೆ ಪರದಾಡುತ್ತಾರೆ, ಅಥವಾ ತಪ್ಪುದಾರಿಗಿಳಿಯುತ್ತಾರೆ.

ಹೆಚ್ಚಿನ ಹೆತ್ತವರು ಸ್ವಚ್ಛಂದತೆಯನ್ನೇ ತಾವು ತಮ್ಮ ಮಕ್ಕಳಿಗೆ ಕೊಡಬಹುದಾದ ಉತ್ತಮ ಜೀವನ ಎಂದುಕೊಂಡುಬಿಟ್ಟಿದ್ದಾರೆ. ಅದರ ಪರಿಣಾಮ ನೋಡಿ, ಈಗಿನ ಮಕ್ಕಳಿಗೆ ದೊಡ್ಡವರ ಜೊತೆಗೆ ಹೇಗೆ ವರ್ತಿಸಬೇಕು, ಮಾತನಾಡಬೇಕೆಂಬುವುದೇ ಗೊತ್ತಿರುವುದಿಲ್ಲ. ಇನ್ನು ಹಿರಿಯರು ಬಂದಾಗ

ಎದ್ದು ನಿಲ್ಲುವುದು, ಕಾಲಿಗೆ ನಮಸ್ಕರಿಸಿಸುವುದು, ಗೌರವದಿಂದ ಮಾತನಾಡಿಸುವುದು ಇತ್ಯಾದಿಗಳಂತೂ ಅನೇಕ ಮನೆಗಳಲ್ಲಿ ನಿಂತೇ ಹೋಗಿದೆ. ಮನೆಗೆ ಯಾರು ಬಂದರೇನು ಯಾರು ಹೋದರೇನು ಎಂಬಂತೆ ಮಕ್ಕಳು ಎಲ್ಲೋ ಒಂದುಕಡೆ ಅಥವಾ ಕೋಣೆಯೊಳಗೆ ತಮ್ಮ ಪಾಡಿಗೆ ತಾವಿರುತ್ತಾರೆ. ನಾವೇ ಅವರ ಬಳಿಗೆ ಹೋಗಿ ಮಾತನಾಡಿದರೂ ನಿರ್ಲಕ್ಷಿಸುತ್ತಾರೆ. ಇನ್ನೂ ಕೆಲವುಕಡೆ ಬೆಳೆದುನಿಂತ  ಮಕ್ಕಳಜೊತೆ ಮಾತನಾಡಲು ಹೆತ್ತವರೇ ಹೆದರುತ್ತಾರೆ! ಹಿಂಜರಿಯುತ್ತಾರೆ! ಏಕೆಂದರೆ ಅವರ ಮಕ್ಕಳ ಆ ಅತ್ಯಂತ ಅಗೌರವದ ಎದುರುತ್ತರವನ್ನು ಸಹಿಸಿಕೊಳ್ಳುವುದು ಅವರಿಂದಲೇ ಸಾಧ್ಯವಿಲ್ಲ!

ಇದೀಗ ಈ ಆಧುನಿಕ ತಂತ್ರಜ್ಞಾನಗಳು ನಮ್ಮ ಮನೆಯೊಳಗೆ ನುಗ್ಗಿದ ಮೇಲಂತೂ ಅನೇಕ ಯುವಕ ಯುವತಿಯರಿಗೆ ಮನುಷ್ಯರೊಡನೆಯ ಸಂಪರ್ಕವೇ ಬೇಡವೆನಿಸಿದೆ. ಮದುವೆ, ಮುಂಜಿ, ಗೃಹಪ್ರವೇಶ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳಿಗೆ ದೊಡ್ಡವರು ಮಾತ್ರ ಹೋಗುವುದು ಎನ್ನುವ ಪರಿಪಾಠ ಬಂದುಬಿಟ್ಟಿದೆ. ಬೆಳೆದುನಿಂತ ಮಕ್ಕಳಿಗೆ ಪಾಪ ಪುರುಸೊತ್ತೇ ಇಲ್ಲವಂತೆ! ವಾಸ್ತವವೇನೆಂದರೆ ಅಂತಹ ಕಾರ್ಯಕ್ರಮಗಳಿಗೆ ಹೋಗಲು ಈಗಿನ ಯುವ ಮಕ್ಕಳಿಗೆ ಇಷ್ಟವೇ ಇಲ್ಲ. ಹೋದರೂ ಅವರಿಗೆ ಅಲ್ಲಿ ಬೋರಾಗುತ್ತದಂತೆ! ಏಕೆಂದರೆ ಅವರ ವಯಸ್ಸಿನ ಬೇರೆ ಯಾರ ಮಕ್ಕಳೂ ಅಲ್ಲಿ ಬಂದಿರುವುದಿಲ್ಲ!  ಬಹುತೇಕ ಎಲ್ಲರ ಮನೆಯಲ್ಲೂ ಇದೇ ಪರಿಸ್ಥಿತಿ!

ಇನ್ನು ಮಠಮಂದಿರಗಳಲ್ಲಿ ನಡೆಯುವ ಪೂಜಾ ಪುನಸ್ಕಾರಗಳು ಮತ್ತು ಪಾಠಪ್ರವಚನಗಳಲ್ಲಿ  ಸಂಪೂರ್ಣವಾಗಿ ಭಾಗವಹಿಸಲು ಹೆತ್ತವರಿಗೂ ಸಮಯವಿಲ್ಲ ಬಿಡಿ, ಇನ್ನು ಅಲ್ಲಿ ಈ ಯುವ ಮಕ್ಕಳನ್ನು ಕಾಣಲು ಸಾಧ್ಯವೇ? ಹೋದರೂ ತತ್ ಕ್ಷಣದಲ್ಲಿ ದರ್ಶನ ಮತ್ತು ತೀರ್ಥ ಪ್ರಸಾದದ ವಿನಿಯೋಗವಾಗಬೇಕು ಮತ್ತು ಅಲ್ಲಿಂದ ಹೊರಡಬೇಕು. ನಂತರ ಸಂತೆ ತಿರುಗಲು, ಶಾಪಿಂಗ್ ಮಾಡಲು ಎಷ್ಟು ಹೊತ್ತಾದರೂ ಪರವಾಗಿಲ್ಲ!



ಚಿತ್ರ ಕೃಪೆ: ಕೃತಕ ಬುದ್ಧಿಮತ್ತೆ

ಇದೇ ಯುವ ಜನತೆಗೆ ಮೊಬೈಲ್ ನಲ್ಲಿ ಯಾವ್ಯಾವುದೋ ರೀಲ್ಸ್ ಗಳನ್ನು ನೋಡಲು, ಸಾಮಾಜಿಕ ಜಾಲತಾಣದಲ್ಲಿ ಸ್ನೇಹಿತರ ಜೊತೆಗೆ ಕಳೆಯಲು ಸಾಕಷ್ಟು ಸಮಯವಿರುತ್ತದೆ. ದಿನದ ಇಪ್ಪತ್ನಾಲ್ಕು ಗಂಟೆಯೂ ಕೈಯಲ್ಲಿ ಮೊಬೈಲ್ ಫೋನ್ ಇರುತ್ತದೆ. ಆದರೆ ನಾವು ಕಳಿಸುವ ಈಮೈಲ್ ಗಳಿಗೆ, ಮೆಸೇಜುಗಳಿಗೆ ಉತ್ತರಿಸುವಷ್ಟು ವ್ಯವಧಾನವಿಲ್ಲ! ಯಾವ್ಯಾವುದೋ ಪಾರ್ಟಿ, ಡಾನ್ಸ್ , ಮ್ಯೂಸಿಕ್ಕುಗಳಿಗೆ ನಿದ್ದೆಗೆಟ್ಟಾದರೂ ಹೋಗಲು ಸಿದ್ಧರಿದ್ದಾರೆ, ಆದರೆ ಯಾವಾಗಲೋ ಒಮ್ಮೆ ಹಬ್ಬದ ದಿನ ಮುಂಜಾನೆಯ ದೇವರ ಪೂಜೆಗೆ ಕರೆದರೆ ಬರಲು ಮನಸ್ಸಿಲ್ಲದೆ ಪುರುಸೊತ್ತಿಲ್ಲವೆನ್ನುತ್ತಾರೆ.

ಈ ಯುವಜನತೆಯ ಇಂತಹ ಅಧ್ವಾನಗಳಿಗೆಲ್ಲ ಪೋಷಕರ ಮನಃಸ್ಥಿತಿ ಮತ್ತು ಜೀವನ ಶೈಲಿಯೇ ಮುಖ್ಯಕಾರಣ ಹೊರತು ಮತ್ತೇನೂ ಅಲ್ಲ. ಇನ್ನಾದರೂ ನಾವು ಎಚ್ಚೆತ್ತುಕೊಳ್ಳಬೇಕು. ಮಕ್ಕಳು ಚಿಕ್ಕವರಿರುವಾಗಲೇ ನಿರ್ದಾಕ್ಷಿಣ್ಯದಿಂದ ಅವರ ತಪ್ಪುಗಳನ್ನು ಅವರಿಗೆ ಮನವರಿಗೆ ಮಾಡಿಕೊಡಬೇಕು. ಹಿರಿಯರಿಗೆ ಗೌರವ ಸಲ್ಲಿಸುವ ಸಾಂಪ್ರದಾಯಿಕ ಆಚರಣೆಗಳನ್ನು ನಾವು ನಿಷ್ಠೆಯಿಂದ ನಡೆಸಿಕೊಂಡು ಬರುವುದಲ್ಲದೆ ಮಕ್ಕಳಿಂದಲೂ ಕಡ್ಡಾಯವಾಗಿ ಮಾಡಿಸಬೇಕು. ನಿತ್ಯ ಸ್ನಾನ, ದೇವರ ಪೂಜೆ, ಮಠ ಮಂದಿರಗಳ ಸಂದರ್ಶನ, ಧಾರ್ಮಿಕ-ಆಧ್ಯಾತ್ಮಿಕ ಅನುಷ್ಠಾನಗಳಲ್ಲಿ ಸಮರ್ಪಕವಾದ ಪಾಲ್ಗೊಳ್ಳುವಿಕೆ ಇತ್ಯಾದಿಗಳನ್ನು ಮಕ್ಕಳು ಚಿಕ್ಕವರಿರುವಾಗಲೇ ಶ್ರದ್ಧೆಯಿಂದ ಮಾಡಿಕೊಂಡು ಬರಬೇಕು. ಆಧುನಿಕ ಅನಗತ್ಯ ಸವಲತ್ತುಗಳನ್ನು ಕಡಿಮೆಮಾಡಬೇಕು. ಮನೆಯ ಶಿಸ್ತು ನಿಯಮಗಳನ್ನು ಮಕ್ಕಳು ಒಂದು ದಿನವೂ ತಪ್ಪಿಸಿಕೊಳ್ಳಲು ಬಿಡಬಾರದು. ತಪ್ಪಿದರೆ ಸಂದರ್ಭೋಚಿತವಾದ ಶಿಕ್ಷೆ ಮತ್ತು ಪ್ರಾಯಶ್ಚಿತ್ತಗಳ ಕಡ್ಡಾಯ ಅನುಷ್ಠಾನವಾಗಬೇಕು.

ಮನೆಯ ಕೆಲವೊಂದು ಕೆಲಸಗಳು, ಜವಾಬ್ದಾರಿಗಳನ್ನು ಮಕ್ಕಳಿಗೇ ವಹಿಸಿಕೊಡಬೇಕು. ನೆರೆಹೊರೆಯವರು ಮತ್ತು ಬಂಧುಬಾಂಧವರೊಡನೆಯ ಮಾತುಕತೆ ವ್ಯವಹಾರಗಳಲ್ಲಿ ಬೆಳೆದುನಿಂತ ಮಕ್ಕಳನ್ನೂ ಸೇರಿಸಿಕೊಳ್ಳಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ, ಹಣದ ಸಂಪಾದನೆಯೊಂದೇ ನಮ್ಮ ಜೀವನದ ಗುರಿಯಲ್ಲ, ಕೇವಲ ಮನೋರಂಜನೆಯೇ ನಮ್ಮ ಬದುಕಿನ ಧ್ಯೇಯವಲ್ಲ ಎನ್ನುವುದನ್ನು ನಮ್ಮ ಮಕ್ಕಳಿಗೆ ನಾವೇ ಮನವರಿಕೆ ಮಾಡಿಕೊಡಬೇಕು. ನಮ್ಮ ಪರಂಪರಾಗತವಾದ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳಲ್ಲಿ ನಮ್ಮಂತೆಯೇ ಅವರಿಗೆ ಶ್ರದ್ಧೆ, ಗೌರವವಿರುವಂತೆ ನೋಡಿಕೊಳ್ಳಬೇಕು. ಮತ್ತು ಯಥೋಚಿತ ದಾನಧರ್ಮಾದಿಗಳನ್ನು ಧಾರಾಳವಾಗಿ ಅವರ ಕೈಯಿಂದಲೇ ಮಾಡಿಸಬೇಕು. ಹಾಗಾದರೆ ಮಾತ್ರ ನಮ್ಮ ಮುಂದಿನ ಯುವಜನತೆಯ ಮನಸ್ಸು ಶುದ್ಧವಾಗಬಹುದು. ನಮ್ಮ ಜೀವನವೂ ಪಾವನವಾಗಬಹುದು.



# ಬೃಂದಾವನ ವಾಣಿ - ೫೦
# ಹಿನ್ನೋಟದ ಹಾದಿಯಲ್ಲಿ

KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

## ಬೃಂದಾವನ ವಾಣಿ ೫೦ರ ಸಂಚಿಕೆಗೆ ನನ್ನ ಶುಭಾಶಯಗಳು!



***ಮಲ್ಲಿಕ್ ಪ್ರಸಾದ್, ನ್ಯೂಜೆರ್ಸಿ***

ನಾನು ಬೃಂದಾವನ ಮಿಲನ ತಂಡದ ಅಧ್ಯಕ್ಷnaagi ೨೦೧೬-೧೬ರಲ್ಲಿ ಜವಾಬ್ದಾರಿ ಹೊತ್ತಿದ್ದಾಗ ಬೃಂದಾವನದ ವಾರ್ತೆಗಳು, ಸ್ಥಳೀಯ ಸುದ್ದಿಗಳು ಹಾಗು ನ್ಯೂ ಜೆರ್ಸಿಯ ಹಲವು ಬರಹಗಾರರು ಬರಹಗಳಿಗೆ ಉನ್ನತವಾದ ವೇದಿಕೆ ನೀಡಬೇಕೆಂಬ ಆಸೆಯನ್ನು ನಮ್ಮ ಸಾಹಿತ್ಯ ಬೃಂದಾವನದ ಮುಂದೆ ಇಟ್ಟೆನು. ೨೦೧೫ರ ಬೇಸಿಗೆಯಲ್ಲಿ ಬೃಂದಾವನಕ್ಕೆ ವಾಣಿ ಬೇಕೆಂಬ ವಿಚಾರ ಮಂಥನ ಆರಂಭಗೊಂಡಿತ್ತು , ಹಸುಗೂಸಾಗಿದ್ದ ಸಾಹಿತ್ಯ ಬೃಂದಾವನ'ದ ರೂವಾರಿ ಹೊತ್ತ ಸತ್ಯ ಪ್ರಸಾದ್'ರ ಮನೆಯಲ್ಲಿ ನಾನು, ಅಶೋಕ್ ಕಟ್ಟಿಮನಿ, ದಾಶರಥಿ ಗಟ್ಟು , ಸರಿತಾ ನವಲಿ ಮತ್ತು ಅಹೀಶ್ ಭಾರದ್ವಾಜ್ ಒಂದುಗೂಡಿ ನವೆಂಬರ್ 1, 2015 ರಂದು ಬೃಂದಾವನ ವಾಣಿಯ ಮೊದಲ ಸಂಚಿಕೆ ತೀರ್ಮಾನಿಸಿದೆವು; ಬೃಂದಾವನ ವಾಣಿಯ ಮೊದಲ ಸಂಪುಟ ಸಂಚಿಕೆ ಜೋಗ ಜಲಪಾತ ಮುಖ ಪುಟ ಹೊತ್ತ ಉದಯವಾಯಿತು.

ಮೊದಲ ೨ ವರುಷ ವಾಣಿ ಜವಾಬ್ದಾರಿ ಹೊತ್ತು ಪುಟಾಣಿ ಸಸಿಯನ್ನು ಪೋಷಿಸಿದ ಸಂಪಾದಕೀಯ ವರ್ಗ ಸತ್ಯ ಪ್ರಸಾದ್, ಸರಿತಾ ನವಲಿ , ಅಹೀಶ್ ಭಾರದ್ವಾಜ್ , ಅಶೋಕ್ ಕಟ್ಟಿಮನಿ , ಕಾವ್ಯ ಕಡಮೆ, ರಾಘವೇಂದ್ರ ಕುಂದಲಗುರ್ಕಿ ಮತ್ತು ಕೇಶವ್ ಪ್ರಶಾಂತ್ ನನ್ನ ಕೃತಜ್ಞತೆಗಳು.

ಬೃಂದಾವನ ವಾಣಿಯನ್ನು ತದನಂತರ ಪೋಷಿಸಿ, ಬೆಳೆಸಿದ ಪ್ರತಿಯೊಂದು ತಂಡಕ್ಕೆ , ಅವರ ಸಂಪಾದಕೀಯ ವೃಂದಕ್ಕೆ ನಾನು ಋಣಿ. ಬೃಂದಾವನ ಅಂತರ್ಜಾಲ ತಾಣ (ವೆಬ್ಸೈಟ್) ರೆಡಿಸೈನ್ ಮಾಡಿ, ಬೃಂದಾವನ ವಾಣಿಗೆ ಪ್ರತ್ಯೇಕ ಛಾವಣಿ ಕೊಟ್ಟು ಎಲ್ಲಾ ಸಂಚಿಕೆಗಳನ್ನು ಒಟ್ಟಿಗೆ ತಂದ ಪ್ರಗತಿ ತಂಡದ ರೂವಾರಿ ಪದ್ಮಿನಿ ಮತ್ತು ಜವಾಬ್ದಾರಿ ಹೊತ್ತ ಪ್ರಶಾಂತ್ ಮುರುಗೇಂದ್ರಪ್ಪ ನವರಿಗೂ ನನ್ನ ವಂದನೆಗಳು. (https://brindavana.org/brindavanavani/ )

ವಿಶ್ವದಾದ್ಯಂತ ಸಾವಿರಾರು ಓದುಗರರನ್ನು, ಅನುಯಾಯಿಗಳನ್ನು ಹೊಂದಿರುವ ನಮ್ಮ ಬೃಂದಾವನ ವಾಣಿ ಕನ್ನಡ ಸಾಹಿತ್ಯಕ್ಕೆ ಒಂದು ಮೇರು ಅಮೇರಿಗನ್ನಡಂ ಹೆಮ್ಮೆರವಾಗುತ್ತದೆ ಎಂಬುದು ನನ್ನ ಆಶಯ. ಇಂದಿಗೆ ೫೦ನೇ ಸಂಚಿಕೆ ಮೈಲಿಗಲ್ಲು ಮುಟ್ಟಿರುವುದು ಹೆಮ್ಮೆಯ ವಿಷಯ ! ಹೀಗೆ ಹಲವಾರು ಉತ್ಕೃಷ್ಟವಾದ ವಾಣಿ ಸಂಚಿಕೆಗಳು ಮೂಡಿ ಬರಲಿ ಎಂಬುದೇ ನಮ್ಮ ಆಶಯ... ೫೦ ಮುಟ್ಟಿತು, ೧೦೦ ರ ಸಂಚಿಕೆಗೆ ನಿಮ್ಮೆಲ್ಲರ ಜೊತೆ ಎದುರು ನೋಡುತ್ತಿರುವೆ

## ಬೃಂದಾವನ ವಾಣಿಯೆಂಬ ಕನ್ನಡದ ತೇರು!



**ಸರಿತಾ ನವಲಿ,** *ನ್ಯೂಜೆರ್ಸಿ*

ನ್ಯೂಜೆರ್ಸಿಯ 'ಬೃಂದಾವನ' ಕನ್ನಡ ಕೂಟದ ಪರವಾಗಿ, ಕನ್ನಡದ ಸಾಹಿತ್ಯ ಸೇವೆಯನ್ನು ಧ್ಯೇಯವಾಗಿಸಿಕೊಂಡು ನವೆಂಬರ್ 1, 2015 ರಂದು ಪ್ರಾರಂಭವಾದ ದ್ವೈಮಾಸಿಕ ಪತ್ರಿಕೆ 'ಬೃಂದಾವನ ವಾಣಿ', ಪುಟ್ಟ-ಪುಟ್ಟ ಹೆಜ್ಜೆಗಳನ್ನಿಡುತ್ತ ಬೆಳೆದು ಈಗ 50 ನೇ ಸಂಚಿಕೆ ಪ್ರಕಟವಾಗುತ್ತಿರುವುದು ತುಂಬಾ ಸಂತೋಷದ ವಿಷಯ. 'ಬೃಂದಾವನ ವಾಣಿ', ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗಳಿಂದ ಅಲಂಕಾರಗೊಂಡ ಒಂದು ಸುಂದರವಾದ ರಥ. ಇದನ್ನು 'ಬೃಂದಾವನ' ಕನ್ನಡ ಕೂಟದ ಪರವಾಗಿ, ತಾಯಿ ಭುವನೇಶ್ವರಿಯನ್ನು ಪೂಜಿಸಿ, ಕನ್ನಡದ ಸೇವೆಯನ್ನು ಸಲ್ಲಿಸುತ್ತಿರುವ ತೇರು ಎನ್ನಬಹುದು.

"ಓ ಎಳೆಯಿರೋ ಕನ್ನಡದ ತೇರ ನೀವು ನಿಂತಿರುವ ನೆಲೆಗಳಿಂದ, ನಾವೆಲ್ಲರೂ ಒಂದು: ತೇರೆಳವ ಜನರು.

ಆ ಊರೊ, ಈ ಊರೊ-ಹಿಂದೆಯೋ ಮುಂದೆಯೋ ಎಲ್ಲೋಯೋ ಒಂದು ಕಡೆ ಕೈ ಹಾಕಿದವರು"

ಎನ್ನುವ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ ಕವನದ ಸಾಲುಗಳಂತೆ, ಅನಿವಾಸಿ ಕನ್ನಡಿಗರೆಂದು ಕರೆಸಿಕೊಳ್ಳುವ ನಾವೆಲ್ಲರೂ ತೇರಿನ ಹಗ್ಗ ಹಿಡಿದೋ, ಹಗ್ಗ ಹಿಡಿದವರ ಭುಜಕ್ಕೊ, ಕೈಗೊ ನಮ್ಮ ಕೈ ತಗುಲಿಸಿ ಈ 'ಬೃಂದಾವನ ವಾಣಿ' ಎನ್ನುವ ತೇರನ್ನು ಮುನ್ನಡೆಸುತ್ತ ಬಂದಿದ್ದೇವೆ. ಈಗ ಬೃಂದಾವನ ವಾಣಿ ನ್ಯೂಜೆರ್ಸಿಯ ಕನ್ನಡ ಬಳಗದ ಕನ್ನಡ ಸೇವೆಯನ್ನು ಸಾರುವ ಸುಂದರ ಮಾಧ್ಯಮವಾಗಿದೆ.

ಬೃಂದಾವನ ಕನ್ನಡ ಕೂಟದ 'ಮಿಲನ'ತಂಡದ ಸಾಹಿತ್ಯದ ನಿರ್ದೇಶಕರಾಗಿದ್ದ ಸತ್ಯಪ್ರಸಾದರವರು 2015 ರ ಅಕ್ಟೋಬರ್ ತಿಂಗಳಲ್ಲಿ ನನಗೆ ಫೋನ್ ಮಾಡಿ "ಮಿಲನ ತಂಡ ದ್ವೈಮಾಸಿಕ ಪತ್ರಿಕೆಯೊಂದನ್ನು ಹೊರತರಬೇಕೆಂಬ ಯೋಚನೆಯಲ್ಲಿದೆ, ನೀವು ಪತ್ರಿಕೆಯ ಸಂಪಾದಕಿಯಾಗಬೇಕು" ಎಂದು ವಿನಂತಿಸಿಕೊಂಡಾಗ ಕನ್ನಡ ಸಾಹಿತ್ಯ ಸೇವೆ ಮಾಡುವ ಅವಕಾಶವೊಂದು ನನಗೆ ಒದಗಿ ಬಂದದ್ದಕ್ಕಾಗಿ ಸಂತೋಷಗೊಂಡಿದ್ದೆ. ಶಾಲಾದಿನಗಳಿಂದಲೂ ಕನ್ನಡ ಭಾಷೆಯ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು, ಕನ್ನಡ ಸಾಹಿತ್ಯವನ್ನು ಓದಿಕೊಂಡು, 'ಸುಧಾ', 'ತರಂಗ' ಗಳಂತಹ ವಾರಪತ್ರಿಕೆಗಳನ್ನು, 'ಮಯೂರ', 'ತುಷಾರ' ಗಳಂತಹ ಮಾಸಪತ್ರಿಕೆಗಳನ್ನು ನಿಯಮಿತವಾಗಿ ಓದಿಕೊಂಡು ಬೆಳೆದ ನನಗೆ, ನಾನೇ ಒಂದು ಪತ್ರಿಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂಬುದು ನಿಜಕ್ಕೂ ರೋಮಾಂಚನವನ್ನುಂಟು ಮಾಡಿತ್ತು. ಆದರೂ ಹಲವಾರು ವರ್ಷಗಳಿಂದ ಅಮೆರಿಕಾದಲ್ಲಿ ನೆಲೆಸಿ, ವಿದೇಶಿ ವಾತಾವರಣಕ್ಕನುಸಾರವಾಗಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿರುವಾಗ ಇದು ಸಾಧ್ಯವೇ ಎನ್ನುವ ಪ್ರಶ್ನೆ ಮೂಡಿದಾಗ ನನ್ನ ನೆಚ್ಚಿನ ಕವಿ ಜಿ.ಎಸ್.ಶಿವರುದ್ರಪ್ಪರವರ ಕವನದ ಸಾಲುಗಳು ಉತ್ತರ ನೀಡಿದ್ದವು.

"ಎಲ್ಲಿದ್ದರು ಎಂತಿದ್ದರು ಕನ್ನಡಿಗರು ನಾವು, ದೇಶ ದೇಶಗಳ ಗಡಿಗಳ ದಾಟುತ ನೆಲೆಸಿದರೂ ನಾವು, ಭುವನತ್ರಯವೇ ಸ್ವದೇಶವೆನ್ನುತ ಬದುಕಿದರೂ ನಾವು, ಅಂತರಾಳದ ಒಂಟಿತನದೊಳಗೆ ಕಾಡುತ್ತಿದೆ ಕನ್ನಡ ನಾಡು" ಎನ್ನುವ ಕವಿಮಾತು, ಕನ್ನಡನಾಡಿನಿಂದ ದೂರವಿರುವ ನನ್ನ ಅಂತರಾಳವನ್ನು ತಟ್ಟಿತ್ತು. ದೂರ ತೀರದ, ನೋಡಿ ಅರಿಯದ-ಶೋಧಿಸದ ಜಗತ್ತಿಗೆ ಬಂದು ನೆಲೆಸಿದ ನನ್ನ ಮನಸ್ಸಿನಲ್ಲಿ ಸುಪ್ತ ಬೀಜದಂತೆ ಜೊತೆಯಾದ ಕನ್ನಡಭಾಷೆ, ಹೊಸ ಜಗತ್ತಿನಲ್ಲಿ ಮೊಳಕೆಯೊಡೆಯಲು ಅಂತರಾಳದ ಒಂಟಿತನದಲ್ಲಿ ಕಾಡುವ ಕನ್ನಡನಾಡೇ ಕಾರಣವಾಗುತ್ತದೆ ಎಂಬುದು ಮನವರಿಕೆಯಾಗಿತ್ತು. ಹೀಗೆ ಮೊಳಕೆಯೊಡೆದು, ಬೇರುಬಿಟ್ಟು, ಹಂತ-ಹಂತವಾಗಿ ಮರವಾಗಿ ಬೆಳೆದು, ಸುಂದರ ಹೂವುಗಳಿಂದ ಅಲಂಕೃತಗೊಳ್ಳುವ ಕನ್ನಡದ ವೃಕ್ಷ, ಹಲವಾರು ಕನ್ನಡದ ಮನಸ್ಸುಗಳಿಗೆ ನೆರಳು ನೀಡುವ ನೆಲೆಯಾಗುತ್ತದೆ, ಕನ್ನಡ ಭಾಷೆಯನ್ನು ಉಳಿಸಿ-ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎನ್ನುವ ಸತ್ಯವನ್ನು ನಾನು ಕಂಡುಕೊಂಡಿದ್ದೆ. ಶಾಲಾದಿನಗಳಿಂದ ಮನಸ್ಸಿನಲ್ಲಿ ಬೇರುಬಿಟ್ಟಿದ್ದ ಭಾಷಾಭಿಮಾನವೇ 'ಬೃಂದಾವನ ವಾಣಿ' ಪತ್ರಿಕೆಯ ಪರಿಕಲ್ಪನೆಯಲ್ಲಿ ಸಹಾಯಕ್ಕೆ ಬಂದಿತ್ತು. ಸಂಪಾದಕ ವರ್ಗವಾಗಿ ತಂಡವೊಂದನ್ನು ಕಟ್ಟಿಕೊಂಡಾಗ ಎಲ್ಲರಲ್ಲೂ ಅದೇ ಭಾಷಾಭಿಮಾನ ಮತ್ತು ಹುಮ್ಮಸ್ಸು ಕಂಡಿತ್ತು. ಪತ್ರಿಕೆಯ ವಿನ್ಯಾಸದ ಹಲವಾರು ವಿಷಯಗಳನ್ನು ಕಲಿತು, ಬರವಣಿಗೆಯಲ್ಲಿ ತೊಡಗಿಸಿಕೊಂಡು ಮೊದಲ ಸಂಚಿಕೆಯನ್ನು ಪ್ರಕಟಿಸಿದಾಗ ಸಿಕ್ಕ ಓದುಗರ ಮೆಚ್ಚಿಗೆ ಇಡೀ ತಂಡದ ಗೆಲುವಾಗಿತ್ತು. ಮಾತೃಭಾಷೆ ಮೂಡಿಸುವ ಆತ್ಮವಿಶ್ವಾಸದಲ್ಲಿ ಅದೆಂಥ ಶಕ್ತಿಯಿದೆ ಎನ್ನುವುದನ್ನು ಕನ್ನಡ ಸಾಹಿತ್ಯದ ಓದು ಮತ್ತು ಬರವಣಿಗೆಯಿಂದ ಕಂಡುಕೊಳ್ಳುತ್ತ ಹೋದ ನನಗೆ, 'ಬೃಂದಾವನ ವಾಣಿ' ನನ್ನ ಬರವಣಿಗೆಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎನ್ನಬಹುದು.'ಬೃಂದಾವನ ವಾಣಿ'ಯ ಕಥಾಸಮಯ ಅಂಕಣಕ್ಕೆ ಬರೆದ ಕಥೆಗಳ ಒಂದು ಕಥಾಸಂಕಲನವನ್ನು ಪ್ರಕಟಿಸಿದಾಗ ಬರಹಗಾರ್ತಿ ಎನಿಸಿಕೊಂಡಿದ್ದ ನಾನು 'ಕಥೆಗಾರ್ತಿ'ಯಾಗಿದ್ದೆ. 'ಬೃಂದಾವನ ವಾಣಿ'ಯ ಮೊದಲ ಸಂಪಾದಕಿ ಎಂದು ಕರ್ನಾಟಕದ ಬರಹಗಾರರಲ್ಲಿ ಗುರುತಿಸಿಕೊಂಡದ್ದು ಸಂತೋಷದ ವಿಷಯ.

'ಬೃಂದಾವನ ವಾಣಿ' ನ್ಯೂಜೆರ್ಸಿಯಲ್ಲಿ ಬರಹಗಾರರ ಬಳಗವನ್ನೇ ಹುಟ್ಟುಹಾಕಿದೆ ಎನ್ನುವುದು ಹೆಮ್ಮೆಪಡುವ ವಿಷಯ. ಕಳೆದ ಹತ್ತುವರ್ಷಗಳಲ್ಲಿ ಹಲವಾರು ಸ್ಥಳೀಯ ಬರಹಗಾರರು ಕಥೆ, ಕವನ, ಲೇಖನಗಳನ್ನು, ಪ್ರವಾಸ ಕಥನಗಳನ್ನು, ಅನುಭವ ಕಥನಗಳನ್ನು ಬರೆಯಲು ಪ್ರಾರಂಭಿಸಿದ್ದು ಪತ್ರಿಕೆಯೊಂದಿಗೆ ಕನ್ನಡ ಭಾಷೆಯ ಗೆಲುವೆನ್ನಬಹುದು. ನಾನು ಈ ಮೊದಲೇ ಹೇಳಿದಂತೆ, ಕನ್ನಡ ಭಾಷೆ ಸುಪ್ತ ಬೀಜದಂತೆ ಪ್ರತಿ ಕನ್ನಡಿಗನ ಮನಸ್ಸಿನಲ್ಲಿ ಜೊತೆಯಾಗಬೇಕು. ಆ ಬೀಜ ಮೊಳಕೆಯೊಡೆದು, ಬೇರುಬಿಟ್ಟು, ಹಂತ-ಹಂತವಾಗಿ ಮರವಾಗಿ ಬೆಳೆದು, ಸುಂದರ ಹೂವುಗಳಿಂದ ಅಲಂಕೃತಗೊಳ್ಳುವ ಕನ್ನಡದ ವೃಕ್ಷವಾಗಬೇಕು ಮತ್ತು ಹಲವಾರು ಕನ್ನಡದ ಮನಸ್ಸುಗಳಿಗೆ ನೆರಳು ನೀಡುವ ನೆಲೆಯಾಗಬೇಕು. ಹೀಗಾದಾಗ, ಭಾಷಾಭಿಮಾನದಿಂದ ಬೆಳೆಯುವ ಕನ್ನಡದ ವೃಕ್ಷ ಸುಂದರವಾದ ಹೂವುಗಳಿಂದ ಅಲಂಕೃತಕೊಳ್ಳುವುದಲ್ಲದೇ, ಫಲಿಸಿ ಅದೆಷ್ಟೋ ಬೀಜಗಳನ್ನು ನೀಡುತ್ತದೆ ಎಂಬ ಸಮಾಧಾನವನ್ನು ಮೂಡಿಸುತ್ತದೆ. "ಬೀಜದಿಂದ ಬೀಜಕ್ಕೆ: ಈ ನಡುವೆ ಎಷ್ಟೊಂದು ಮರ, ಎಷ್ಟು ಎಲೆ, ಎಷ್ಟು ಹೂ, ಎಷ್ಟು ಹಣ್ಣು, ಈ ಒಂದು ಬೀಜ ಕಡೆಗೂ ಮತ್ತೆ ಬೀಜವಾಗುವುದಕ್ಕೆ" ಎನ್ನುವ ಕವಿಮಾತು ಅರ್ಥ ಕಂಡುಕೊಳ್ಳುತ್ತದೆ. 'ಬೃಂದಾವನ ವಾಣಿ' ಯೆಂಬ ಕನ್ನಡದ ತೇರು ಹೆಚ್ಚು-ಹೆಚ್ಚು ಕನ್ನಡಾಭಿಮಾನದ ಹೂವು, ಹಣ್ಣುಗಳಿಂದ ಇನ್ನೂ ಸುಂದರವಾಗಿ ಅಲಂಕೃತಗೊಂಡು ಹೊರನಾಡಿನಲ್ಲಿ ಕನ್ನಡವನ್ನು ಉಳಿಸಿ-ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುವಂತಾಗಲಿ.

## ಬೃಂದಾವನ ವಾಣಿ-ನಮ್ಮೆಲ್ಲರ ಕಣ್ಮಣಿ



**ಸತೀಶ್ ಹೊಸನಗರ**, *ನ್ಯೂಜೆರ್ಸಿ,*
ಅಧ್ಯಕ್ಷರು, ಸೌರಭ ತಂಡ, 2019-2020
ವಿಶ್ವಸ್ಥ ಮಂಡಳಿಯ ಸದಸ್ಯ, 2021-2026

ಒಂದು ಸಂಸ್ಥೆಯ ಬೆಳವಣಿಗೆ, ಆಶೋತ್ತರಗಳನ್ನು ಗಮನಿಸಿದಾಗ, ಆ ಸಂಸ್ಥೆಯು ನಡೆದು ಬಂದಿ ಹಾದಿಯ ಅವಲೋಕನದಲ್ಲಿ ಮುಖ್ಯವಾದ ಪರಿಕರಗಳಲ್ಲೊಂದಾಗುವುದು ಆ ಸಂಸ್ಥೆಯ ಪ್ರಕಟಣೆಗಳು. ಈ ನಿಟ್ಟಿನಲ್ಲಿ "ಬೃಂದಾವನ ವಾಣಿ" ತನ್ನದೇ ಆದ ಮಹತ್ವವನ್ನು ಹೊಂದಿದೆ.

ನಿನ್ನೆ-ಮೊನ್ನೆ ಆರಂಭವಾದ ಈ ಪ್ರಕಟಣೆ, ಐವತ್ತನೇ ಸಂಚಿಕೆಯ ಮೂಲಕ ನಮ್ಮೆಲ್ಲರನ್ನೂ ಒಂದುಗೂಡಿಸುತ್ತಲೇ ಇದೆ. ಈ ನಿಟ್ಟಿನಲ್ಲಿ, ಪ್ರಸ್ತುತ ಸಂಪಾದಕ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಕಾರ್ಯಕರ್ತರೆಲ್ಲರಿಗೂ ಅಭಿನಂದನೆಗಳು! ಈ ಸಂದರ್ಭದಲ್ಲಿ ಬೃಂದಾವನದ 20ನೇ ವಾರ್ಷಿಕೋತ್ಸದ ಸುಸಂದರ್ಭದಲ್ಲಿ ಪ್ರಕಟಣೆಗೊಳ್ಳುತ್ತಿರುವ 50ನೇ ಸಂಚಿಕೆ, ನಮ್ಮ ಸಂಸ್ಥೆಯ ಮುಖ್ಯ ಮೈಲಿಗಲ್ಲುಗಳಲ್ಲೊಂದು!


ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ-ಬೃಂದಾವನ, ಹೆಸರಿನಲ್ಲಿ ಹೇಗೆ ವಿಶೇಷವನ್ನು ಹೊಂದಿದೆಯೋ, ಹಾಗೆಯೇ ಅದರ ಪ್ರಕಟಣೆಗಳಲ್ಲೂ ಕೂಡ ವಿಶೇಷತೆಯನ್ನು ಪ್ರದರ್ಶಿಸುತ್ತಲೇ ಬಂದಿದೆ. ಈ ಸಂಸ್ಥೆಯ ಪ್ರಕಟಣೆಗಳಲ್ಲಿ, "ವನವಾಣಿ" ಮತ್ತು "ಬೃಂದಾವನ ವಾಣಿ" ಮುಖ್ಯವಾದವುಗಳು. ವನವಾಣಿ ಎರಡು ವರ್ಷಕ್ಕೊಮ್ಮೆ ಪ್ರಕಟವಾಗುತ್ತ ಬಂದು ಪ್ರತಿಯೊಂದು ಕಾರ್ಯಕಾರಿ ತಂಡದ ಆಗುಹೋಗುಗಳ ಹಿರಿಮೆಯನ್ನು ಎತ್ತಿ ಹಿಡಿದು, ಎರಡು ವರ್ಷಗಳ ಸ್ಮರಣೆಯನ್ನು ಚಿರಂತನವಾಗಿರಿಸುವ ಸ್ಮರಣ ಸಂಚಿಕೆಯಾದರೆ, ಪ್ರತಿ ಋತುವಿನ ಬದಲಾವಣೆಗೆ ಹೊಂದಿಕೊಂಡು ಬೃಂದಾವನದ ಅಂದಿನಂದಿನ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ಆನ್‌ಲೈನ್ ಪತ್ರಿಕೆ, ಬೃಂದಾವನ ವಾಣಿ. ಈ ಎರಡೂ ಪ್ರಕಟಣೆಗಳಿಗೆ ಅವುಗಳದ್ದೇ ಆದ ಪ್ರಾಮುಖ್ಯತೆ ಇದೆ. ಒಂದು ಕಾಲದಲ್ಲಿ ಕೆಲವೇ ಕೆಲವು ಪುಟಗಳಿಗೆ ಸೀಮಿತವಾಗಿದ್ದ ಈ ಪ್ರಕಟಣೆಗಳು, ಇಂದು ವರ್ಣರಂಜಿತ ಮುಖಪುಟಗಳಿಂದ ಹಿಡಿದು, ನಮ್ಮ ಸಮುದಾಯದ ಅಂತಃಸತ್ವಗಳನ್ನು ಸದಾ ತಮ್ಮ ಶ್ರೀಮಂತವಾದ ಪುಟಗಳಲ್ಲಿ ಹಿಡಿದುಕೊಂಡು, ಆ ಸುಮಧುರ ನೆನಪುಗಳನ್ನು, ಅವು ಎಂದೆಂದೂ ಜೀವಂತವಾಗಿರುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ.

ಬೃಂದಾವನ ವಾಣಿಯ ಪ್ರತಿಯೊಂದು ಸಂಚಿಕೆಯ ಹಿಂದೆ, ಅಪಾರವಾದ ಪರಿಶ್ರಮ, ಮತ್ತು ಸಾಕಷ್ಟು ಚಿಂತನೆಗಳಿರುವುದನ್ನು ನಾವು ಗಮನಿಸಬಹುದು. ಎಲ್ಲಕ್ಕೂ ಮುಖ್ಯವಾಗಿ, ಒಂದಕ್ಕಿಂತ ಮತ್ತೊಂದು ಸಂಚಿಕೆಯನ್ನು ಹೆಚ್ಚು ಶ್ರೀಮಂತಗೊಳಿಸುವ ಸಂಕಲ್ಪ (ಡಿಸೈನ್) ಮತ್ತು ಬರಹಗಳ ಮುಖೇನ ನಾವೀನ್ಯತೆ (ಇನ್ನೋವೇಷನ್) ಯನ್ನು ಉತ್ತುಂಗಕ್ಕೆ ಏರಿಸುವ ಪರಿಶ್ರಮವನ್ನು ಎಲ್ಲ ತಂಡಗಳೂ ಕೂಡ ಮಾಡಿವೆ. ಈ ನಿಟ್ಟಿನಲ್ಲಿ, ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಪರಿಶ್ರಮಕ್ಕೆ ತಮ್ಮನ್ನು ತೊಡಗಿಸಿಕೊಂಡು ಮಾರ್ಗದರ್ಶನವನ್ನು ನೀಡಿದ ಸಂಪಾದಕರುಗಳಿಗೆ, ಡಿಸೈನರುಗಳಿಗೆ, ಮತ್ತು ಓದುಗ-ಬರಹಗಾರರಿಗೆಲ್ಲ ಅನಂತ ನಮನಗಳು.

2019-20ರ ಅವಧಿಯಲ್ಲಿ ಬೃಂದಾವನದ ಕಾರ್ಯ ಚಟುವಟಿಕೆಗಳನ್ನು ನಡೆಸಿದ "ಸೌರಭ ತಂಡ"ದ ಚುಕ್ಕಾಣಿಯನ್ನು ಹಿಡಿದು ಮುನ್ನಡೆಸುವ ಅವಕಾಶ ಸಿಕ್ಕಿದ್ದು ನನಗೊದಗಿದ ಸುಯೋಗ. ಈ ಎರಡು ವರ್ಷಗಳಲ್ಲಿ ಪ್ರಕಟಗೊಂಡ, 20 ರಿಂದ 31ರ ಸಂಚಿಕೆಗಳನ್ನು ತಮ್ಮ ಮಾರ್ಗದರ್ಶನದಲ್ಲಿ ಸುಸೂತ್ರವಾಗಿ ಪ್ರಕಟಿಸಿದ ಕೀರ್ತಿ ನಮ್ಮ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀವಿದ್ಯಾ ಪ್ರಶಾಂತ್, ದಾಶರಥಿ ಘಟ್ಟು, ಅಜೇಯ ರಾವ್, ರಘುರಾಮ್ ರಾಯಸಂ, ಲಕ್ಷ್ಮೀ ಕೋಲಾಲ್ ಮತ್ತು ಪ್ರಶಾಂತ್ ಶ್ರೀನಿವಾಸ್ ಅವರಿಗೆ ಸಲ್ಲುತ್ತದೆ. ಜೊತೆಗೆ ಜನವರಿ 2019ರಿಂದ ಬೃಂದಾವನ ವಾಣಿಯ ಸಂಚಿಕೆಗಳ ವಿನ್ಯಾಸ ಮತ್ತು ಪರಿಕಲ್ಪನೆಗೆ ಕೈ ಜೋಡಿಸಿದ ಅಹೀಶ್ ಭಾರದ್ವಾಜ್ ಮತ್ತು ಸರಿತಾ ನವಲಿಯವರನ್ನು ಕೂಡ ಈ ಸಂದರ್ಭದಲ್ಲಿ ಸ್ಮರಿಸಬೇಕಾಗುತ್ತದೆ. 2020 ಒಂದು ವಿಶೇಷವಾದ ವರ್ಷ, ನಮ್ಮೆಲ್ಲರನ್ನೂ ಕೋವಿಡ್ ಮಹಾಮಾರಿ ಕಟ್ಟಿಹಾಕಿದ್ದರೂ ಕೂಡ, ಈ ತಂಡ ತಮ್ಮ ಕ್ರಿಯಾಶೀಲತೆಗಾಗಲೀ, ಸೃಜನಶೀಲತೆಯಲ್ಲಾಗಲೀ ಯಾವ ರೀತಿಯಿಂದಲೂ ಲೋಪಮಾಡಿಕೊಳ್ಳದೇ ನಿರಂತರವಾಗಿ ಸಂಚಿಕೆಗಳನ್ನು ಹೊರತರುವುದಷ್ಟೇ ಅಲ್ಲ, ಈ ಸಂಚಿಕೆಗಳ ಮುಖೇನ ನಮ್ಮ ಸಮುದಾಯದ ಚಿಂತನಶೀಲತೆಯನ್ನು ಕಾಪಾಡಿಕೊಂಡು ಬಂದಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರತಿಯೊಂದು ತಂಡವೂ ಸಹ ಬೃಂದಾವನ ವಾಣಿಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತಲೇ ಇದೆ. ಈಗ ಐವತ್ತನೇ ಆವೃತ್ತಿಯನ್ನು ಪಡೆದು ಆಕರ್ಷಕ ಮುಖಪುಟವನ್ನು ಹೊತ್ತುಕೊಂಡು ಸುಂದರವಾಗಿ ಮೈಗೂಡಿ ಪ್ರಕಟಗೊಳ್ಳುತ್ತಿರುವ 50ನೇ ಸಂಚಿಕೆಯನ್ನು ನಾವೆಲ್ಲರೂ ಸ್ವಾಗತಿಸೋಣ. ನಮ್ಮ ಉತ್ಸಾಹದ ಆಲೋಚನೆಗಳು, ಹಾಗೂ ಉತ್ಕಟವಾದ ಚಿಂತನೆಗಳು ಈ ಪ್ರಕಟಣೆಗಳ ಮೂಲಕ ಎಂದೆಂದೂ ಚಿರಾಯುವಾಗಿ ಮೂಡಿಬರುತ್ತಿರಲಿ!

## ಅಭಿನಂದನೆಗಳು !



**ದಾಶರಥಿ ಘಟ್ಟು**, *ನ್ಯೂಜೆರ್ಸಿ,*

ಬೃಂದಾವನ ವಾಣಿಯ ಐವತ್ತರ ಸಂಭ್ರಮದಲ್ಲಿ, ನನ್ನ "ಈ-ಮೇಲ್" ನಲ್ಲಿ ಸ್ವಲ್ಪ ಹುಡುಕಾಟ ಮಾಡಿ ನೋಡಿದೆ. ವಾಣಿಯ ಮೊದಲ ಸಂಚಿಕೆ ಪ್ರಕಟವಾಗಿದ್ದು ನವೆಂಬರ್ ೨೦೧೫. ನವೆಂಬರಿನಲ್ಲಿ ಬರುವ ಕನ್ನಡ ರಾಜ್ಯೋತ್ಸವಕ್ಕೆ ತಾಳೆ ಹೊಂದುವಂತೆ ಆಗಿನ ಪದಾಧಿಕಾರಿಗಳು ಮೊದಲ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಬೃಂದಾವನ ವಾಣಿಯನ್ನು ಪ್ರಾರಂಭಿಸಲು ಆಗಿನ ಪದಾಧಿಕಾರಿಗಳು ಎಷ್ಟು ಕಷ್ಟ ಪಟ್ಟಿದ್ದಾರೆನ್ನುವುದನ್ನು ನೋಡಿದ್ದೇನೆ. ಏಕೆಂದರೆ ಒಂದು ಸಾಹಿತ್ಯಿಕ ಸಂಚಿಕೆಯನ್ನು ತರುವುದು ಅಷ್ಟೇನೂ ಸುಲಭದ ಕೆಲಸ ಅಲ್ಲ. ದರ್ಪಣ ಎಂಬ ಒಂದು ಸಣ್ಣ "ಈ"-ಮಾಸ ಪತ್ರಿಕೆಯಲ್ಲಿ ಸ್ವಲ್ಪ ಮಟ್ಟಿಗೆ ತೊಡಗಿಸಿಕೊಂಡಿರುವ ನನಗೆ ಅದರ ಕಷ್ಟಗಳು ಗೊತ್ತಿದೆ. ಬರಹಗಾರರನ್ನು ಸಂಪರ್ಕಿಸಿ, ಏನನ್ನಾದರೂ ಬರೆಯಿರಿ ಎಂದು ಅವರನ್ನು ಪೀಡಿಸುವುದರಿಂದ ಹಿಡಿದು, ಲೇಖನಗಳು ಬಂದ ಮೇಲೆ ಅವುಗಳನ್ನು ವಿಂಗಡಿಸುವುದು, ಪ್ರೂಫ್ ರೀಡ್ ಮಾಡುವುದು, ಟೈಪೋಗಳನ್ನು ಸರಿಪಡಿಸುವುದು-ಇವುಗಳಲ್ಲದೆ, ಪತ್ರಿಕೆಯ ವಿನ್ಯಾಸ, ಲೇಖನಕ್ಕೆ ಅಥವಾ ಕವನಗಳಿಗೆ ತಕ್ಕ ರೇಖಾ ಚಿತ್ರಗಳನ್ನು ಬರೆಯುು/ಬರೆಸು-ವುದು ಅಥವಾ ವಿಷಯಕ್ಕೆ ಇಂಬು ಕೊಡುವಂತಹ ಚಿತ್ರಗಳನ್ನು ಹುಡುಕಿ ಆರಿಸುವುದು, ಖಾಲಿ ಜಾಗಗಳನ್ನು ಆಸಕ್ತಿಕರ ವಿಷಯ ಅಥವಾ ಚಿತ್ರಗಳಿಂದ ತುಂಬುವ ಕಸರತ್ತು... ಕೆಲಸಗಳನ್ನು ಪಟ್ಟಿ ಮಾಡುತ್ತಾ ಹೋದರೆ ಕೊನೆಯೇ ಇಲ್ಲ. ಸಂಪಾದಕ ಮಂಡಳಿ ಎಷ್ಟು ಸಮಯವನ್ನು ಇದಕ್ಕಾಗಿ ವ್ಯಯಿಸುತ್ತದೆ ಎಂಬುದನ್ನು, ಇಂತಹ ಪ್ರಯೋಗಗಳಲ್ಲಿ ಕೆಲಸ ಮಾಡಿದವರಷ್ಟೇ ಅರಿತುಕೊಳ್ಳ ಬಲ್ಲರು.


ಬೃಂದಾವನ ವಾಣಿಯ ಮೊದಲ ಸಂಚಿಕೆಯೇ ತನ್ನ ಸಮೃದ್ಧ ಪರಿವಿಡಿ ಮತ್ತು ವಿಷಯ ವೈವಿಧ್ಯಗಳಿಂದ ಓದುಗರನ್ನು ಸೆಳೆಯಿತೆಂದು ನನ್ನ ಅನಿಸಿಕೆ. ಅಲ್ಲದೆ ಮೊದಲ ಸಂಚಿಕೆಗೆ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ|| ಚಂದ್ರಶೇಖರ ಕಂಬಾರ, ಹನಿಗವನದ ಡುಂಡಿರಾಜ್, ಕಲಾವಿದರಾದ ಶ್ರೀನಿವಾಸ್ ಕಪ್ಪಣ್ಣ ಮತ್ತು ಟಿ ಎನ್ ಸೀತಾರಾಮ್, ಅಮೆರಿಕನ್ನಡದ ಪ್ರತಿಭೆಗಳಾದ ಮೈ ಶ್ರೀ ನಟರಾಜ್ ಮತ್ತು ಶ್ರೀವತ್ಸ ಜೋಶಿಯವರ ಶುಭ ಹಾರೈಕೆಗಳನ್ನು ಗಳಿಸಿಕೊಂಡ ಸಂಪಾದಕ ಮಂಡಳಿಯ ಶ್ರಮ ಶ್ಲಾಘನೀಯ. ಮೊದಲ ಸಂಚಿಕೆಯನ್ನೇ ಮತ್ತೊಮ್ಮೆ ತಿರುವಿ ಹಾಕಿದಾಗ ನಿಮಗೆ ಏನೆಲ್ಲಾ ಕಾಣುತ್ತದೆ? ಬೃಂದಾವನದಲ್ಲಿ ನಡೆದ ಕಾರ್ಯಕ್ರಮಗಳ ಪರಿಚಯ, ಕಥೆ, ಕವನ, ಲೇಖನಗಳು, ಮಕ್ಕಳ ಪುಟ, ವನಿತೆಯರಿಗಾಗಿ ಮನೆ ಮದ್ದು, ಸವಿರುಚಿ, ಕ್ರೀಡಾ ಪ್ರತಿಭೆಯ ಪರಿಚಯ... ಹೀಗೆ ಒಂದು ಪರಿಪೂರ್ಣ ಸಾಹಿತ್ಯ ಪತ್ರಿಕೆಯ ಎಲ್ಲ ಅಂಶಗಳೂ ಅಲ್ಲಿದೆ.

ವಾರ ಪತ್ರಿಕೆಯನ್ನೋ, ಮಾಸಿಕವನ್ನೋ ಪ್ರಾರಂಭಿಸುವುದೇನೋ ಸುಲಭ. ಇಡೀ ತಂಡ ಮೊದ ಮೊದಲು ಉತ್ಸಾಹದಿಂದ ಕೆಲಸ ಮಾಡುವುದರಿಂದ ಮೊದಲ ಕೆಲ ಸಂಚಿಕೆಗಳು ಸರಾಗವಾಗಿಯೇ ಬರುತ್ತವೆ. ಆದರೆ ಕಾಲ ಕಳೆದಂತೆ ಉತ್ಸಾಹ ಕಡಿಮೆಯಾಗುತ್ತಾ, ಸಂಚಿಕೆಯನ್ನು ನೆನೆಸಿಕೊಂಡರೆ ರೇಜಿಗೆ ಶುರುವಾಗುತ್ತದೆ. ಏಕೆಂದರೆ, ಇದು ವಾಲೆಂಟರಿಯಾಗಿ ಮಾಡುತ್ತಿರುವ ಕೆಲಸ. ಸಂಪಾದಕ ಮಂಡಳಿಯ ಎಲ್ಲರೂ ಅವರವರ "ಡೇ ಜಾಬು"ಗಳಲ್ಲಿ ಹೈರಾಣಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಬೃಂದಾವನ ವಾಣಿ ೫೦ನೇ ಸಂಚಿಕೆಗೆ ಕಾಲಿಟ್ಟಿರುವುದು ಅತ್ಯಂತ ಅಭಿನಂದನಾರ್ಹ ಸಂಗತಿ.

ನಾನು ಎಲ್ಲ ಸಂಚಿಕೆಗಳನ್ನೂ ಪೂರ್ತಿಯಾಗಿ ಓದಿಲ್ಲದಿದ್ದರೂ, ಎಲ್ಲದರ ವಿನ್ಯಾಸ, ವಿಷಯ ವ್ಯಾಪ್ತಿಗಳನ್ನು ನೋಡಿದ್ದೇನೆ. ಪ್ರತಿ ಸಂಚಿಕೆಯಲ್ಲೂ ಹೊಸ ವಿನ್ಯಾಸಗಳನ್ನೂ, ಹೊಸ ಪ್ರಯೋಗಗಳನ್ನೂ, ಹೊಸ ಪ್ರಯತ್ನಗಳನ್ನೂ ಕಾಣುತ್ತಿದ್ದೇನೆ. ಪ್ರತಿ ಸಂಚಿಕೆಯೂ ನನ್ನ ಮಟ್ಟಿಗೆ ಪ್ರಸವ ವೇದನೆಯೇ! "ನಡು ರಾತ್ರಿಯ ದೀಪ ಉರಿಸುವ" (ಬರ್ನಿಂಗ್ ಮಿಡ್ ನೈಟ್ ಆಯಿಲ್) ಸಂಪಾದಕ ಮಂಡಳಿಯ ಪ್ರತಿಯೊಬ್ಬರೂ ಇದನ್ನು ಅನುಭವಿಸಿರುತ್ತಾರೆ. "ಈ ರೇಜಿಗೆಗೆ ಇನ್ನು ಅಂತ್ಯ ಹಾಡಿ ಬಿಡಬೇಕು. ಸಾಕಾಯ್ತು, ಈ ಕೆಲಸ ಮಾಡಿ" ಎಂದು ಕೊಂಡವರೇ, ಸಂಚಿಕೆ ಹೊರಬಂದು ಓದುಗರ ಕೈ ಸೇರಿದಾಗ ಧನ್ಯತಾ ಭಾವದಿಂದ ಪುಳಕಿತರಾಗಿರುತ್ತಾರೆ.

ಐವತ್ತು ಸಂಚಿಕೆಗಳ ಸುಧೀರ್ಘ ಪಥದಲ್ಲಿ ಬೃಂದಾವನ ವಾಣಿಯನ್ನು ಒಂದಕ್ಕಿಂತ ಇನ್ನೊಂದು ಸೈ ಎನ್ನುವಂತೆ ರೂಪಿಸಿ, ವಿನ್ಯಾಸ ಮಾಡಿ, ನಮ್ಮಗಳ ಕೈಸೇರುವಂತೆ ಮಾಡುತ್ತಿರುವ ಬೃಂದಾವನ ತಂಡಗಳಿಗೆ ಮತ್ತು ಅವಿರತವಾಗಿ ನಡೆಸಿಕೊಂಡು ಬರುತ್ತಿರುವ ಸಂಪಾದ ವರ್ಗಕ್ಕೆ ಅಭಿನಂದನೆಗಳನ್ನು ತಿಳಿಸುತ್ತೇನೆ.

# ಬೃಂದಾವನ ವಾಣಿಯ ಸುವರ್ಣ ಸಂಭ್ರಮ



***ರಾಘವೇಂದ್ರ ಕುಂದಲಗುರ್ಕಿ***, *ನ್ಯೂಜೆರ್ಸಿ*

ನಮಸ್ಕಾರಗಳು,

ಸಂಭ್ರಮ , ಸಂಭ್ರಮ , ಸಂಭ್ರಮ ...ಬೃಂದಾವನ ವಾಣಿಗೆ 50ರ ಸಂಭ್ರಮ!!! ಸುವರ್ಣ ಸಂಚಿಕೆಯ ಈ ವಾಣಿಗೆ ನಿಮ್ಮೆಲ್ಲರಿಗೂ ಸುಸ್ವಾಗತ.

ಕಳೆದ ಹತ್ತು ವರ್ಷಗಳಲ್ಲಿ ಅಕ್ಷರ ಭಂಡಾರದಿಂದ ಹೊರಟ ಸಾಹಿತ್ಯ ಪಯಣ , ಬೃಂದಾವನ ಸಾಹಿತ್ಯಾಸಕ್ತರ " ಬೃಂದಾವನ ವಾಣಿ " ಆಗಿ ಐವತ್ತರ ಸಂಚಿಕೆಯ ಆವೃತ್ತಿಯಲ್ಲಿ ಹರಿಯುತಿದೆ. ನೆನಪಾಗುವ ಹಾಡು ರಾಷ್ಟ್ರ ಕವಿ ಕುವೆಂಪು ಅವರ
"ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!".

ಈಗಿರುವ ಸಾಮಾಜಿಕ ತಾಣಗಳ ಮಧ್ಯೆ ಒಂದು ಕನ್ನಡ ತ್ರೈ ಮಾಸ ಪತ್ರಿಕೆ ತರುವುದು , 10 ವರ್ಷಗಳ ಕಾಲ ಸತತವಾಗಿ ನಡೆಸಿಕೊಂಡು , ಉಳಿಸಿ , ಬೆಳಿಸುವುದು ಕಷ್ಟದ ಕೆಲಸವೆ !! ಅದೂ ವಿದೇಶದಲ್ಲಿ ಕನ್ನಡ ಸದಭಿರುಚಿಯ ಕನ್ನಡಿಗರಿಗಾಗಿ , ಕನ್ನಡ ದವರಿಂದ ಆದ ಈ ಬೃಂದಾವನ ಕನ್ನಡ ಸಂಸ್ಥೆಯ ಮುಖವಾಣಿಯಾಗಿ ಮೂಡುತ್ತಿರುವುದು ಎಲ್ಲರಿಗೂ ಹೆಮ್ಮೆಯ ವಿಷಯ. ಈ ಸಾಧನೆಗೆ ನಿಮ್ಮೆಲ್ಲರ ಕೊಡುಗೆ ಅಪಾರ. ನಿಮ್ಮ ಪ್ರೀತಿ , ಅಭಿಮಾನ ಪೂರ್ವಕ ಅಂಕಣಗಳು ,ಲೇಖನಗಳು , ಕಥೆ , ಕವನ , ಪ್ರವಾಸ ಅನುಭವ ಎಲ್ಲರೊಂದಿಗೆ ಹಂಚಿಕೊಂಡು , ವಾಣಿಯ ಭಾಗೀದಾರರಾಗಿ , ಈ ಕನ್ನಡ ಸೇವೆಗೆ ನಿಮ್ಮೆಲ್ಲರಿಗೂ ಅಭಿಮಾನಿ ಪೂರ್ವಕ ಧನ್ಯವಾದಗಳು.

ಮೊದಲ ಸಂಚಿಕೆಯ ಸಮಯ , ವಾಣಿಯ ಕಾತರತೆ ಏಲ್ಲರಲ್ಲೂ ಮೂಡಿತ್ತು , ಹೊಸ ಹುರುಪು , ಹೊಸ ಮೊನ್ನೋಟ ಎಲ್ಲಕ್ಕಿಂತ ಹೆಚ್ಚಾಗಿ ಯಾವ ರೂಪು /ರೇಷೆಯೊಂದಿಗೆ ಈ ದ್ವೈಮಾಸಿಕ ಪತ್ರಿಕೆ ಬರಲಿದೆ ಎಂಬ ಕಾತರ. ಸಂಪಾದಕೀಯ ತಂಡದಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ವಿಭಾಗದ ಹೊಣೆ , ಪತ್ರಿಕೆ ಪೂರ್ಣ ಕನ್ನಡದಲ್ಲಿರಬೇಕು , ಸಂಪೂರ್ಣ ಹೊಣೆಗಾರಿಕೆ ಪತ್ರಿಕೆಯ ಸಂಪಾದಕ ಮಂಡಳಿಗಿರಬೇಕು , ಯಾವುದೇ ಜಾಹಿರಾತು ಇರಬಾರದು ಇನ್ನು ಹಲವಾರು ಧ್ಯೇಯಗಳು. ಯಾವ ಕನ್ನಡ ಮಾಸ ಪತ್ರಿಕೆಗೂ ಕಡಿಮೆ ಅನ್ನದಂತ ಒಂದು ಅನಿವಾಸಿ ತಂಡದ ಪತ್ರಿಕೆ ನಮ್ಮ ಬೃಂದಾವನ ಮುಖವಾಣಿಯಾಗಬೇಕು ಎನ್ನುವ ಹಂಬಲ ಎಲ್ಲ ಓದುಗರ ಬಳಗದಲ್ಲಿತ್ತು . ಎಲ್ಲಕಿಂತ ಹೆಚ್ಚಾಗಿ ಪತ್ರಿಕೆಯಲ್ಲಿ ಕನ್ನಡದ ತಪ್ಪುಗಳ ಎಣಿಕೆ ಕಮ್ಮಿಯಾಗಿರಬೇಕು , ಓದುಗರ ಮನ ಮುಟ್ಟಬೇಕು ಎನ್ನುವ ಛಲ , ಹಲವಾರು ವಾರಗಳ ಪರಿಶ್ರಮ ,ನಾಲ್ವಡಿ ಕೃಷ್ಣರಾಜ ಒಡೆಯರ ಮುಖ ಪುಟದೊಂದಿಗೆ ಸಂಚಿಕೆ ನವೆಂಬರ್ ಒಂದರಂದು , ಕನ್ನಡ ರಾಜ್ಯೋತ್ಸವದ ದ್ಯುತಕವಾಗಿ ಬಿಡುಗಡೆ ಹೊಂದಿದಾಗ ಏನೋ ಒಂದು ಧನ್ಯತಾಭಾವ. ಅಂದಿನ ಮಿಲನ ತಂಡದ ಅಧ್ಯಕ್ಷರಾದ ಮಲ್ಲಿಕ್ ಪ್ರಸಾದ್ , ಸಾಹಿತ್ಯ ನಿರ್ದೇಶಕರಾದ ಸತ್ಯ ಪ್ರಸಾದ್ , ಕಾರ್ಯದರ್ಶಿ ಅಶೋಕ್ ಕಟ್ಟಿಮನಿ , ಮುಖ್ಯ ಸಂಪಾದಕಿ ಸರಿತಾ ನವಲಿ ಹಾಗು ವಿನ್ಯಾಸಕ ಅಹೀಶ್ ಭಾರಧ್ವಾಜ್ ರೊಡಗೂಡಿ ಮೂಡಿ ಬಂದ ನಮ್ಮೆಲ್ಲರ ಬೃಂದಾವನ ವಾಣಿಗೆ 50ರ ಸಂಭ್ರಮದಲ್ಲೂ ಪತ್ರಿಕೆಯ ಮುಖ್ಯ ಸಂಪಾದಕನಾಗಿರುವುದು ನನಗೆ ಒಂದು ಭಾಗ್ಯವೇ ಸರಿ. ಈ ನನ್ನ ಐದು ವರ್ಷದ ವಾಣಿಯ ಸಾಹಿತ್ಯ ಕೃಷಿಗೆ ನಿಮ್ಮೆಲ್ಲರ ಸಹಕಾರ , ಭಾಗಿತ್ವವೇ ಮುಖ್ಯ ಕಾರಣ.

ಕಳೆದ ದಶಕದಲ್ಲಿ ವಾಣಿಯ ತೇರನ್ನು ಎಳೆದವರು ಹಲವಾರು ಸಾಹಿತ್ಯ ನಿರ್ದೇಶಕರು , ವಾಣಿ ಸಂಪಾದಕರು ಹಾಗು ಸಂಪಾದಕ ತಂಡದವರು , ಎಲ್ಲಕಿಂತ ಹೆಚ್ಚಾಗಿ ಬೃಂದಾವನ ಅಧ್ಯಕ್ಷರು ಎಲ್ಲರಿಗೂ ಇಂದಿನ ಬೃಂದಾವನ ವಾಣಿ ತಂಡ ಅಬಾರಿ

ಈ ಬಾರಿಯ ವಾಣಿಯ ತಂಡ , ಉಷಾ ಗಣಪತಿ , ಚಂದ್ರು ,ಪವಿತ್ರ ರಾಜೀವ್, ಗಾಯತ್ರಿ ಹಾಗು ವಿನಯ್
ಎಲ್ಲರೂ ಬಹಳ ಶ್ರಮ ಪಟ್ಟು ಈ ಎರಡು ವರ್ಷ ವಾಣಿ ನಡೆಸಿದ್ದಾರೆ.
ಎಲ್ಲರಿಗು ಅಪೂರ್ವ ತಂಡದ ಧನ್ಯವಾದಗಳು.

ಒಂದು ಸುಸಂದರ್ಭದಲ್ಲಿ ಕಷ್ಟ ಸಾಧನೆಗಳ ಮೆಲಕು ಹಾಕುವುದು , ನಡೆದು ಬಂದ ಹಾದಿಯೊಂದಿಗೆ
ಮುಂದಿನ ದಿನಗಳಲ್ಲಿ ಯಾವ ರೂಪು ರೇಷೆ ಯೊಂದಿಗೆ ವಾಣಿ ಮುಂದುವರೆಯುತ್ತದೆ ಎನ್ನುವ ಚಿಂತನೆ ನಡೆಸುವುದು ಸಮಯೋಚಿತ ಅನಿಸಿಕೆ ಎಂಬ ಭಾವನೆ.

ಪತ್ರಿಕೆಗೆ ಓದುಗರು ಬಹಳ ಮುಖ್ಯ ಹಾಗೆಯೇ ಬರವಣಿಗೆಗೆ ಬರಹಗಾರರು, ಪತ್ರಿಕೆ ವಿನ್ಯಾಸಗಾರರು ಎಲ್ಲರ ಸಹಭಾಗಿತ್ವ ಮುಖ್ಯ , ಜೀವನದ ಆಗು ಹೋಗುಗಳ ನಡುವೆ ,ಪ್ರತಿ ಎರಡು -ಮೂರು ತಿಂಗಳಿಗೊಮ್ಮೆ ವಾರಗಳು ಪತ್ರಿಕೆಗೆ ಮುಡುಪಾಗಿಸುವುದು ಕಷ್ಟದ ಕೆಲಸವೆ, ಈಗಿನ ಸಾಮಾಜಿಕ ತಾಣದ ಯುಗದಲ್ಲಿ ಗಂಟೆಗಟ್ಟಲೆ ಕೂತು ಓದುವ ಹವ್ಯಾಸವಿರುವುದು ಕೆಲವೇ ಕೆಲವರಲ್ಲಿ. ಕೆಲವೊಮ್ಮೆ ಯಾಕೆ ಈ ಪತ್ರಿಕೆ ? ಏಕಿಷ್ಟು ಭವಣೆ ಎನ್ನುವಷ್ಟರಲ್ಲಿ ಕೆಲವರ ಪ್ರತಿಕ್ರಿಯೆ ಯಾಕೆ ಇನ್ನು ಬಂದಿಲ್ಲ ಈ ಮಾಸದ ಪತ್ರಿಕೆ ? ಈ ಎರಡು ದೃಷ್ಟಿ ಕೋನದಿಂದ ಯಾವ ಸೂಕ್ತ ಕ್ರಮ ಕೊಳ್ಳಬೇಕು , ಹೇಗೆ ವಾಣಿ ಬೆಳೆಯಲಿದೆ ಎನ್ನುವುದು ನಿಮ್ಮೆಲ್ಲರ ಮೇಲೆ ಅವಲಂಬಿತವಾಗಿದೆ .

ನಿಮ್ಮ ಅನಿಸಿಕೆಗಳನ್ನು ತಿಳಿಸಿ ಬೃಂದಾವನ ವಾಣಿ 100ರ ಗಡಿ ದಾಟಲಿ , ಇನ್ನು ಉತ್ಕೃಷ್ಟ ರೀತಿಯಲ್ಲಿ ಬೆಳೆಯಲಿ ಎನ್ನುವುದು ನಮ್ಮೆಲ್ಲರ ಆಶಯ.

# ಬೃಂದಾವನ ವಾಣಿ ಬೃಂದಾವನ ಕನ್ನಡ ಕೂಟದ ಅಂತರ್ವಾಣಿ!



**ಶ್ರೀವಿದ್ಯಾ ಪ್ರಶಾಂತ್**, *ನ್ಯೂಜೆರ್ಸಿ*

*ಭಾಷೆ ಎಂಬುವುದು ಒಂದು ನಾಡಿನ ಜನಾಂಗದ ಕುರುಹು. ರಾಷ್ಟ್ರಕವಿ - ಕುವೆಂಪು ಅವರ ಮಾತಿನಂತೆ, "ಕನ್ನಡ ಎನೆ ಕುಣಿದಾಡುವುದೆನ್ನೆದೆ- ಕನ್ನಡ ಎನೆ ಕಿವಿ ನಿಮಿರುವುದು". ನಮ್ಮ ಕನ್ನಡ ಭಾಷೆಯ ಮಹತ್ವವೇ ಅಂಥದ್ದು. ಈ ಶ್ರೀಮಂತ ಭಾಷೆಯನ್ನು ಉಳಿಸಿ - ಅಭಿರುಚಿಯನ್ನು ಮುಂದಿನ ಜನಾಂಗದಲ್ಲೂ ಬೆಳೆಸಬೇಕೆಂಬ ಸಕಾರಾತ್ಮಕ ದೃಷ್ಟಿಯಿಂದ, ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟದ ನೇತೃತ್ವದಲ್ಲಿ, ಸಾಹಿತ್ಯ ಬೃಂದಾವನದ ಆಶ್ರಯದಲ್ಲಿ ಉದಯೋನ್ಮುಖ ಹಾಗೂ ಹವ್ಯಾಸಿ ಲೇಖಕರಿಗಾಗಿ ವೇದಿಕೆಯನ್ನು ಕಲ್ಪಿಸಿ ವಿಶ್ವದಾದ್ಯಂತ ಕನ್ನಡ ಭಾಷೆ ಮತ್ತು ಸಾಹಿತ್ಯದ ಕಂಪನ್ನು ಪಸರಿಸುವ ದೃಷ್ಟಿಯಿಂದ ಮೂಡಿಬಂದ ಉತ್ಕೃಷ್ಟ ಗುಣಮಟ್ಟದ ಅಂತರ್ಜಾಲ ಚಾಲಿತ ದ್ವೈಮಾಸಿಕ ಪತ್ರಿಕೆಯಾದ " ಬೃಂದಾವನ ವಾಣಿ"ಯ ಮುಖ್ಯ ಸಂಪಾದಕಿಯಾಗಿ ನಾನು ೨೦೧೯ ರಿಂದ ೨೦೨೨ ರ*

ಅವಧಿಯಲ್ಲಿ ಸೌರಭ ಹಾಗೂ ಪ್ರಗತಿ ತಂಡದ ಜೊತೆಗೂಡಿ ಕನ್ನಡಾಂಬೆಗೆ ಅಳಿಲ ಸೇವೆಗೈದೆ. ನನ್ನ ಜೊತೆ "ಬೃಂದಾವನ ವಾಣಿ" ಪತ್ರಿಕೆಯನ್ನು ಮುನ್ನಡೆಸಲು, ಪ್ರತಿಭಾನ್ವಿತ ಕನ್ನಡಾಭಿಮಾನಿ ಸ್ವಯಂಸೇವಕ ತಂಡವನ್ನು ರಚಿಸಿ ಪತ್ರಿಕೆಯ ಮೂಲ ಸ್ವರೂಪ ಮತ್ತು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸ್ವಲ್ಪ ಮಟ್ಟಿನ ಹೊಸ ರೂಪ ಕೊಡುವ ಪ್ರಯತ್ನ ಮಾಡುವ ಯೋಜನೆಯೊಂದಿಗೆ ತಂಡವು ಅತ್ಯುತ್ಸಾಹದಿಂದ ಸಕ್ರೀಯವಾಗಿ ಕಾರ್ಯ ನಿರ್ವಹಿಸಿತು.

ಪತ್ರಿಕೆಗಾಗಿ ಬರುವ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳ ಜೇನನ್ನು ತಮ್ಮ ಓದುಗರ ವೃಂದಕ್ಕೆ ಹಂಚುವುದೇ ತಂಡದ ಮುಖ್ಯ ಉದ್ದೇಶ. ಇದಕ್ಕಾಗಿ ಸದಸ್ಯರು ಮಾತೃಭಾಷೆಯ ಮೇಲಿನ ಮಮತೆಯಿಂದ, ತಮ್ಮ ದೈನಂದಿನ ವೃತ್ತಿಯ ನಡುವೆ ಬಿಡುವು ಮಾಡಿಕೊಂಡು ಪತ್ರಿಕೆಯ ಕೆಲಸದಲ್ಲಿ ತೊಡಗುತ್ತಿದ್ದೆವು.

ನಮ್ಮ ಬೃಂದಾವನ ವಾಣಿ ತಂಡವು ಕೆಲವು ವರ್ಣರಂಜಿತ ಅಂಕಣಗಳಾದ ಕಥೆ, ಕವನ, ಅನುಭವ ಲೇಖನ, ದರ್ಶನ, ಪಾಕ ಶಾಸ್ತ್ರ ಹಾಗೂ ಅಧ್ಯಾತ್ಮ ಚಿಂತನೆಗಳನ್ನೊಳಗೊಂಡ ಹಲವಾರು ಬರಹಗಳನ್ನು, ಅಷ್ಟೇ ಅಲ್ಲದೆ ಬೃಂದಾವನ ಕನ್ನಡ ಶಾಲೆಯ ಮಕ್ಕಳು ಬಿಡಿಸಿದ ಬಣ್ಣ ಬಣ್ಣದ ಚಿತ್ರಗಳು, ಚಿಣ್ಣರ ಬರಹ, ಹವ್ಯಾಸಿ ಛಾಯಾಗ್ರಾಹಕರು ತಮ್ಮ ಕ್ಯಾಮರಾ ಕಣ್ಣಲ್ಲಿ ತೆಗೆದ ಛಾಯಾಚಿತ್ರ ಇತ್ಯಾದಿಗಳನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಸಕಾರಾತ್ಮಕ ದಿಶೆಯಲ್ಲಿ ಬೆಳೆಸುವ ಪ್ರಯತ್ನ ನಿರಂತರವಾಗಿ ಬೃಂದಾವನ ಕನ್ನಡ ಕೂಟದ ಸಾಹಿತ್ಯ ವಿಭಾಗದಿಂದ, ಕನ್ನಡಾಭಿಮಾನಿಗಳ ಸಹಕಾರ ಮತ್ತು ಪ್ರೋತ್ಸಾಹದೊಂದಿಗೆ ನಡೆಯುತ್ತಾ ಬಂದಿದೆ ಎನ್ನಲು ಸಂತೋಷವಾಗುತ್ತಿದೆ. ಅಂಬೆಗಾಲಿಡುತ್ತಾ ಆರಂಭವಾದ ಈ ಬೃಂದಾವನ ವಾಣಿ ಪತ್ರಿಕೆಯು ಜನ-ಮನ ಗೆದ್ದು ಈಗ ತನ್ನ ೫೦ ನೇ ಸಂಚಿಕೆಯನ್ನು ಬಿಡುಗಡೆಗೊಳಿಸಿದೆ. ಇಂತಹ ಅಪೂರ್ವ ಸಂದರ್ಭದಲ್ಲಿ ತಂಡದ ಎಲ್ಲಾ ಸದಸ್ಯರಿಗೂ ಶುಭಹಾರೈಸುತ್ತಾ, ಮತ್ತಷ್ಟು ಕನ್ನಡ ಪರ ಕಾರ್ಯಗಳು ಸಾಕಾರಗೊಳ್ಳಲಿ ಎಂದು ತುಂಬುಹೃದಯದಿಂದ ಹಾರೈಸುತ್ತೇನೆ.



# ವಿಂಶತಿ ವೈಭವ
# ಬೃಂದಾವನೋತ್ಸವ - 20

KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



# ವಿಂಶತಿ ವೈಭವ

**ನಾಗಶ್ರೀ,** *ನ್ಯೂಜೆರ್ಸಿ*



ನಮಸ್ಕಾರ ,
ಬೃಂದಾವನ ದ್ವಿದಶಮಾನೋತ್ಸವ **"ವಿಂಶತಿ ವೈಭವ"** ಕಾರ್ಯಕ್ರಮದ ಮುನ್ನೋಟ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

ಅಪೂರ್ವ ತಂಡದ ಕರ್ತವ್ಯಗಳನ್ನು ವಹಿಸಿಕೊಂಡಾಗಿನಿಂದ, 2024 ರಲ್ಲಿ 20ನೇ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕೆ ಭಾರೀ ಜವಾಬ್ದಾರಿ ಹೊತ್ತಿದ್ದೇವೆ ಎಂದು ನಾವು ಎಲ್ಲರೂ ತಿಳಿದುಕೊಂಡಿದ್ದೆವು.

ಜನವರಿ 2024 ರಲ್ಲಿ, ಈ B-20 ಕಾರ್ಯಕ್ರಮ ಹೇಗೆ ಹಮ್ಮಿಕೊಳ್ಳುವುದು ಎಂಬುದರ ಬಗ್ಗೆ ಚರ್ಚೆಗಳು ಆರಂಭವಾಯಿತು. ತಿಂಗಳುಗಳು ಕಳೆದಂತೆ , ಪ್ರತಿಯೊಂದು ವಿಭಾಗವು ತಮ್ಮ ಜವಾಬ್ದಾರಿಗಳನ್ನು ಹೊತ್ತು ಕಾರ್ಯ ಪ್ರವೃತವಾಯಿತು.
ಈ ಕಾರ್ಯಕ್ರಮ ಬೃಂದಾವನದ ಇತಿಹಾಸದಲ್ಲೇ ಮೊದಲ ಬಾರಿಗೆ ಭಾರಿ ಪ್ರಮಾಣದ ಜನರನ್ನು ನಿರೀಕ್ಷಿಸಿತ್ತು. ಹಲವಾರು ಶಾಲೆಗಳನ್ನು , auditorium ಸುತ್ತಿ ಕೊನೆಗೆ ಮಿಲ್‌ಸ್ಟೋನ್ Performing Arts Center ಅನ್ನು ಬುಕ್ ಮಾಡಲಾಯಿತು.

ನವೆಂಬರ್ ತಿಂಗಳು ಹತ್ತಿರ ಸಮೀಪಿಸುತ್ತಿದ್ದಂತೆ ನಮ್ಮೆಲ್ಲರಿಗೂ ಒತ್ತಡ ಹೆಚ್ಚಾಯಿತು, ಈ ಮಧ್ಯೆ ಮಹತ್ವಪೂರ್ಣ ಹಲವಾರು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿತ್ತು. B-20 ಎರಡು ದಿನಗಳು ನಡೆಯುವುದೆಂದು ನಿರ್ಧಾರ ಮಾಡಲಾಯಿತು,
ಒಂದು ದಿನದ ಕಾರ್ಯಕ್ರಮ ಎರಡು ದಿನವಾದರೆ ಹಲವಾರು ಬದಲಾವಣೆಗಳು, ಸಮಯ , ಊಟ , ಅತಿಥಿಗಳಿಗೆ ಉಪಚಾರ ಎಲ್ಲಕ್ಕೂ ನಮ್ಮಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಇತ್ತು.

ತುಂಬಾ ಆಲೋಚಿಸಿದ ನಂತರ, ನಾವು ವಿವಿಧಕಾರ್ಯಕ್ರಮಗಳನ್ನು ಹಲವಾರು ಭಾಗವಾಗಿ ಹಂಚುವ ಬದಲು, ಅವುಗಳನ್ನು ಒಂದು ಕಡೆಯಲ್ಲಿಯೇ ಸಂಯೋಜಿಸುವುದಾಗಿ ನಿರ್ಧರಿಸಿದೆವು. ಸಂಗೀತದ ಮಾಧುರ್ಯ ನಮ್ಮಜನರಿಗೆ ತುಂಬಾ ಇಷ್ಟ .

ಆದ್ದರಿಂದ Grand Musical Evening ಏರ್ಪಾಡು ಮಾಡಲು ನಿರ್ಧರಿಸಿದೆವು. ನಮ್ಮB20 ಕಾರ್ಯಕ್ರಮದಲ್ಲಿ ಸಂಗೀತ ಮಾಂತ್ರಿಕ , **"ಅಮೇರಿಕಾ , ಅಮೇರಿಕಾ" ಖ್ಯಾತಿಯ ಡಾ ಮನೋ ಮೂರ್ತಿ ಮತ್ತು ತಂಡವನ್ನು** ಹಾಡಲು ಆಹ್ವಾನಿಸಲು ತೀರ್ಮಾನಿಸಿದ್ದೆವು." , ಆದರೆ ಅತ್ಯಂತ ದೊಡ್ಡ ಸವಾಲುಗಳು ಅಂದರೆ ತಂಡದ performers ಗಳಿಗೆ ವೀಸಾಗೆ ಕಾಯೋದು . ದೇವರ ದಯೆಯಿಂದ ಎಲ್ಲ performers ವೀಸಾ ಪಡೆದರು.

ಈ ಸಮಯದಲ್ಲಿ, ಹೆಸರಾಂತ ಸಾಹಿತಿ ಹಾಗು ಚುಟುಕುಗಳ ರಾಜ ದುಂಡಿರಾಜ್ ಅವರು ಯುಎಸ್‌ಎಗೆ ಭೇಟಿ ನೀಡುತ್ತಿರುವುದು ತಿಳಿದು, ಅವರು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದಾರೆ ಎಂಬ ಸುದ್ದಿ ಕೇಳಿ ನಮಗೆ ಅತ್ಯಂತ ಸಂತೋಷವಾಯಿತು.

ನಾವು ಮತ್ತೊಂದು ಮಹತ್ವಪೂರ್ಣ ನಿರ್ಧಾರವನ್ನು ತೆಗೆದುಕೊಂಡಿದ್ದೆವು . ಬೃಂದಾವನ ಸದಸ್ಯರನ್ನು ಫ್ಯಾಷನ್ ಶೋ ಹಾಗೂ ಮತ್ತೊಂದು ಕಾರ್ಯಕ್ರಮದಲ್ಲಿ ಮಾತ್ರ ಭಾಗವಹಿಸಲು ಅನುಮತಿಸಲಾಗಿತ್ತು. ಇದರಿಂದ ಪ್ರತಿಯೊಬ್ಬ ಭಾಗವಹಿಸುವವರು ತಮ್ಮ ಸಮಯವನ್ನು ,ಶ್ರದ್ಧೆಯಿಂದ ಅಭ್ಯಾಸ ಮಾಡಬಹುದು.


7 ಕನ್ನಡ ಶಾಲೆಗಳಿಂದ 230 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ನಾವು ಎಲ್ಲಾ ಶಾಲೆಗಳಿಂದ ಕೇವಲ 1 ನಾಟಕವನ್ನು ಆಯೋಜಿಸುವುದಾಗಿ ತೀರ್ಮಾನಿಸಿದೆವು . ಶಾಲಾ ಮಕ್ಕಳಿಗೆ ಆಡಿಷನ್ ಆಯಿತು, 40 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ . ಪಾತ್ರಗಳು ನಿರ್ಧಾರಗೊಂಡ ನಂತರ, ಅವರು ಪ್ರತಿದಿನವೂ ಆನ್ಲೈನ್‌ನಲ್ಲಿ ಅಭ್ಯಾಸಮಾಡಿ, ವೀಕೆಂಡಲ್ಲಿ ಮುಖಾಮುಖಿಯಾಗಿ ಭೇಟಿಯಾಗುತಿದ್ದರು.

"ನಾವು ಎರಡೂ ದಿನಗಳ ಆರಂಭಿಕ ಕಾರ್ಯಕ್ರಮಕ್ಕೆ ,

ಸಂಗೀತ ಕಾರ್ಯಕ್ರಮದಲ್ಲಿ ಪುರುಷ ಮತ್ತು ಮಹಿಳೆಯರು ಎರಡು ದಿನಗಳಲ್ಲಿ invocation ಹಾಡುತ್ತಾರೆ. ಇದಲ್ಲದೆ, 25 ಪ್ರತಿಭಾವಂತ ಯುವ ಸಂಗೀತಗಾರರು ಸಂಗೀತ ಸಿಂಫನಿ/ಒರ್ಕೆಸ್ಟ್ರಾ ಪ್ರದರ್ಶಿಸಲು ಆಯ್ಕೆಗೊಂಡರು,
ನೃತ್ಯಗಾರರ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ನಾವು ಕೇವಲ ಕೆಲವು ನೃತ್ಯ ಗುಂಪುಗಳನ್ನು ಆಯ್ಕೆಮಾಡಲು ನಿರ್ಧರಿಸಿದೆವು. ನೃತ್ಯಗಾರರ ಕೌಶಲ್ಯತೇ ಹಾಗು ಪ್ರತಿಭೆ ಅನಾವರಣ ಗೊಳ್ಳಲು ವೇದಿಕೆಗೆ ಹೊಂದಿಸಲಾಯಿತು.

ನಮ್ಮ ದೀರ್ಘಕಾಲಿಕ ನೆರೆಹೊರೆಯ ಕನ್ನಡ ಕೂಟಗಳಾದ , NYKK ಮತ್ತು ತ್ರಿವೇಣಿ ಅವರನ್ನು ಹೇಗೆ ಮರೆಯುವುದು? ಸದಾಕಾಲ ನಮ್ಮ ಬೆನ್ನುಲುಬಾಗಿರುವ ಅವರನ್ನು ನಮ್ಮ ಕಾರ್ಯಕ್ರಮದಲ್ಲಿ ವಿಶೇಷವಾಗಿ ಆದರಿಸುವುದು ಮತ್ತು ಈ ವಿಶೇಷ ಹಬ್ಬದಲ್ಲಿ ಅವರನ್ನು ಆಹ್ವಾನಿಸೋದು ನಮ್ಮ ಕರ್ತವ್ಯ .





ಅಪೂರ್ವ ತಂಡ ಕಳೆದ ವರ್ಷದಂತೆ ಈ ವರ್ಷವೂ ಸ್ಪರ್ಧೆಗಳನ್ನು ಮುಂಚಿತವಾಗಿ ಆಯೋಜಿಸಲು ನಿರ್ಧರಿಸಿತು. ಸಾಮಾನ್ಯವಾಗಿ, ಎಲ್ಲ ಕನ್ನಡ ಕೂಟಗಳ ಮೆರವಣಿಗೆ ಬೆಳಿಗ್ಗೆ ನಡೆಯುತ್ತಿತ್ತು. ಆದರೆ ಅನೇಕ ಜನರಿಗೆ ಬೆಳಿಗ್ಗೆ ಬೇಗ ಎಚ್ಚರಗೊಳ್ಳಲು ಕಷ್ಟವಾಗುವುದು ಹಾಗು ಸಮಯಕ್ಕೆ ಸರಿಯಾಗಿ ಬರಲು ಕಷ್ಟವಾಗುವುದೆಂದು ಈ ಬಾರಿ ಮಧ್ಯಾಹ್ನವೇ ಮೆರವಣಿಗೆ ಹಮ್ಮಿಕೊಳ್ಳಲು ನಿರ್ಧರಿಸಿದೆವು .

ಮೈಸೂರು ರಾಜಾಂಗಣದ ಫೋಟೋ ಬೂತ್. ಬಂದಿರುವ ಎಲ್ಲ ಅಭ್ಯಾಗತರು ತಮ್ಮ family ಹಾಗು ಸ್ನೇಹಿತರೊಡನೆ memorable ಛಾಯಾಚಿತ್ರ ಗಳಿಗಾಗಿ
ಮೈಸೂರು ಅರಮನೆಯ ಸುಂದರವಾದ ರಾಜಾಂಗಣ ವನ್ನು ಅಣಿಗೊಡಿಸಲಾಯಿತು. ಬೆಂಗಳೂರಿನಲ್ಲಿ ವಿಶೇಷವಾಗಿ ಮುದ್ರಿತವಾದ ಬ್ಯಾನ್ನೆರ್ ಗಳೊಡನೆ ಮೈಸೂರ್ ದಸರಾ ವಿಶೇಷ ಆಕರ್ಷಣೆ ಯಾಯಿತು.







ನಮ್ಮ ದೀರ್ಘಕಾಲಿಕ ನೆರೆಹೊರೆಯವರು, NYKK ಮತ್ತು ತ್ರಿವೇಣಿ ಅವರನ್ನು ಹೇಗೆ ಮರೆಯಬಹುದು? ನಾವು ಯಾವಾಗಲೂ ಅವರನ್ನು ಬೆನ್ನಟ್ಟಿದ ನಾವು, ಅವರು ನಮ್ಮ ಪಥದಲ್ಲಿ ಮುಖ್ಯವಾದ ಭಾಗವಾಗಿದ್ದಾರೆ ಮತ್ತು ಈ ವಿಶೇಷ ಹಬ್ಬದಲ್ಲಿ ಅವರನ್ನು ಆಹ್ವಾನಿಸೋದು ನಮ್ಮ ಕರ್ತವ್ಯ .

ಅಪೂರ್ವಾ ತಂಡ  ಕಳೆದ ವರ್ಷದಂತೆ ಈ ವರ್ಷವೂ ಸ್ಪರ್ಧೆಗಳನ್ನು ಮುಂಚಿತವಾಗಿ ಆಯೋಜಿಸಲು ನಿರ್ಧರಿಸಿತು ,

ಸಾಮಾನ್ಯವಾಗಿ, ಮೇರಾವಣಿಗೆ ಬೆಳಿಗ್ಗೆ ನಡೆಯುತ್ತಿತ್ತು. ಆದರೆ ಅನೇಕ ಜನರಿಗೆ ಬೆಳಿಗ್ಗೆ ಎಚ್ಚರಗೊಳ್ಳುವುದು ಕಷ್ಟವಾಗುತ್ತೆ  ಮತ್ತು ಸಮಯಕ್ಕೆ ಸರಿಯಾಗಿ  ಬರಲು ಕಷ್ಟವಾಗುತಿತ್ತು . ಇದಕ್ಕೆ ಪರಿಹಾರವಾಗಿ ನಾವು ಈ ವರ್ಷ ನವೆಂಬರ್ 2ನೇ ತಾರೀಖಿಗೆ  ಮಧ್ಯಾಹ್ನ 1 ಗಂಟೆಗೆ ಮೆರವಣಿಗೆ   ಹಮ್ಮಿಕೊಳ್ಳಲು ನಿರ್ಧರಿಸಿದೆವು .
















ವಿಂಶತಿ


ಕನ್ನಡ ಕೂಟ ನ್ಯೂಯಾರ್ಕ್
WELCOME
KANNADA KOOTA NEW YORK








Pragya
Latha
Archana Acharya-B...
Jagadish Kantharaj
Padmini Hemanth
Mohan Kumar
Usha
Usha and Prasanna
sarala upadhya
Mano Murthy
ISC2 CHAPTER
NEW JERS
Malik Prasad
heartfulness
advancing in love
Powered by Zoom


ALESIS V61
KROME EX
KORG




KORG





# ಸಾಧಕರು

# ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತರಾದ ಬೃಂದಾವನ ಸಾಧಕರು !!

ಈ ವರ್ಷ ಡಿಸೆಂಬರ್ ೨೦,೨೧ ಮತ್ತು ೨೨ ರಂದು ಮಂಡ್ಯದಲ್ಲಿ ನಡೆದ, ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಸಾವಿರಾರು ಮೈಲಿ ದೂರ ಸಾಗರದಾಚೆ ಅಮೇರಿಕಾದ ನ್ಯೂ ಜೆರ್ಸಿಯಲ್ಲಿ ಕನ್ನಡನಾಡು, ನುಡಿ ಸಂಸ್ಕೃತಿಗೆ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ, ನಮ್ಮ ಬೃಂದಾವನದ ಮೊಟ್ಟಮೊದಲ ಸದಸ್ಯ, ಅಧ್ಯಕ್ಷ ದಂಪತಿಗಳಾದ ಶ್ರೀ ಪ್ರಸನ್ನ ಕುಮಾರ್ ಮತ್ತು ಶ್ರೀ ಉಷಾ ಪ್ರಸನ್ನ ಕುಮಾರ್ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನ!!! ಇದು ಬೃಂದಾವನ ತನ್ನ ದ್ವಿದಶನೋತ್ಸವ "ವಿಂಶತಿ ವೈಭವ" ಆಚರಿಸಿದ ಸಂದರ್ಭದಲ್ಲಿ ಬಂದಿರುವುದು ಬೃಂದಾವನ ಬಳಗಕ್ಕೆ ಇನ್ನೂ ಹೆಚ್ಚಿನ ಸಂತೋಷ ತಂದಿದೆ.

ಇವರೊಡನೆ ನಮ್ಮ ಬೃಂದಾವನದ "ವಿಂಶತಿ ವೈಭವದ" ಪ್ರಾಯೋಜಕರಾದ CV ಶಶಿ ಕುಮಾರ್ ಹಾಗು ಸುಷ್ಮಾ ಅವರ

ಸಾಮಾಜಿಕ ಸೇವೆಯನ್ನು ಗುರುತಿಸಿ ಸನ್ಮಾನಿಸಿರುವುದು ಸಹ ಬಹಳ ಸಂತೋಷ ತಂದಿದೆ

ಬೃಂದಾವನದ ವತಿಯಿಂದ ತಮಗೆ ಹೃತ್ಪೂರ್ವಕ ಅಭಿನಂದನೆಗಳ ನ್ನು ಸಲ್ಲಿಸುತ್ತಿದ್ದೇವೆ.




ಕನ್ನಡ ಸಾಹಿತ್ಯ ಪರಿಷತ್ತು
ಶ್ರೀ ಎ. ಪ್ರಸನ್ನ ಕುಮಾರ್ ಮತ್ತು ಶ್ರೀಮತಿ ಉಷಾ ಪ್ರಸನ್ನ ಕುಮಾರ್
ಅಮೇರಿಕ
ವಿದೇಶದಲ್ಲಿ ಕನ್ನಡ ಸಂಘಟನೆ
ಸಕ್ಕರೆಯ ನಾಡು – ಅಕ್ಕರೆಯ ಬೀಡು
ಸ್ಥಾಪನೆ: ೧೯೧೫
ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮
ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್
ಸರ್ ಎಂ. ವಿಶ್ವೇಶ್ವರಯ್ಯ
ಸರ್ ಮಿರ್ಜಾ ಇಸ್ಮಾಯಿಲ್
ಗೌರವ ಸನ್ಮಾನ ಫಲಕ
ಕನ್ನಡ ನಾಡು, ನುಡಿ, ಸಂಸ್ಕೃತಿಗೆ ತಾವು ಸಲ್ಲಿಸಿರುವ ಸೇವೆಯನ್ನು ಗುರುತಿಸಿ,
೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ,
ತಮ್ಮನ್ನು ಗೌರವಪೂರ್ವಕವಾಗಿ ಸನ್ಮಾನಿಸುತ್ತಿದ್ದೇವೆ.
ದಿನಾಂಕ
೨೦,೨೧,೨೨
ಡಿಸೆಂಬರ್ ೨೦೨೪
ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಸ್ಥಳ
ಮಂಡ್ಯ

# ಕಥಾ ಸ್ಪರ್ಧೆ - ಮೆಚ್ಚುಗೆ ಬಹುಮಾನಗಳು



# ಒತ್ತುವರಿ

**ನಿರ್ಮಲ ಕೆ.,** *ತ್ರದುರ್ಗ*

ಹೊಲಾನ ಅಳತೆ ಮಾಡಿಸ್ತಾ ಇದ್ದೀನಿ ಕಣಪ್ಪ. ನಾಳೆ ಸೋಮವಾರ ಹೊಲದತ್ರ ಬಂದ್ಬಿಡು. ಆಗ್ಲೇಯ ತಿಂಗಳ ಹಿಂದೆನೆ ನಾಡ ಕಛೇರಿಗೆ ಅರ್ಜಿ ಕೊಟ್ಟಿದ್ದೆ ಕನಪ್ಪ.ಈಗ ಸರ್ವೆಡಿಪಾರ್ಟಮೆಂಟ್ಗೆ ಕಳಿಸವರಂತೆ ಮೇಸೇಜೂ ಬಂದಿತ್ತು. ಅಕ್ಕ ಪಕ್ಕದ ಹೊಲದವರೂ ಇರಬೇಕಂತಲ್ಲಪ್ಪ. ಎಲ್ಲರ್ಗಿಗೂ ಹೇಳೀವ್ನಿ, ಬತ್ತಾರಂತೆ.ನೀನೂವ ಬಂದ್ಬಿಡೂಂತ ನಾಗರಾಜಪ್ಪ ಸುಧೀರಂಗೆ ಪೋನಾಗೆ ಹೇಳ್ತಿದಂಗೆ ಆತ್ನಿಗೆ ರೇಗೊಯ್ತು.ಈಗ ಯಾಕೆ ಅಳತೆ ಪಳ್ತೆ ? ಮುಂಚೆನೆಯಾ ನಂಗೂ ಮಾತ್ಬೇಳ್ಬೇಕಿತ್ತು.ನಂಗೆ ಟೈಮಿಲ್ಲ ಸೋಮ್ವಾರ ಬಾ..ಅಂತಿದ್ದಂಗೆ ಬರಾಕೆ. ಇಷ್ಟಕ್ಕೂ ನಾನು ಕೃಷಿ ಹೊಂಡ ಮಾಡ್ಕಂಡಿರಾದು ನನ್ನ ಹೊಲದಾಗೆಯಾ ಆದ್ರೆ ಒಂದು ಕ್ವೊರೆಯಷ್ಟ ನಿಮ್ಕಡಿಗೆ ಬಂದೇತಿ ಅಷ್ಟೇಯಾ ಅದುಕ್ಕೆ ಅಳತೆ ಇಡಿಸ್ಬಿಟ್ಟಿದೀಯಾ ? ಕೂಗ್ಕಂಡೆ ಮಾತಾಡ್ದ. ಯಾಜಮಾನ ಮನಷ್ಯ ನಾಗರಾಜಪ್ಪ ಅಷ್ಟೇ ಸಮಾಧಾನವಾಗಿ ಅಯ್ಯಯ್ಯೋ ದಹಂಗೆಲ್ಲಾ ತೆಪ್ಪು ತಿಳ್ಕ ಬೇಡಪ್ಪಾ ನಿಮ್ದೇ ಬೇಕಾದಷ್ಟು ಹೊಲ ಇರ್ಬೇಕಾದ್ರೆ ನಿನ್ನ ಕೃಷಿಹೊಂಡಾನ ನಮ್ಮ ಕಡಿಗೆ ಯಾಕೆ ಯಾಕೆ ಬೆಳುಸ್ತೀಯಾ ನಂಗೆನೂ ಗೊತ್ತ ಆಗೆಲ್ಲೆ. ಏನೊ ಮಿಸ್ ಆಗಿರ್ಬೇಕು ನಾನು ಅದಕ್ಕಲ್ಲ ಬಿಡು ಇಟ್ಕೊಂಡಿರಾದು. ನೋಡು ,ನಾವು ಮುದುಕ್ರು ಆದ ಮ್ಯಾಲೆ ಈಗ ನಮ್ಮ್ನಮ್ಮಪಾಲು ಬಂತು. ಮುತ್ತಾತ್ನಕಾಲದ್ದು ಖಾತೆನೂ ಆಗಿರ್ಲಿಲಿಲ್ಲ ಕಣಪ್ಪೊ. ಈಗ ಮರಿಮಕ್ಳಕಾಲಕ್ಕೆ ಒತ್ಕಂಡು ಬಂದು ನಮ್ಮ್ನಂದು ರಿಜಿಸ್ಟ್ರಾರ್ ಮಾಡಿಸ್ಕಂಡು ಬಿಡಾನ ,ಇದೇನಿದು ಒಂದು ಲೋನ್ ತಗಿಯಂಗಿಲ್ಲ ,ಯಾತರದ್ದೂಯಿಲ್ಲ ಅಂತೇಳಿ ಯಾವ್ಯಾವಮೂಲೆನಾಗೆ ಕೆಲ್ಸದಾಗಿದ್ದ ಅಣ್ತಮ್ಮಗಳೆಲ್ಲಾ ಸೇರ್ಕಂಡು ರಿಜಿಸ್ಟ್ರಾರ್ ಮಾಡಿಸ್ಕಂಡವಲ್ಲ. ನಿಂಗೇ ಗೊತ್ತಿರಬೇಕು ಊರಾಗೆಲ್ಲಾ ಸುದ್ದಿಯಾತು .ನಂಗೆ ಹಳೆಬಾವಿ ಕಡೇದು ಅದ್ರಾಗೆ ನಮ್ಮಣ್ಣಂದೂ ಬರತ್ಯೆತೆ. ನಡುವಿಲೆ ಬದ್ಗುಳೂಯಿಲ್ಲ. ಎಷ್ಟು ನಂದು ,ಎಷ್ಟು ಆತ್ನದೂಂತ ಕಲ್ಲು ಕನ್ರುಸವ್ರೆ. ಅದೇ ನೀಟ್ಗೆ ಬದ ಹಾಕ್ಕಂಬೇಕು. ಪಶ್ಚಿಮ್ದ ಕಡೆ ನಿಮ್ಮ ಹೊಲದ್ದೆ ಡೌಟು.ಕಾಗ್ದದಾಗೇನೊ ಎಲ್ಲಾ ಹೊಗಳವ್ರೆ.ಹೊಲದಾಗೆ ಬಂದು ನೋಡಿದ್ರೆ ಕನ್ಫೂಸ್ ಕಣಪ್ಪ. ಅದಕ್ಕೆಯಾ ಯಂಗನ್ನ ಆಗ್ಲಿ ಅಳತೆ ಮಾಡ್ಸಿಬಿಡುವಾಂತ ಬಂದ್ಬಿಡಪ್ಪ ಸುಧೀರ .ಅವ್ನ ಪೋನ್ನ ಕಟ್ಟೆ ಮಾಡ್ದ. ನಾಗರಾಜಪ್ಪಂಗೆ ಸುಧೀರ ಧಿಮಾಕು ಅರ್ಥವಾಗ್ದೆ ಇರ್ತದಾ.ಅಲ್ಲಾ ನನ್ನ ಎದುರಿಗೆ ಚಣ್ಣ ಇಲ್ದಂಗೆ ಓಡಾಡಿದ ಹುಡುಗ ನಂಗೆ ಕ್ವಷನ್ ಮಾಡ್ತಾನೆ ಈಗಿನ ಮಕ್ಳಿಗೆ ಮೀಸೆ ಬರಾಕ್ಮುಂಚೆನೆ ಮೈತುಂಬಾ ದೌಲತ್ತು ತುಂಬಿಕ್ಕಂಡು ಇರ್ತದೆ.ಹಿಂಗೆ ಆಲೋಚಿಸ್ತಾ ನಮ್ಮ ಹೊಲದಾಗೆ ಒತ್ತಿಕೊಂಡು ಬಂದು ನಮಗೇಯ ಮಾರ್ವಾದಿಲ್ದಂಗೆ ಮಾತಾಡ್ತಾನೆ.ಇವನ್ನ ಹೆಂಗಪಾ ಸಂಬಾಳ್ಸೋದು .ಅಂದಕಳ್ತಾ ಹೊರಗೆ ಮಧ್ಯಾಹ್ನದ ಬಿಸ್ಲನ್ನ ನೋಡೋಕ್ಕಾಗದೆ ನಡುಮನೆಯ ಗ್ರಾನೈಟ್ ನೆಲ್ದಮ್ಯಾಗೆ ಹಂಗೆ ಒರಿಕ್ಕಂಡ.ಕಣ್ ಹತ್ತಿದ್ದೆ ತಿಳೀಲಿಲ್ಲ ಮಧ್ಯಾಹ್ನದ ಊಟಕ್ಕೆ ಮಟನ್ಸಾರು ಮುದ್ದೆ ತಿಂದಿದ್ದಕ್ಕೊ ಏನೊ ನಡುಮನೆ ನಡ್ಗೊಹಂಗೆ ಗೊರಕೆ ಹೊಡೀಯೋದನ್ನ ಕೇಳಿ ಹೆಂಡ್ತಿ ಮಂಜಮ್ಮ ,ಏ... ಎದ್ದೇಳಿ,ಆಗ್ಲೆ ಐದ್ಗಂಟೆ ಆಯ್ತು.ನಿಮ್ಮ ಗೊರಕೆ ಕೇಳಿ ಆಚೀಚೆ ಮಕ್ಳು ಹೆದ್ರುಕ್ಕಂಡಾವು ಅಂತ ರೋಪು ಹಾಕೀದ್ಮೇಲೆ ನಾಗರಾಜಪ್ಪಂಗೆ ಎಚ್ಚರಾಗಿ ,ಸಿಟ್ಟಾಗಿದ್ದ ಹೆಂಡ್ತೀನ ದುರಗುಟ್ಕಂಡು ನೋಡಿ ಇದ್ರುದ್ದು ಯಾವಾಗ್ಲೂ ಈಟೆಯಾ ಅಂತ ಮಕಕ್ಕೆ ಮುಚ್ಚಕ್ಕಂಡಿದ್ದ ಟವಲ್ಲನ್ನ ಕೊಡ್ವಿಕೊಂಡು ಬೈಯ್ಕಂತ ಹೊಂಟಿದ್ದೆ ಮಂಜಕ್ಕ ,ಟೀ ಕುಡ್ದು ಹೋಗ್ಬಾಅಂತ ಲೋಟಾನ ಮುಂದಿಕ್ಕಿದ್ಲು.ಇದು ಹೊರಾಗೋಗೊದನ್ನ ತಪ್ಪಿಸೋಕೆ ಹೆಂಡ್ತಿ ಮಾಡೊ ಪ್ಲಾನೂಂತ ಗೊತ್ತಿದ್ದೆ ಆಗಿ ಆರಾಮಾಗಿ ಕುತ್ಕಂಡು ಟೀ ಕುಡಿಯಾಕೆ ಶುರು ಮಾಡ್ದ.ತಲೇನಲ್ಲಿ ಓಡೊ ಯೋಚ್ನೆಗಳ್ನ ತಡೀಕಳಕ್ಕಾಗ್ದೆ ಕಣ್ಮುಚ್ಚಿಕೊಂಡೆ ಈ ಜನಗಳು ಹೆಂಗೆ ಮೈಮ್ಯಾಲೆ ಬೀಳ್ತಾರಲ್ಲಾಂತ ವ್ಯಥೆ ಪಡ್ತಾಯಿದ್ರು.

ನಾಗರಾಜಪ್ಪಂಗೆ ಇರೋನು ಒಬ್ನೆ ಅಣ್ಣ. ಅವನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆನಾಗೆ ಮೇಲ್ನರ್ಸ ಸೇವೆ ಮಾಡಿ ಈಗ ನಿವೃತ್ತಿಯಾಗಿ ಅಲ್ಲೇ ಮನೆ ಮಾಡ್ಕಂಡ.ಹುಟ್ಟಿದೂರು ಪಾಲವ್ವನಹಳ್ಳಿ. ಅಲ್ಲಿಂದ ಹತ್ತು ಕಿಲೊಮೀಟರ್ ದೂರಯಿರೊ ಚಿತ್ರದುರ್ಗ ದಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸ್ನಾಗೆ ಕ್ಲರ್ಕ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಜೀವನ.ಇಬ್ಬರೂ ಗಂಡುಮಕ್ಳ ಮದುವೆಮುಗ್ಸಿ ಮೊಮ್ಮಕ್ಕಳೂ ಆಗಿ ಸುಖೀಸಂಸಾರದಲ್ಲಿರುವಾಗ, ಹಳ್ಳೀಲಿರೊ ಹೊಲವನ್ನ ಕೋರಿಗೆ ಕೊಟ್ಟು ,ಅದ್ರಿಂದ ಬರೊ ಅಲ್ಪ ಆದಾಯ ಓಡಾಡೊ ಖರ್ಚಿಗೆ ಕಮ್ಮಿಯಾಗ್ತಿತ್ತು.ಆದ್ರೆ ಹಿರೀರಿಂದ ಬಂದ ಹೊಲಾನ ಉಳಿಸ್ಕಂಡು ಹೋಗೊದು ಮುಖ್ಯ. ಮುತ್ತಜ್ಜನ ಕಾಲದ್ದು ಜುಮಾನಿ ಪಾರೆಕತ್ತ ಮೇಲೆ ಹಂಗೆ ಮಾಡ್ಕೊಂಡು ಅಣ್ತಮ್ಮಗಳು ಬಾಯಿಮಾತ್ನಾಗೆ ಭಾಗ ಮಾಡ್ಕಂಡು ಇಂದಿನಗಂಟ ಸಾಗ್ಸವರೆ.

ಇತ್ತೀಚೆಗೆ ಜನಗಳ್ಗೆ ಭೂಮ್ತಾಯಿಮ್ಯಾಗೆ ಬಾಳ ಪ್ರೀತಿ ಬಂದಂಗದೆ

ಯಾಕಂದ್ರೆ ಅಡ್ಕೆ ಬೆಳ್ಗೆ ಬಾರಿ ರೇಟ್ ಬಂದ್ಮೇಲೆ ಆಯ್ತು. ಬೋರ್ ಹಾಕ್ಸಿ

ಅಡ್ಕೆ ಕೂರ್ಸಿ ಟೌನ್ಗಳಿಂದ ಓಡಾಡ್ಕಂಡೆ ನೋಡ್ಕಂತಾ ಅದಾರೆ.ಇನ್ನೊಂದ

ತರ ಅಂದ್ರೆ ಬೆಂಗ್ಳೂರ್ ಕಡೆಯ ಬಂಡ್ವಾಳ ಇರೊ ಜನ ,ಒಂದಕ್ಕೆ ಎರಡು

ಮೂರರಷ್ಟು ರೇಟ್ ಮಾಡಿ, ಭೂಮೀನ ಖರೀದಿ ಮಾಡಿ, ಗಾರ್ಮೆಂಟ್ಗಳ್ನ

ತೆರಿತಾಯಿದಾರೆ.ಕೆಲವರಂತೂ ನಮ್ಮ ಭೂಮೀಯಂತ ಬಿದ್ದಿಲ್ರಿ.ಮುಂದಂತೂ

ಚಿನ್ನ ಕೊಳ್ಳೊದು ಭೂಮಿ ಕೊಳ್ಳಾಕೆ ಸಾಧ್ವಿಲ್ಲ ಅನ್ನೊ ಸತ್ಯ ಕಂಡೀದಾರೆ.

ಭೂಮ್ತಾಯಿ ಅಂತ ಬೇಸಾಯ ಮಾಡೊ ರೈತಾಪಿಗಳು ಸಾಲ

ಹಚ್ಚಕೊಂಡು ಸಾಯಂಗಾತು.ದುಡ್ಡಿರೋರು ಕೊಳ್ಳಂಗಾತು.

ಹೊಲ ಇರೋದೂ ಶೋಕಿ ತೋರ್ಸಾಕೆ ಅನಂಗೆಅವುರಿಗೆ

ಭೂಮೀನ ತಾಯಿ ಅಂತ ತಿಳ್ಕಳೊ ಮನಸ್ಸಿರೊ ಮನುಷ್ಯಾರು

ಕಂಡ್ಬಾರೋದು ಅಪರೂಪ.ತಮ್ಮ ದುಡ್ಡಿನ.ಅಹಂ ತೋರಸೋದೆ

ಮಹತ್ವದ್ದಾಗಿದೆ.ಏನು ಮಾಡೋದು ಕಾಲ ಬದ್ಲಾಗಿ ಕಲಿ ಕಾಲಿಟ್ಟಾಗ

ಹಿಂಗೆ ಇರ್ಬೇಕೆನೊ ಅಂದಕ್ಕಂಡು ಸಮಾಧಾನ ಮಾಡ್ಕೊಳ್ಳೊದು.

ಎಲ್ಲೆಲ್ಲಿಗೆ ಮುಟ್ಟುತ್ತೊ ಮುಟ್ಟಲಿ.ಟೀ ಕುಡಿದಿದ್ದೆ ಗೊತ್ತಾಗ್ಲಿಲ್ಲ.ಪ್ರತಿ

ದಿನ ಸಾಯಂಕಾಲ ಟೀ ಕುಡಿದಿದ್ದೆ ವಾಕ್ ಹೋಗೋದು ತರಾಸು

ರಂಗಮಂದಿರದ ಹತ್ರ ಬೇವಿನಮರದ ಕೆಳಗಿರೊ ಸಿಮೆಂಟ್ ಬೆಂಚುಗಳ

ಬಳಿ ಮಿತ್ರರೆಲ್ಲಾ ಸೇರಿ ಲೋಕಾರೂಢಿ ಮಾತಾಡಿ ,ಹರಟೆ ಹೊಡ್ದು

ವಾಮನೆ ಕಡೆ ಹೊರಟ್ರೆ ಅಂದಿನ ದಿನಚರಿ ಮುಗಿದ ಹಾಗೆ.ಬೇರೆ ಯ್ಯಾವ

ಹವ್ಯಾಸಗಳೂಯಿಲ್ಲ.ಆದ್ರೆ ಏನಾದ್ರೂ ಕೆಲ್ಸ ಮಾಡ್ತಾನೆ ಇರ್ತಾರೆ.

ಮನೆ ಕಟ್ಟೋದು ಸರಿ.ಆಮೇಲೆ ಏನೇನಾದ್ರೂ ರಿಪೇರಿ ಕೆಲ್ಸಗಳು

ಇದ್ದೇ ಇರ್ತಾವೆ.ತಿಂಗಳ ಹಿಂದೆ ಬೋರಿನ ಮೋಟ್ರು ಕೆಟ್ಟೊಯ್ತು.

ಆರು ಸಾವಿರ ಕೊಟ್ಟು ರಿಪೇರಿ ಮಾಡ್ಸಿದ್ದಾಯ್ತು.ಅದು ಮುಗಿದ ಹಾಗೆ

ನೀರಿನ ಫಿಲ್ಟರ್ ಕೆಲ್ಸ ಮಾಡ್ತಾಯಿಲ್ಲಾಂತ ಹೆಂಡ್ತಿ ಮಂಜಮ್ಮನ ಒದ್ದಾಟ.

ಕಂಪನಿಯವರಿಗೆ ಪೋನ್ ಮಾಡಿದ್ರೆ ಈ ವಾರದಲ್ಲಿ ಬರ್ತೀವಿ ಅಂತಾರೆ.ಈ ವಾರ ಅಂದ್ರೆ
ಯಾವ ವಾರ ? ಪ್ರಶ್ನೆಮಾಡಿದ್ರೆ, ನಾವೇ ಪೋನ್ ಮಾಡ್ತೀವಿ

ಅಂತೇಳಿ ಕಾಲ್ನ ಕಟ್ ಮಾಡ್ತಾರೆ.ಸರಿ.ಅವರು ಬರೊವರೆಗೂ ಎಪ್ಪತ್ತು ವರ್ಷಗಳ

ನಾಗರಾಜಪ್ಪಂಗೆ ನೀರಿನ ಕ್ಯಾನ್ ಹೊರಗಡೆಯಿಂದ ತರಬೇಕು.ಸಧ್ಯ, ಸರ್ವೀಸ್

ಇದ್ದೋಗಲೆ ಪುಟ್ಟದೊಂದು ಮನೆ ಮಾಡಿಕೊಂಡಿದ್ದಕ್ಕೆ ಬಚಾವ್.ಇಲ್ಲಾಂದ್ರೆ

ಈ ಮನೆಯಿಂದ ಆ ಮನೆಗೆ ಅಂತ ಬದಲಾಯಿಸೋಕೆ ಎಷ್ಟು ಕಷ್ಟ ಆಗ್ತಿತ್ತೊ.

ಮನೇಲಿ ಹೆಂಗಸರು ತಣ್ಣಗಿದ್ರೆ ,ಗಂಡಸರಿಗೆ ಆಯುಸ್ಸ ಜಾಸ್ತಿಯಂತೆ.

ಆದರೆ ಅದು ಸಾಧ್ಯವಾ ? ರೂಮಿನ ವಾಲ್ ಡ್ರೊಬ್ನ ಬಾಗ್ಲು ತಗಿಯೊಕೆ
ಬರ್ತಾಯಿಲ್ಲ. ಯಾರಾದ್ರೂ ಕಾರ್ಪೆಂಟ್ರಿಗೆ ಹೇಳ್ರಿ ಅಂತ ಮಂಜಮ್ಮಹೇಳ್ತಾನೆಯಿದ್ದು,
ಕೊನೆಗೆ ಅದು ಬೆಳಗಾದ್ರೆ ಸಾಕು ಜಗಳ ಶುರುವಾಗ್ತಾಯಿತ್ತು.ಇದನ್ನ ತಪ್ಪಿಸೋಕೆ
ಅಂತ್ಲೇ ಮಂಜಮ್ಮನ ಎದೂರಿಗೆ ಫೋನ್ ಮಾಡಿ, ಸಮಸ್ಯೆನೆಲ್ಲಾ ವಿವರಸಿದ್ರೆ

ಸರ್, ಅದು ವಾಲ್ಸ ಹೋಗಿರ್ತಾವೆ.ಹೊಸ್ದು ತರಬೇಕಾಗುತ್ತೆ......ಅಂತ.ರಾಗ

ಎಳೆದದ್ದೂ ಅಲ್ದೆ ,ಹುಡುಗ್ರು ಕೆಲಸಕ್ಕೆ ಸರಿಯಾಗಿ ಬರ್ತಾಯಿಲ್ಲ. ನಾನು
ಕಳಿಸಿ ಕೊಡ್ತೀನಿ ಅಂದೋನು ಪತ್ತೆಯಿಲ್ಲ.ಪೋನ್ ಮಾಡಿದ್ರೂ
ತಗಿಯೋದೆಯಿಲ್ಲ.

ನಾಗರಾಜಪ್ಪನ ಚಿಂತೆಗಳಿಗೆಲ್ಲಾ ಹೊಸ ವಿಚಾರವೊಂದು ಹೊಳೆಯಿತು.ಕಂಪನಿ

ಯೊಂದಿದ್ದು ಅಲ್ಲಿ ಯಾವುದೇ ರಿಪೇರಿಗಳನ್ನಾಗಲಿ ಅವಶ್ಯಕತೆ ಇರೋರಿಗೆ

ಪಟ್ಟಂತ ಮಾಡ್ಕೋಟ್ರೆ ಎಷ್ಟು ಚೆನ್ನಾಗಿರುತ್ತೆ.ಯೋಚಿಸ್ತಾ ಮುಖದಲ್ಲಿ

ಸಣ್ಣ ಮುಗುಳ್ನಗೆ ಹಾದು ಹೋಯ್ತು. ಸಬ್ ರಿಜಿಸ್ಟ್ರಾರ್ ಆಫೀಸಿನ್ನೋರು
ಅಳತೆಗೆ

ಬರೋ ಹಿಂದಿನ ದಿನವೇ ಹೊಲದಲ್ಲಿ ಬೆಳೆದಿದ್ದ ಗಿಡ ಗಂಟಿಗಳನ್ನೆಲ್ಲಾ ಕೀಳಿಸಿ

ಅಳತೆ ಮಾಡೋಕೆ ಸಲೀಸು ಮಾಡ್ಸಿ ಬೆಳಿಗ್ಗೆ ಎಂಟು ಗಂಟೆಗೆ ಹೊಲದ ಹತ್ತಿರ

ಇರಬೇಕೂಂತ ಹೇಳಿದಂಗೆ ಹೋಗಿದ್ದು.ಬಾವಿ ಆದ್ಮೇಲೆ ಹೊಲದ ಪೂರ್ವಕ್ಕೆ

ಮಾಲಿಂಗನ ಹೊಲವಿದ್ದು ಅವನೂ ಬಂದ. ಉತ್ತರ್ರಕ್ಕೆ ಬಸರಾಜಣ್ಣಂದು

ಆ ಯಪ್ಪ ಪಾಪ, ಏನೂಂದೂ ತಕರಾರಿಲ್ದಂಗೆ ಟೈಮ್ಗೆ ಸರಿಯಾಗಿ ಬಂದ.

ದಕ್ಷಿಣಕ್ಕೆ ಗೋಮಾಳಕ್ಕೆ ಬಿಟ್ಟ ಬಯಲು.ಪಶ್ಚಿಮಕ್ಕೆ ಈ ಮನೆಹಾಳ

ಸುಧೀರಂದು.ಎಷ್ಟು ಕಾಟ ಕೊಡ್ತಾಯಿದಾನೆ.ಅಳ್ತೆ ಮಾಡೋರು ಎಲ್ರು

ಬಂದ್ರಾ ಸರ್. ಅಂದಾಗ ತಡಿಯಪ್ಪಾ ಆ..ಇನ್ನೊಬ್ಬ ಬಂದಿಲ್ಲ.ಪೋನ್

ಹಾಕ್ತೀನಿ .ಅಷ್ಟು ಗಿಳೀಗೆ ಹೇಳಿದಂಗೆ ಹೇಳಿದೀನಿ.ಅಂತ ನಂಬರುಗಳ್ನ

ಒತ್ತಿ ಕಿವೀಗೆ ಇಕ್ಕತಿದ್ದಂಗೆ ಕೇಳ್ಸಿದ್ದು ಸ್ವಿಚ್ಆಫ್ !ಏನ್ ಮಾಡಾನ

ಇವ್ನ ಅಂತ ನಾಗರಾಜಪ್ಪ ಅವನಿಲ್ದೆ ಆಗಲ್ವೊ ? ಅಳ್ತೆಯವ್ನ

ಕೇಳಿದಾಗ ನೆಪ ಸಿಕ್ರೆ ಸಾಕಂತ ಇದ್ದ ಅವ್ರು ಇಲ್ಲ ಇಲ್ಲ

ಅಕ್ಕ ಪಕ್ಕೊದ್ದೀರೆಲ್ಲಾ ಇರ್ಲೆಬೇಕು ಅಂದಾಗ ಮತ್ತೆ ಹೆಂಗಪಾ ನೀವೆ

ಹೇಳ್ರಿ ,ನಾನು ಇದೆ ಡಿಪಾರ್ಟಮೆಂಟ್ನಲ್ಲಿ ರಿಟೈರ್ಡ ಆಗೀದಿನಿ. ನಮ್ಗೆ

ಚಳ್ಳೆಹಣ್ಣು ತಿನ್ನಿಸ್ತಾರೆ.ಅಂದ್ಕೊಂಡು ,ಸರಿಯಪ್ಪ ನೀವೆ ನೋಟೀಸ್ ಹಾಕಿ

ಅಂದು ಹಂಗೆ ಹೋಗ್ಬೇಡ್ರಿ ಊರಾಗೆ ಮಲಿಯಾಳಿ ಹೊಟ್ಲಾಗೆ ಟೀ

ಕುಡೀವಿರಂತೆ ಸಮಾಧಾನ ಮಾಡೋದ್ರಲ್ಲಿ ಪೇಚಾಡ್ತಿದ್ರು.ಅಯ್ ನಾವು

ಬಂದಿದ್ದು ವೇಸ್ಟ ಆತು ನೋಡು.ನಮ್ಗು ಕೆಲ್ಸಗಳು ಇದ್ವು.ಕೆಲವ್ರು
ಗೊನಿಕ್ಕಂಡ್ರು.

ಅವ್ರಿಗೆಲ್ಲಾ ಟೀ ,ಮಿರ್ಚಿ ಕೊಡಿಸಿ ತಾನು ಬೈಕನ್ನಾಗೆ ದರ್ಗಕ್ಕೆ ಬಂದು ಹಂಗೆ

ಪೇಟೆಯೊಳ್ಗೆ ಎರಡು ಡಜನ್ ಚುಕ್ಕಿಬಾಳೆ ತಂಗಂಡು ಮನಿಗೋಗಿ ಬಾರಿ

ಬೇಜಾರನಾಗೆ ಸುಮ್ಮಕೆ ಕಣ್ಮುಚ್ಕೊಂಡು ಕುಂತಬಿಟ್ರು.ನಡುಮನಿಯೊಳ್ಗೆ

ದಪ್ಪ ಅಕ್ಕಿ ಕ್ಲೀನ್ ಮಾಡ್ತಿದ್ದ ಮಂಜಮ್ಮ ಇದೇನ್ ? ಹಿಂಗೆ
ಕೂತ್ಬಿಟ್ರಿ ,ಏನಾತು ?

ಗಾಬ್ರಿಯಿಂದ ಅವುರ್ರ ಕಡೆಗೆ ನೋಡಿದ್ಲು.ಆಕೆ ಮಾತು,ವರಸೆ ಒರಟಾದ್ರೂ

ಹೃದಯ ಒಳ್ಳೆದು.ಈ ಕೆಲ್ಸ ಆಗಲ್ಬಿಡು.ಆ ಸುಧೀಂದ್ರ ಭಾರಿ
ಸೆಟೆತವ್ನೆ.ಹೊಲ್ದಾಗೆ ಎಲ್ರೂ ಕಲ್ತರೂ ಅವುನು ಬರ್ಲಿಲ್ಲ.ಮಂಜಮ್ಮಗೆ
ವಿಪರೀತ ಸಿಟ್ಟು ಬಂದು ,ಹೌದೇನು ಅವರಮ್ಮ ಗೀತ ನಂಗೇನು ಗೊತ್ತಿಲ್ಲೆ ,
ನಾನೆ ಹೋಗಿ ಆಕೇನ ಕೇಳ್ತೀನಿ ಬಿಡು. ಆಪಿ ಏನ್ ಹೊರಗ್ನವಳಲ್ಲಾ ಅಂತಲೇ
ತನ್ನ ಕೆಲ್ಸಗಳಲ್ಲಿ ಓಡಾಡಿಕೊಂಡಿದ್ಲು.ಇದೊಂದು ಕ್ಲೀಯರ್ ಆದ್ರೆ
ಮಕ್ಕಳಿಬ್ರೂಗೂ ಮುಂದೆ ತೊಂದ್ರೆ ಇರಲ್ಲ. ಈಗೆಲ್ಲಾ ನೋಡ್ತೀವಲ್ಲ ಮಕ್ಳು
ಯಾವುದಕ್ಕೂ ಸಂತೋಷಾನೆ ಪಡಲ್ಲ.ಏನಾದ್ರೂ ದೂರು

ಹೇಳ್ತಾನೆ ಇರ್ತಾರೆ.ತಾಯ್ತಂದೆಗಳ ಬಗ್ಗೆ ಆಸ್ತಿಯಿಲ್ಲಾಂದ್ರೆ ನಮ್ಮಪ್ಪಗಳು ಏನೂ ಮಾಡಿಲ್ಲ,ದುಡಿದಿದ್ದೆಲ್ಲಾ ಅವ್ರಿಗೆ ಆಯ್ತು ಅಂತಾರೆ.ಕಷ್ಟ ಪಟ್ಟು ಆಸ್ತಿ ಮಾಡಿದ್ರೆ ಒಂದಕ್ಕನ್ನ ರೆಕಾರ್ಡ್ ಸರಿಯಿಲ್ಲ, ಅಳತೆ ಸರಿಯಿಲ್ಲ .ಈಗ ನಾವು ಕೆಲ್ಸ ಬಿಟ್ಟು ಒದ್ದಾಡಂಗೆ ಆಗೇತಿ ಅನ್ನೋದು.” ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ “ಪದ್ಯ ನೆನಪಾತು.ಚಿತ್ರದುರ್ಗ ಟೌನಾಗೆ ಒಂದು ಮನೆ ಮಾಡಿದ್ದೆ ಸಾಹಸ ಆತು.ಹಿರೀಕರಿಂದ ಬಂದ ಹೊಲಾನ ಮಕ್ಕಳಿಗೆ ಉಳಿಸ್ಕಂಡಿದ್ದು ಇದೇನು ಸಣ್ಣ ಮಾತಲ್ಲ. ಸಬ್ ರಿಜಿಸ್ಟ್ರಾರ್ ಆಫೀಸ್ನಾಗಿದ್ರೂ ನಾಕು ಸೈಟ್ ,ದುಡ್ಡು ಮಾಡ್ಲಿಲ್ಲ. ಅನ್ನೊ ಆಪಾದನೆ ಮಕ್ಕಳು ಹೆಂಡ್ತಿಯಿಂದ ಇತ್ತು. ಇನ್ನು ಕೆಲ್ಸ ಮಾಡೊ ಕಡೆ ತಾವು ತಿನ್ನಲ್ಲ, ತಿನ್ನೋರಿಗೂ ಬಿಡಲ್ಲಾಂತ ಸಹೋದ್ಯೋಗಿಗಳಿಂದ ಹಿಡ್ದು ಜವಾನನವರೆಗೆ ಸಿಡಿ ಮಿಡಿ ಮಾಡಿಸ್ಕೋತಾನೆ ಸರ್ವೀಸ್ ಮುಗೀತು. ನಿಯತ್ತಿನ ಜೀವನಕ್ಕೆ ಬೆಲೆಯೇಯಿಲ್ಲ ಇದರಿಂದ ಹೆಂಡ್ತಿ ಮಕ್ಕಳಾದಿಯಾಗಿ ಬಹಳಷ್ಟು ಜನರ ದ್ವೇಷ ಕಟ್ಕೊಬೇಕಾಯ್ತು. ಇಬ್ರು ಮಕ್ಳು ಇಂಜಿನಿಯರಿಂಗ್ ಮಾಡಿ ಕೆಲಸದಲ್ಲಿದ್ರೂ ಸಮಾಧಾನವಿರಲಿಲ್ಲ.ನೀವು ಎಷ್ಟು ಆಸ್ತಿ ಮಾಡಬಹುದಿತ್ತಲ್ಲಪ್ಪಾ, ಈಗೆಲ್ಲಾ ಭೂಮಿಗೆ ಎಷ್ಟು ಬೆಲೆಯಿದೆ.ಆಗೆಲ್ಲಾ ಕಮ್ಮಿ ಬೆಲೆ.ಇನ್ನೂ ಜಮೀನು, ಸೈಟ್ಗಳು ಕೊನೇಪಕ್ಷ

ಒಳ್ಳೆ ಡೂಪ್ಲೆಕ್ಸ್ ಮನೇನಾದ್ರೂ ಕಟ್ಬಿದ್ರಾ ? ಇಲ್ಲ. ಬರೀ ನಿಯತ್ತು ನಿಯತ್ತು ಅಂದ್ರೆ ಸಮಾಜದಲ್ಲಿ ತಲೆಯತ್ತಿ ನಿಲ್ಲಕ್ಕಾಗಲ್ಲ.ಮನೆಗೆ ಬಂದಾಗಲೆಲ್ಲಾ ವರಾತ.ಈ ಸಾರಿ ಯುಗಾದಿ ಗಂತ ಬಂದಾಗ ಆ ಇರೊ ಹೊಲನಾದ್ರೂ ಸರಿಯಾಗಿ ಅಳ್ತೆ ಮಾಡ್ಸಿ.ನಮ್ಗೆ ತೊಂದ್ರೆ ಆಗದಂಗೆ ಮಾಡಿ.ಇವರ ಧಾಟಿಗೆ ಉತ್ತರ ಹೇಳೊ ಸ್ಥಿತೀಲಿ ನಾಗರಾಜಪ್ಪ ಇರಲಿಲ್ಲ. ಎಲ್ಲಾದ್ರೂ ಕೇಳ್ಲಿ, ತನ್ನ ಬಗ್ಗೆ ಕೆಟ್ಟ ಹೆಸರಿಲ್ಲ.ಅಷ್ಟು ಮಾಡಿದ್ರೆ ಸಾಲ್ದ, ಕಪ್ಪು ಚುಕ್ಕೆ ಇಲ್ದಂಗೆ ಸಂಸಾರವನ್ನು ಸರ್ವೀಸನ್ನೂ ನಿಭಾಯಿಸಿ,ಜೀವನಕ್ಕೇನೂ ತೊಂದ್ರಯಿಲ್ಲ.ಆದ್ರೂ ಮಕ್ಕಳಿಗೆ ಸೊಸೆಯರಿಗೆ ಸಾಲ್ದು.ಇಲ್ಲ ಇಲ್ಲ ಅಂತಾನೆ ಇರ್ತಾರೆ.ನೆಮ್ಮದಿ ಜೀವನಕ್ಕೆ ಇನ್ನೆಷ್ಟು ಬೇಕು.

ಕೊನ್ಗೆ ಎಲ್ರೂ ಹೋಗೊದು ಒಂದೆ ಜಾಗಕ್ಕೆ ಅನ್ನೊ ವಿವೇಕ ಕಳಕೊಂಡು ಇರೊ ಸುಖವಾದ ಜೀವನದ ಮಹತ್ವ ತಿಳಿಯೋದೆ ಇಲ್ವಾ? ಇವರೆಲ್ಲ ದಡ್ಡರು ಅಂತಾನೆ ನಾಗರಾಜಪ್ಪ ನಿರ್ಧರಿಸಿದ್ರು.ಈಗ ಹೊಲದ ಅಳತೆಗೆ ತಕರೋರು ಆಗಿರೋದು ಮಕ್ಕಳಿಗೆ ಹೇಗೆ ಹೇಳೋದೂಂತ ಮುಖ ಸಣ್ಣಗೆ ಮಾಡಿಕೊಂಡು ಒಳಗೆ ಒದ್ದಾಡ್ತಾಯಿದ್ರು.

ತಂದೆ ,ಮಕ್ಕಳಿಗೆ ಹೀಗೆ ಸಾಬೀತು ಮಾಡುವ ಪ್ರಮೇಯ ಹಾಗೂ ಸಾಬೀತು ಮಾಡುವಲ್ಲಿ ಸೋಲುವುದು,ಪ್ರಯತ್ನಿಸುವುದು ಈ ಸಂಕಟಗಳು ಮಕ್ಕಳಿಗೆ ವಯಸ್ಸಿನಲ್ಲಿ ಅರ್ಥವೆ ಆಗುವುದಿಲ್ಲ ಅನ್ಸುತ್ತೆ. ಈ ಸಲ ಬಂದಾಗ ಕೇಳಿಯೆ ಕೇಳ್ತಾರೆ .ಮನೇಲಿ ಇರ್ತೀರಾ, ಒಂದಿಷ್ಟು ಅಳತೆ ಮಾಡಿಸೋಕೆ ಆಗಲ್ವಾ? ಅಷ್ಟು ಸರ್ವೀಸ್ ಮಾಡಿದೀರಾ? ಪ್ರಶ್ನೆಗಳ ಸುರಿಮಳೆ.ತಂದೆ ಮಾಡಿದ್ದೆಲ್ಲಾ ಕಮ್ಮಿಯಾಗೆ ಕಾಣುತ್ತೊ ಏನೊ ? ಕೆಲವೊಂದು ಲೋಕಾರೂಢಿಗಳು ನಿರಂತರಹವಾಗಿರ್ತವೆ ಎಂಬುದರಲ್ಲಿಯೆ ನಂಬಿಕೆಯಿಟ್ಟು ಮನಸ್ಸನ್ನು ಹತೋಟಿಗಿಡಲು ಪ್ರಯತ್ನಿಸುತ್ತಾ ಅಲ್ಲಾ, ಈ ಸುಧೀಂದ್ರ ಎಂಥಾ ಐನಾತಿ ಮನಷ್ಯ. ಇನ್ನು ವಯಸ್ಸು ಚಿಕ್ಕದಾದ್ರೂ ,ಹಿರೀಕ್ರು ಜೊತೆ ಗಿರ್ಮಿಟ್ ಮಾಡ್ತಾನಲ್ಲಾ.ಇವ್ನ ಒಳ್ಳೆ ರೀತಿನಾಗೆ ಹೆಂಗೆ ದಾರೀಗೆ ತರೋದೂಂತ ಯೋಚಿಸ್ತಾ ಹಳೆದೆಲ್ಲಾ ನೆನಪಾಗ ತೊಡಗಿತು.ಆಗಿನ್ನೂ ಸೈಟ್ ತಗೊಂಡ ಕಾಲ.ಮನೆ ಚಿಕ್ಕದಾದ್ರೂ ಗಿಡಮರಗಳ್ಗೆ ಜಾಗ ಬಿಟ್ಟೇ ಬಿಡಬೇಕೂಂತ ಮನೆ ಕಟ್ಟೊ ಮುಂಚೆನೆ ಎರಡು ಮಾವಿನ ಮರಗಳ್ನ ಹಾಕ್ಸಿದ್ರು.ಎಂತ ದೊಡ್ಡ ಮನೆಯಾದ್ರೇನು ಗಿಡಗಳು ಇಲ್ಲಾಂದ್ರೆ ಏನು ಚೆಂದ ? ಮರದ ನೆಳ್ಳು ಮನೆಮೇಕೆ ಬಿದ್ರೆ ಒಳ್ಳೇದಂತೆ ಅನ್ನೋ ಮಾತು ಹಿಂದಿಂದ ಬಂದದ್ದೆ. ಮಕ್ಕಳು ಬೆಳೆದ ಹಾಗೆ ಮರಗಳೂ ಬೆಳದ್ವು.ಮನೇನೂ ಆಯ್ತು.ಮಂಜಮ್ಮ ಇರೊ ಜಾಗದಲ್ಲಿ ಬದ್ನೆ,ಹಸಿಮೆಣಸು, ಸೊಪ್ಪು ಹೀಗೆ ಬೇಕಾದ್ದೆಲ್ಲಾ ಬೆಳಿಯೋಳು.ಬಾಯಿ ಜೋರೆ ಆದ್ರೂ ಗಟ್ಟಿಯಾಗೆ ಕೆಲ್ಸ ಮಾಡೋಳು

ಹಳ್ಳಿಯಿಂದ ಬಂದೊಳು,ಟೌನ್ನಲ್ಲಿದ್ರೂ ಹಳ್ಳಿ ಸೊಗಡು ಬದ್ಲಾಗಿಲ್ಲ ಅಲ್ಲಾ ಮಕ್ಕಳು ಚಿಕ್ಕೋರಿದ್ದಾಗ ಪರದಾಟಗಳಾದ್ರೂ ಎದ್ರುಸ್ಕೊಬಹುದು. ಆಗ ಶಕ್ತಿನು, ಪ್ರಾಯನೂ ಇರುತ್ತೆ.ಈಗ ಶಕ್ತಿನು ಕುಂದಿ, ಪ್ರಾಯಾನೂ ಇಲ್ಲಾದಾಗ ಕಡ್ಡಿನೂ ಗುಡ್ಡದಂಗೆ ಕಾಣೋದು.ಮಾವಿನ ಮರಗಳು ದೊಡ್ಡವಾಗಿ ಪ್ರತಿ ವರ್ಷ ಹಣ್ಣುಗಳೊ ಹಣ್ಣುಗಳು. ಖಾಲಿಯಿದ್ದ ಪಕ್ಕದ ಸೈಟ್ನಲ್ಲಿ ಮನೆ ಕಟ್ಕೊಕೆ ಶುರು ಮಾಡಿದ್ರು.ಮಧ್ಯೆ ಒಂದೂವರೆ ಅಡಿ ಜಾಗ ಬಿಡಾಕೂ ಹಿಂದೆ ಮುಂದೆ ನೋಡಿ ಅಳತೆ ಸರಿಯಿಲ್ಲಾಂತ ಖ್ಯಾತೆ ತೆಗ್ದು ಗೋಡೆ ಎಬ್ಸಿದ್ರು. ಈಗ ಮರಗಳ್ಮೇಲೆ ಕಣ್ಣು. ನಿಮ್ಮ ಮರಗಳ ಹರಿಗಳು ನಮ್ಮ ಗೋಡೆಗೆಲ್ಲಾ ತಗುಲ್ತಾವೆ.ಒಣಗಿದ ಎಲೆ ಕಸವೆಲ್ಲಾ ನಮ್ಮ ಕಡೆಗೂ ಬೀಳತ್ತೆ. ಜೊತ್ಗೆ ಈ ಹಕ್ಕಿಗಳ ಕಾಟ ಬೇರೆ.ಅದಕ್ಕೆ ಮಾವಿನಹಣ್ಣುಗಳ್ನ ನಮ್ಗೂ ಕೊಡಿ ಅನ್ಬೇಕೆ ? ಶಿವಶಿವಾ.. ಎಂತಾ ಕಾಲ ಬಂತಪಾ ಅನ್ನಂಗಾಗಿ ವಸಂತಮ್ಮನ್ನ ಹಿಂಗೆ ಅನ್ಕಂಡಿರ್ಲಿಲ್ಲ.ಈ ಮರಗಳಿಂದ ನಮಗೆ ನೆಮ್ಮದಿಯಿಲ್ಲ.ರಾತ್ರಿಯೆಲ್ಲಾ ಗಾಳೀಗೆ ಸರಸರಾ ಶಬ್ದ. ಒಂದೊಂದು ಸಲ ಭಯ ಆಗುತ್ತೆ. ಹಿಂಗೇ ವರಾತ ಆಗಾಗ ಶುರುವಾತು.ಮಂಜಮ್ಮ ಮಾವ್ನಿಹಣ್ಣುಗಳನ್ನ ಅಕ್ಕ ಪಕ್ಕ ಹಂಚೇ ತಿಂತಿದ್ರು.ಆದ್ರೆ ಇವರ್ಗಿಗೆ ಯಾಕೆ ದುರಾಸೆ ಬಂತೊ ಏನೊ.ಈ ತಂಟೆಗಳ್ನೆಲ್ಲಾ ಹೆಂಗೆ ಬಗೆಹರಿಸೋದೂಂತ ಯೋಚ್ನೆಗಿಟ್ಕಂಡು ಹೆಂಡ್ತಿಗೆ ನೀನೆ ಮಾತಾಡು ಅಂತ ಹೇಳಾನ ಅಂದ್ರೆ ಮಂಜಮ್ಮ ಸುಮ್ನೆ ಲಾಜಿಕ್ ಇಲ್ದಂಗೆ ಜೋರ್ ಬಾಯಿಮಾಡಿ ಒಂದು ಹೋಗಿ ಎರಡಾದೀತು.ಏನಾದ್ರು ಒದ್ರುಕೊಂಡ್ಲಿ ಕೇಳಿಸಿದ್ರೂ ಕೇಳಸ್ದಂಗೆ ಇದ್ರಾಯಿತು.ಎದುರುತ್ತರ ಕೊಡ್ದೆ ನಾಗರಾಜಪ್ಪ ಸುಮ್ಮನಾದ್ರು.ಆಮೇಲೆ ಹದ್ನೈದು ದಿನ ಬಿಟ್ಟು ಮನೆದೇವ್ರು ಪೂಜೆಗೇಂತ ಕಲ್ಯಾಣದುರ್ಗಕ್ಕೆ ಹೋಗಿ ಎರಡು ದಿನಯಿದ್ದು ಮನ್ಗೆ ಬಂದ್ರೆ ನಂಬೊಕೆ ಆಗ್ಲಿಲ್ಲ.ಬುಡಬಿಟ್ಟು ಮಾವ್ನಿಮರದ ಹರಿಗಳ್ನೆಲ್ಲಾ ಕಡ್ದು ಹಾಕಿದಾರೆ.ತಲೆಮ್ಯಾಲೆ ಕೈಹೊತ್ತು ಕೂತಿದ್ದೆ ಬಂತು.ಮಂಜಮ್ಮ ಬಿಡ್ಬೇಕಲ್ಲ ,ದೇವ್ರು ಮೆಚ್ತಾನ ನಿಮ್ಮ ಕೆಲ್ಸಾನ ?ಹೊರಾಗ ಬರ್ರೀ..ಅಂತ ಎಷ್ಟು ಅರಚಿಕೊಂಡ್ರು ಹೊರಾಗೆ ಯಾರೂ ಬರ್ಲೆಯಿಲ್ಲ. ಕಡ್ದಿರೊ

ಮರ ನೋಡ್ಕಂಡು ಇಬ್ರೂನೂವೆ ಕಣ್ಣೀರಾಕಿದ್ರು.ಮರದ ಶಾಪ ನಮ್ಮ ಕಣ್ಣೀರಿನ ಶಾಪ ಅವರ್ಗೆ ತಟ್ದೆಇರುತ್ತಾ ಅಂತ ಗೋಳಾಡಿದ್ಲು. ಕಾಲಕೆಡ್ತೊ ಜನ ಕೆಡ್ತೊ ಅನ್ಕೊಂಡು ನೊಂದಿರೊ ಮರಗಳ್ಗೆ ಎರೆಡೆರಡು ಕೊಡ ನೀರಾಕಿ ಒಳಗ್ಬಂದು ಕೂತರು. ಆ..ಸಂಕ್ಟವಾ ಹೇಳಾಕಾಗ್ದು,ಅನುಭವಿಸಾಕಾಗ್ದು.ನಾಗರಾಜಪ್ಪ ರೈತ ಕುಟುಂಬದಿಂದ ಬಂದಿದ್ದರಿಂದ ಗಿಡ ಮರ ಅಂದ್ರೇನೆ ಸೆಳೆತ.ಮಣ್ಣು, ನೀರು ಇಲ್ದೆಯಿದ್ರೆ ಬದುಕೋಕೆ ಆಗತ್ತಾ ?ಚಿನ್ನ ಬೆಳ್ಳಿ ಇಲ್ದೆಯಿದ್ರೂ ಬದುಕು ಇದ್ದೇ ಇರತ್ತೆ. ಇದೆ ವಿಚಾರನ ಹೇಳೋಕೆ ಬಾಯಿ ತಗದ್ರೆ,ಸ್ವಂತ ಮಕ್ಕಳೆ ಬಾಯಿ ಮುಚ್ಚುಸ್ತಾರೆ. ಇನ್ನು ಮಂದಿ ಮಕ್ಕಳಿಗೆ ಹೇಳುವ ಕಾಲವಾ ಇದು. ನಾಗರಾಜಪ್ಪನ ಮನೆ ಹಿಂದಿನ ಖಾಲಿಯಾಗೇಯಿತ್ತು.

ಒನರ್, ಮನೆಗೆ ಜಾಗ ಬಿಟ್ಕಂಡು ಉಳಿದಂಗೆ ಅಂಚಿಗೆ ನಾಲ್ಕು ತೆಂಗಿನಮರಗಳ್ನ ನೆಟ್ರು, ಆಗಾಗ ಬಂದು ಜೋಪಾನ ಮಾಡಿ ಈಗ ಅವು ಫಲಕ್ಕೆ ಬಂದವೆ.ಆದ್ರೆ ಮನೆ ಕಟ್ಟೊ ಯೋಚ್ನೆ ಈಗ ಸಧ್ಯಕ್ಕೆ ಇಲ್ಲಾಂತ ಹೇಳ್ತಿರ್ತಾರೆ.ಖಾಲಿ ಸೈಟ್ಗೆ ಸುತ್ತೂ ಸಿಮೆಂಟ್ ಶೀಟ್ಗಳಿಂದ ಕಾಪೌಂಡ್ ಹಾಕ್ಸಿ ಬಂದೊಬಸ್ತ ಮಾಡ್ಸಿಕೊಂಡವರೆ .ಒನರ್ ಹೆಸರು ಪರಶುರಾಮಪ್ಪ,ಹೆಂಡತಿ ಶೈಲಾಮೇಡಂ ಅಂತಾರೆ.ಆಯಮ್ಮ ಯಾರ ಹತ್ರಾನೂ ಮಾತೆ ಆಡಲ್ಲ.ಆಗಾಗ ಗಂಡ ಹೆಂಡ್ತಿ ಇಬ್ರು ಕಾರ್ ಹಾಕ್ಕೊಂಡು ಬರ್ತಾರೆ.ಸೇಟ್ ನೋಡ್ಕಂಡು, ಅಲ್ಲೆ ಸ್ವಲ್ಪ ಹೊತ್ತು ನಿಂತು ಮಾತಾಡಿ ,ಸುತ್ತ ಮುತ್ತ ಹಂಗೆ ಕಣ್ಣಾಡ್ಸಿ ಹೋಗ್ತಾರೆ.

ಪರಶುರಾಮಪ್ಪ ಯಾರಾದ್ರೂ ಕಂಡ್ರೆ ಹಂಗೆ ಲೋಕಾರೂಢಿ ಮಾತಾಡ್ತಾರೆ ಖಾಲಿ ಸೈಟ್ನಲ್ಲಿ ಹಳೇ ಸಾಮಾನುಗಳ್ನ ಹಾಕ್ಕೊಂಡಿದ್ದಾರೆ.ಅದರಲ್ಲಿ ಒಂದು ಕಡೆ ಹಳೆಹೆಂಚುಗಳು,ಇನ್ನೊಂದು ಕಡೆ ಸೈಜ್ಕಲ್ಲುಗಳು. ಕಬ್ಬಿಣದಸಾಮಾನುಗಳು ಹೀಗೆ ಹಾಳೂಮೂಳು ಒಟ್ಕಂಡಿದ್ದಾರೆ.ಎಂದೂ ಮಾತಾಡದ ಶೈಲಾಮೇಡಂ ಮಂಜಮ್ಮನ್ನ ಕೂಗಿ ಮಾತಾಡ್ಸಿದ್ರು.ಮಂಜಮ್ನೋರೆ, ಮಂಜಮ್ಮನೋರೆ ಕೂಗೋದನ್ನ ಕೇಳಿ ಇದೇನಿದು ಕರೀತಿದಾರಲ್ಲ ಅಂದಕೊಂಡು ಹಿಂದಗಡೆ ಬಾಗ್ಲು ತೆಗ್ದು ,ಏನು ಚೆನ್ನಾಗಿದೀರಾ ? ಅನ್ಕೋತಾ ಬಂದ್ರು.ಶೈಲಾಮೇಡಂ ಹತ್ತಿರಕ್ಕೆ ಬರುತ್ತಾ, ನಮ್ಮ ತೆಂಗಿನಮರಗಳು ಫಲಕ್ಕೆ ಬಂದ ಮೇಲೆ ತೊಂದ್ರೆ ಆಗಿದೆ. ತೆಂಗಿನಕಾಯಿಗಳು ಮೇಲಿಂದ ಬಿದ್ದಾಗ ಕೆಳಗಿರೊ ಹೆಂಚುಗಳು ಒಡೆದು ಹೋಗ್ತಾಯಿವೆ ಅಂತ ಹೇಳ್ತಾಯಿದ್ದ ಹಾಗೆ ಮಂಜಮ್ಮ ಮಧ್ಯೆ ಬಾಯಿ ಹಾಕಿ ಈ ಹಳೆಹೆಂಚಗಳ್ನ ತಗೊಂಡು ಏನು ಮಾಡ್ತೀರಿ. ಯಾರಿಗಾದ್ರು ಮಾರಿಬಿಡಿ.ಹಂಗೆ ಈ ಕಬ್ಬಿಣಾನು ತುಕ್ಕು ಹಿಡಿತಾಯಿದೆ ಎಲ್ಲಾ ಗುಜ್ರಿಗಾಕಿ ಕೈ ತೊಳ್ಕಂಬಿಡ್ರಿ.ಸುತ್ತು ಸೈಟಲ್ಲಿರೊ ಹಳೆ ಸಾಮಾನುಗಳನ್ನೆಲ್ಲಾ

ನೋಡಿ ,ಬರ್ತಿನಿ ಅಂತ ಸೆರಗನ್ನು ಸಿಗಿಸ್ಕೋತ ಹೊರಟ್ರು.ಶೈಲಾಮೇಡಂ ಅವರನ್ನ ತಡೆದು ,ಮಂಜಮ್ಮನ್ನೋರೆ ಒಂದೆ ನಿಮಿಷ ,ನಾವೂ ಮುಂದಿನ ವರ್ಷ ಮನೆ ಕಟ್ತೇವೆ.ನಮ್ಗೆ ಹಳೆ ಸಾಮಾನುಗಳು ಅಂದ್ರೆ ತುಂಬಾ ಸೆಂಟಿಮೆಂಟು. ಹೊಸಮನೆ ಕಟ್ಸಿದಾಗ ಈ ಹಳೆ ಹೆಂಚುಗಳಿಂದ ಡಿಸೈನ್ ಛಾವಣಿ ಮಾಡಿಸಬೇಕು.ಇನ್ನು ಸ್ವಲ್ಪ ದಿವಸ ನಿಮ್ಮ ಮನೆಯ ಹೊರಗಡೆ ಗೋಡೆಗೆ ಒರಗಿಸಿ ಇಟ್ಕೊರ್ತೀವಿ.ಏನೂ ಅಂದ್ಕೊಬೇಡಿ.ನೀವು ತುಂಬಾ ಒಳ್ಳೆಯ ಜನಾಂತ ನಮಗೆ ಗೊತ್ತು. ನಾಳೆ ಕೆಲಸದ ಹುಡುಗ ಬಂದು ಜೋಡ್ಸಿ ಹೋಗ್ತಾನೆ.ನಿಮಗೆ ಏನೂ ತೊಂದರೆ ಆಗಲ್ಲ .ಹೀಗೆ ನಿರಾಯಾಸವಾಗಿ ಹೇಳಿದಾಗ ಮಂಜಮ್ಮಗೆ ಬಾಯೆ ಕಟ್ಟಿಹೋಯ್ತು.ಆದ್ರೂ ಬಿಡ್ದೆ, ಹಳೆ ಸಾಮಾನುಗಳು ಇಲ್ಲೆ ಇದ್ರೆ ಒಂದು ಲೆಕ್ಕ. ನಮ್ಮನೇಲಿ ಮಕ್ಕಳು ಮೊಮ್ಮಕ್ಕಳು ಓಡಾಡ್ತಾರೆ.ಹುಳಹುಪ್ಪಡಿ ಸೇರ್ಕಂಡ್ರೆ ಕಷ್ಟ. ಶೈಲಾ ಮೇಡಂ ಬಿಡೊ ತರ ಕಾಣಲಿಲ್ಲ.ಸ್ವಲ್ಪ ದಿನಗಳು ಅಷ್ಟೇ.. ಮಂಜಮ್ಮ ಪ್ಲೀ…ಜ್… ರಾಗ ಎಳೆದಾಗ ,ಆಯ್ತು ಅನ್ನೊಂದು ಬಿಟ್ಟು ಬೇರೆ ದಾರಿನೆ ಇರಲಿಲ್ಲ.

ಸಾಯಂಕಾಲ ಟೀ ಕುಡೀತಾ ಮಂಜಮ್ಮ ಗಂಡನಿಗೆ, ಸಾಕಾಗೋಗೈತೆ ಈ ಜನ್ಗಳ ಸಾವಾಸ.ಒಬ್ರಿಗಿಂತ ಒಬ್ಬರು.ಒಬ್ರ ಮ್ಯಾಲೆ ಇನ್ನೊಬ್ರು ಸವಾರಿ ಮಾಡಿದ್ರೂ.ಮಾಡಿದ್ದೆ.ನಮ್ಮ ಕೈ ಕೆಳಗೆ ಇದ್ರೆ ಅವುರನ್ನ ಹಿಂಡಿ ಹಿಪ್ಪೆ ಮಾಡೋದೆನಾ ? ಉತ್ತರಕ್ಕಾಗಿ ನೋಡಿದಳು.ಏ… ನೀನು ಯ್ಯಾ …ವಿಷ್ಯಕ್ಕೆ ಮಾತಾಡ್ತಿದಿಯಾ ?ಭಲೆ ವೇದಾಂತಿಯಾಗಿದಿಯಾ ? ನಾಗರಾಜಪ್ಪಂಗೆ ನಗು ಬಂತು. ನೀನು ಬ್ಯಾರೆಯವರ ಬಗ್ಗೆ ಯೋಚಿಸ್ತಾಯಿದೀಯಲ್ಲಾ ?

ನಮ್ಮ ಮಕ್ಕಳು ಮಾಡೋದು ಹಿಂಗೆ ತಾನೆ ? ಮಾಡೋ ಅಷ್ಟು ನ್ಯಾಯವಾಗಿ ಮಾಡಿರ್ತೀವಿ.ಅವರವರ ಕಾಲದಲ್ಲಿ ಅವರ ಶಕ್ತಿ, ಭಕ್ತಿ ಇದ್ದಂಗೆ ಜೀವನ ಸಾಗಿರ್ತದೆ .ಈಗ ನಾವು ಆರಾಮಾಗಿರೊ ಕಾಲದಾಗೆ ,ತಮ್ಮ ವಿಚಾರಗಳ್ನ, ಕೆಲ್ಸಗಳ್ನ ನಮ್ಗೆ ಹಾಕ್ತಾ ಹಾಕ್ತಾ ,ನಾವು ಏನು ಅನ್ನೋದೆ ಮರಿತಾ ಇದ್ದೀನಿ. ಜೊತ್ಗೆ ನೀವು ಹಂಗೆ,ನೀವು ಹಿಂಗೆ ಕೇಳಿ ಕೇಳಿ ಸಾಕಾಯ್ತು.ಮಾಡಿಟ್ಟಿದ್ದನ್ನ ಬೇಡ ಅಂತಾರ ? ಹಂಗೆಲ್ಲಾ ಅನ್ನಲ್ಲ. ಎಲ್ಲಾ ಬೇಕು.ಅಪ್ಪಂದೂ ಬೇಕು. ಅಜ್ಜ ಮಾಡಿರೋದೂ ಬೇಕು.ಅಂದ ಮ್ಯಾಲೆ ಅನ್ನೊದ್ಯಾಕೆ ? ಮಾತಾಡಿದ್ರೆ ಬೇಕಾದಷ್ಟೈತೆ.ಮಂಜಮ್ಮನ ಮುಖವನ್ನೆ ದಿಟ್ಟಿಸಿ ನೋಡ್ತಾ ಎದ್ರುಸೊ ಶಕ್ತಿ ನಾವು ಕಳ್ಕಂಡ ಮ್ಯಾಗೆ ಒತ್ತುವರಿ ಮಾಡೆ ಮಾಡ್ತಾರೆ.ಇಷ್ಟಿಷ್ಟೇ ಆವರಿಸ್ತಾ ಆವರಿಸ್ತಾ ಬಂದ ಹಾಗೆ ನಾವೆ ಇಲ್ಲವಾಗ್ತೀವಿ.ಅನಿಸ್ಕಂಡ್ ಅನಿಸ್ಕಂಡ್ ಮೈಯೆಲ್ಲಾ ಮುಳುಗಿದ ಮ್ಯಾಲೆ ನಾವೆಲ್ಲಿರುತೀವಿ ? ಸುಧೀಂದ್ರನ ಕೃಷಿಹೊಂಡ ಬೆಳಿತಾ ಬೆಳಿತಾ ಹೊಲ ದಾಟಿ ,ಹೊಲ ದಾಟಿ ಹೋಗೋದೆ ಆಯ್ತು.ಮನೆ ತುಂಬಾ ಹಳೆ ಹಂಚುಗಳು ತುಂಬಿ ಮನೆನೇ ಇಲ್ಲದಂಗಯಿತು.ಎಲ್ಲಿ ನೋಡಿದ್ರೂ ಸುಧೀಂದ್ರಗಳೆ,

ಶೈಲಾ ಮೇಡಂಗಳೆ .ತನ್ನ ಮಕ್ಕಳು, ಹೆಂಡ್ತಿ, ಅಧಿಕಾರಿಗಳು,ರಾಜಕೀಯದವರು ಕೊನೆಗೆ ತನ್ನ ಮುಖಾನೂ ಸುಧೀಂದ್ರನ ಮುಖದಂಗೆ ಕಾಣ್ತಾ ತಾನು ಯಾರು? ಎಲ್ಲಿದ್ದೀನಿ.ಅನ್ನೋದು ತಿಳಿದಂಗಾಯ್ತು.ಅಪ್ಪಾ,.ಈ ಸಲ ನಾವು ಬರೋಷ್ಟರಲ್ಲಿ

ಕ್ರಾಪ್ ಲೋನ್ ಮಾಡಿಸಿ.ಇಲ್ಲಿ ಅಪಾರ್ಟ್ಮೆಂಟ್ ಗೆ ಇ.ಎಮ್.ಐ ಕಟ್ಟಬೇಕು. ಅಪ್ಪಾ, ಮನೇಲಿದ್ದು ಏನ್ ಮಾಡ್ತೀರಿ.ಬೇಗ ಅದೆನೊ ಅಕ್ತೆ ಮಾಡ್ಸಿ.ನೀವಿದ್ದಾಗಲೆ

ಇದೆಲ್ಲ ಮಾಡ್ಲೇಬೇಕು.ಮುಂದೆ ನಮಗೆ ರಿಸ್ಕ್ ಮಾಡಬೇಡಿ.ಅಸೈನ್ಮೆಂಟ್ ತರ ಹೇಳಿದ್ರೂ ಹೇಳಿದ್ದೆ .ಜೀವನ ಸರಿಯಾಗಿರಬೇಕಾದರೆ ,ಕೆಲವೊಮ್ಮೆ ನಿರ್ಧಾರಗಳು

ತೀಕ್ಷ್ಣವಾಗಿರಬೇಕಾಗುತ್ತದೆ.ನಾಗರಾಜಪ್ಪನವರಿಗೆ ಜೀವನ ತುಂಬಾ ತೃಪ್ತಿ ತಂದಿತ್ತು.ಅವರು ಆರಕ್ಕೆ ಏರಲಿಲ್ಲ.ಮೂರಕ್ಕೆ ಇಳೀಲಿಲ್ಲ. ಯಾರಿಗೂ ತೊಂದ್ರೆ ಕೊಡ್ದೆ ತಮ್ಮ ಪಾಡ್ಗೆ ತಾವು ಬದುಕಿದವರು.ತೊಂದ್ರೆ ಕೊಡೋರಿಂದ ಸಾಕಷ್ಟು ದೂರವೆ ಉಳಿದವರು.ಈ ಸಲ ದೀಪಾವಳಿಗೆ ಪ್ರತಿ ಸಲದಂತೆ ಮಕ್ಕಳು, ಮೊಮ್ಮಕ್ಕಳು

ಸೊಸೆಯಂದಿರು ಸಂತೋಷವಾಗಿದ್ದರು.ನಾಳೆ ಹೊರಡುತ್ತಾರೆ ಅನ್ನುವಾಗ ಸಾಯಂಕಾಲ ಇಬ್ಬರು ಮಕ್ಕಳನ್ನು ವಾಕ್ ಹೋಗಲು ಕರೆದರು. ಬರಲು ನಿರಾಕರಿಸಿ ,ನಮ್ಗೆ ಕೆಲ್ಸಯಿದೆ ಎಂದಾಗ, ನಿಮ್ಮ ಹತ್ರ ಮಾತಾಡ್ಬೇಕು ಮನೇಲಿ ಬ್ಯಾಡ.ಅಂದಾಗ ಅನಿವಾರ್ಯವಾಗಿ ಹೊರಟ್ರು.ಸ್ವಲ್ಪ ದೂರ ಮೌನವಾಗೆ ನಡದ್ರು.ನಾಗರಾಜಪ್ಪನೆ ಮೊದ್ಲು ಮಾತು ಎತ್ತಿದ್ರು. ನನ್ನ ವಿದ್ಯೆ, ಬುದ್ದಿಗೆ ತಕ್ಕಂತೆ ಪ್ರಾಮಾಣಿಕವಾಗಿ ಕೆಲ್ಸ ಮಾಡಿ ಜೀವನ ನಡೆಸಿದ್ದೇನೆ.ನಿಮಗೂ ಕೈಲಾದಷ್ಟು ಮಾಡಿದ್ದೇನೆ.

ಇನ್ನು ಮುಂದಿನದು ನಿಮ್ಮ ಕೆಲಸ.ಹೊಲಾನ ನಿಮ್ಗೆ ಬೇಕಾದ

ಹಂಗೆ ಅಭಿವೃದ್ಧಿ ಮಾಡ್ಕಳಿ.ಮನೆ ಐತೆ ನಾವಿರೊವರಗೂ ಬಂದು ಹೋಗಿ.

ನಂತ್ರ ನಿಮ್ಮ ಬುದ್ಧಿ ಜ್ಞಾನವನ್ನ ಬಳ್ಸಿ.ನ್ಯಾಯವಾಗಿ ಬದುಕಿ.ನಿವೃತ್ತಿವೇತನದಲ್ಲಿ

ನಮ್ಮ ಜೀವನ ನಡಿಯುತ್ತೆ.ಇನ್ನು ಮುಂದಿನ ಕೆಲ್ಸಗಳನ್ನೆಲ್ಲಾ

ನೀವೆ ನಿಭಾಯಿಸ್ಬೇಕು. ಆಗಲೇ ನಿಮ್ಗೂ ಪ್ರಪಂಚ ಹೆಂಗಿದೆ ಅನ್ನೋದು

ಗೊತ್ತಾಗುತ್ತೆ.ಸಮಸ್ಯೆಗಳ್ನ ಕಳಕೋತ ನೀವು ಬೆಳಿಯೋದನ್ನ

ನೋಡಿ ಸಂತೋಷಪಡ್ತೇವೆ.ಹೇಳ್ತಾ ಹತ್ತಿರದಲ್ಲಿದ್ದ ಸಿಮೆಂಟ್ ಬೆಂಚಿನ

ಮೇಲೆ ಕುಳಿತರು.ಮಕ್ಕಳಿಬ್ರೂ ಆಶ್ಚರ್ಯಚಕಿತರಾಗಿ

ಅಪ್ಪನನ್ನುನೋಡ್ತಾಯಿದ್ದಾಗಲೆ, ನಾಗರಾಜಪ್ಪ ತಲೆಯೆತ್ತಿ ಸಂಜೆಯ ಆಕಾಶವನ್ನು

ದಿಟ್ಟಿಸಿದರು.ಅಲ್ಲಲ್ಲಿ ತೆಳು ಮೋಡಗಳಿದ್ದರೂ, ಸೂರ್ಯನ ಹೊಂಬೆಳಕಿನಿಂದ

ಅಲಂಕೃತ ವಾಗಿತ್ತು.

**********************ಪರಿಚಯ*******************************

ಹೆಸರು--- ಕಿರು ಕೆ.ನಿರ್ಮಲ ಎಂ.ಎ ಬಿ.ಇಡಿ

ಕಾವ್ಯನಾಮ-----ಕೆ.ನಿರ್ಮಲಮರಡಿಹಳ್ಳಿ

ದೂರವಾಣಿ-----9901527137

ವಿಳಾಸ-ಕೆ.ನಿರ್ಮಲ ,ಬೆಳಕು ನಿಲಯ, ಜಯಲಕ್ಷ್ಮಿ ಬಡಾವಣೆ,ಚಿತ್ರದುರ್ಗ ,ಪಿನ್ ಕೋಡ್ 577502

nirmalamaradihalli@gmail.com

ಸೇವೆ---ಕನ್ನಡ ಶಿಕ್ಷಕಿ ಹಾಗೂ ಉಪನ್ಯಾಸಕಿಯಾಗಿ ಡಾನ್ ಬೋಸ್ಕೊ

ಸಂಸ್ಥೆಯಲ್ಲಿ ಮೂವ್ವತ್ತು ವರ್ಷಗಳ ಸೇವೆ ಸಲ್ಲಿಸಿ ,ಈಗ ಸ್ವಯಂ ನಿವೃತ್ತಿ ಜೀವನ.

ಪ್ರಕಟಿತ ಕೃತಿಗಳು:-----

‘ನೀ’ ಕವನ ಸಂಕಲನ (ಶ್ರೀಮತಿ ಸವಿತಾ ನಾಗಭೂಷಣ ಅವರಿಂದ ಬಿಡುಗಡೆ)

‘ವಾಸ್ತವ’ ಕಥಾ ಸಂಕಲನ (ಶ್ರೀಮತಿ ತಾರಿಣಿ ಶುಭದಾಯಿನಿ ಅವರಿಂದ ಬಿಡಗಡೆ)

‘ಕಾನನದ ಒಡಲು’ ಕವನಸಂಕಲನ (ಶ್ರೀಮತಿ ಉಮಾ ಶ್ರೀ ಅವರಿಂದ ಬಿಡುಗಡೆ)

‘ಬೆಳ್ಳಕ್ಕಿಸಾಲು ’ಮಕ್ಕಳ ಕವನ ಸಂಕಲನ(ಮುದ್ರಣ ಹಂತದಲ್ಲಿದೆ)

---‘ದೀಪದ ಕೆಳಗಿನ ಕತ್ತಲೆ’ ಕಥೆಗೆ ಕರ್ನಾಟಕ ಲೇಖಕಿಯರ ಸಂಘದ

. ‘ ಪ್ರೇಮಾಭಟ್’ ದತ್ತಿನಧಿ ಪ್ರಶಸ್ತಿ

……ಸಿರಿಗನ್ನಡ ಪ್ರಕಾಶನ ದಿಂದ ‘ಕನ್ನಡ ರತ್ನ’ ಪ್ರಶಸ್ತಿ

---'ಪುಟಾಣಿವಿಜ್ಞಾನ’ಮಾಸಪತ್ರಿಕೆಯಲ್ಲಿ ವೈಜ್ಞಾನಿಕ ಲೇಖನಗಳು ಪ್ರಕಟವಾಗಿವೆ.

----- ಸುಧಾ ,ಮಯೂರ, ಪ್ರಜಾವಾಣಿ, ಕರ್ಮವೀರ, ಲೇಖಕ ಇತ್ಯಾದಿ ಪತ್ರಿಕೆಗಳಲ್ಲಿ ಕಥೆ, ಕವನಗಳು ಪ್ರಕಟವಾಗಿವೆ.

----- ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಿಳಾ ಮತ್ತು ಕಲ್ಯಾಣ ಇಲಾಖೆ

ಜಿಲ್ಲಾ ಕನ್ನಡಸಾಹಿತ್ಯಪರಿಷತ್ ವಿವಿಧ ಸಂಸ್ಥೆಗಳ ಸಾಹಿತ್ಯಿಕ ಕಾರ್ಯಕ್ರಮ ಗಳಲ್ಲಿ ಕಥೆ, ಕವನಗಳ ವಾಚನ.



# ಅನಮಿಯಿತ ಋತುಗಳು

**ಡಾ. ಪ್ರೇಮಲತ ಬಿ**, *ಇಂಗ್ಲೆಂಡ್*

## ವಸಂತ

ಅವಳಿಗೆ ಗೊತ್ತಾಗಿರಬಹುದೇ ಎಂಬ ಅನುಮಾನ ನನಗೆ ಹಲವು ಸಾರಿ ಬಂದಿದೆ. ಆದರೆ, ಇಲ್ಲ ಅಂದುಕೊಂಡಿದ್ದೇನೆ. ಅದೇನು ಸುಮ್ಮ ಸುಮ್ಮನೆ ಅಲ್ಲ. ಗ್ರೀಷ್ಮಳ ದಿನಚರಿ ನನಗೆ ಚೆನ್ನಾಗಿ ಗೊತ್ತು.

ಅವಳು ಪ್ರತಿದಿನ ಆರು ಗಂಟೆಗೆ ಏಳುತ್ತಾಳೆ. ಗಿಡಗಳಿಗೆ ನೀರು ಹಾಕಿ, ತಿಂಡಿ ಮಾಡಿ, ಅಮೇಲೆ ವ್ಯಾಯಾಮ ಮಾಡುತ್ತಾಳೆ. ದೇಹವನ್ನು ಸಧೃಢವಾಗಿ ಇಟ್ಟುಕೊಳ್ಳಬೇಕು ಎಂಬ ಬಗ್ಗೆ ಅವಳಿಗೆ ಬಹಳ ಆಸ್ಥೆಯಿದೆ. ನಂತರ ಸ್ನಾನ ಮಾಡಿ, ತಿಂಡಿಯನ್ನು ಡಬ್ಬಿಯಲ್ಲಿ ಹಾಕಿಕೊಂಡು ಹೊರಡುತ್ತಾಳೆ.ತಿಂಡಿಯನ್ನು, ಮಧ್ಯಾನದ ಊಟವನ್ನು ಸೇರಿಸಿ ಒಟ್ಟಿಗೆ 'ಬ್ರಂಚ್' ಎಂಬ ಹೆಸರಲ್ಲಿ ಹನ್ನೆರಡಕ್ಕೆ ತಿನ್ನುತ್ತಾಳಂತೆ.

ಅಷ್ಟರಲ್ಲಿ ರೂಮಿನಿಂದ ಇಳಿದು ಬರುವ ನನ್ನೊಡನೆ ಒಂದೆರಡು ಮಾತು..ಹುಹ್..ಯಾವ ಮಾತು? 'ಅವತ್ತು ನಾನೇನು ಮಾಡಬೇಕು, ದಾರಿಯಲ್ಲಿ ಏನು ತರಬೇಕು, ಮನೆಗೆ ಏನಾಗಬೇಕು' ಇಷ್ಟೇ….ಇಂತಹ ಕೆಲವು ಸೂಚನೆ ಕೊಟ್ಟು ಕೆಲಸಕ್ಕೆ ಹೊರಟುಹೋಗುತ್ತಾಳೆ. ಮತ್ತೆ ನಾವು ಸಂಧಿಸುವುದು ರಾತ್ರಿ ಮನೆಗೆ ಮರಳಿದಾಗಲೇ.

ಆಗವಳು ಅಡಿಗೆ ಮಾಡುತ್ತಾಳೆ. ನ್ಯೂಸ್ ನೋಡುತ್ತ ಊಟ ಮಾಡುತ್ತೇವೆ. ನಂತರ ಅವಳು ತನ್ನ ಕೋಣೆಗೆ ಹೋಗುತ್ತಾಳೆ. ದಿನಚರಿ ಬರೆಯುತ್ತಾಳೆ. ಪುಸ್ತಕ ಓದುತ್ತಾಳೆ. ಹತ್ತಕ್ಕೆಲ್ಲ ಕೋಣೆಯ ದೀಪ ಆರಿಸಿ, ಅವಳು ಮಲಗುತ್ತಾಳೆ. ದಿನಾ ಅದೇ ವರಾತ. ಯಾವತ್ತೋ ಕೆಲವು ದಿನ ಅಷ್ಟೇ ಇದು ಬದಲಾಗುವುದು. ನಾನು ನನ್ನ ಕೋಣೆಗೆ ಹೋಗಿ ಮಲಗುತ್ತೇನೆ. ಬೆಳಗಾದರೆ ಮತ್ತೆ ಅವೇ ಕರಾಳ ದಿನಗಳು.

ವಾರಾಂತ್ಯಗಳಲ್ಲಿ ಫೋನು ಮಾಡಿ ನಮ್ಮ, ನಮ್ಮ ಮನೆಯವರೊಡನೆ ಮಾತಾಡುತ್ತೇವೆ. ಲೆಕ್ಕ ಪತ್ರ ಮಾಡುತ್ತೇವೆ. ಮನೆ ಸ್ವಚ್ಛಗೊಳಿಸಿಕೊಳ್ಳುತ್ತೇವೆ. ಆದರೆ, ನಮ್ಮ ಮನಸ್ಸುಗಳಿಗೆ ಮಾತ್ರ ಕೈ ಹಾಕದೆ ಸುಮ್ಮನಿದ್ದುಬಿಟ್ಟಿದ್ದೇವೆ. ಬದುಕಿನ ಈ ಧಾವಂತಗಳ ನಡುವೆ, ನನಗಂತೂ ಈ ವಿಚಾರವನ್ನು ಬೆಳೆಸಲು ತ್ರಾಣವಿಲ್ಲ.

ಟೈಮಿಗೆ ಸರಿಯಾಗಿ ಊಟ-ತಿಂಡಿ ಹಾಕುತ್ತಾಳೆ. ಸಮಾಜದಲ್ಲಿ ಗಂಡನ ಸ್ಥಾನ ಇದೆ. ಯಾರ ಮನೆಗಾದರೂ ಕರೆದರೆ ಇಬ್ಬರೂ ಒಟ್ಟಿಗೆ ಹೋಗಿ ಬರುತ್ತೇವೆ. ನಗೆ ಚಟಾಕಿ ಹಾರಿಸಿ ನಗುತ್ತೇವೆ. ಮನೆಗೆ ಬಂದ ನಂತರ ಇಬ್ಬರದೂ ಬೇರೆ, ಬೇರೆ ಬದುಕು. ವಂಶಿಕ್ ಬಂದಾಗ ಇಬ್ಬರೂ ಕರ್ತವ್ಯ ನಿಭಾಯಿಸುತ್ತೇವೆ. ಆದರೆ, ಮಿಕ್ಕಂತೆ ಬರ್ಬರ ಶೂನ್ಯ ದಿನಗಳು.

ಆದರೆ, ನಾನು ಅಂತರಂಗದಲ್ಲಿ ಸ್ಫೋಟಗೊಳ್ಳುತ್ತಲೇ ಹೋಗುತ್ತಿದ್ದೇನೆ. ಈ ಅಂತಃಸ್ಫೋಟಕ್ಕೆ ಅವಳು ಕಾರಣ. ಅವಳ ಉಪೇಕ್ಷೆ ಕಾರಣ. ನಾನು ಕಟ್ಟಿಕೊಳ್ಳಬೇಕೆಂದಿರುವ ಎಲ್ಲ ಕನಸುಗಳು ಅವಳನ್ನು ನೋಡಿದ ಕೂಡಲೇ ಬೀಳತೊಡಗುತ್ತವೆ. ನಾನು ನಾಶವಾದಷ್ಟೂ ಅವಳ ಶಕ್ತಿ ಹೆಚ್ಚಾಗುತ್ತಿದೆ ಅಂತ ಅನ್ನಿಸುತ್ತದೆ. ವಂಶಿಕ್ ಗೆ ನನ್ನ ಗಾಳಿ ಕೂಡ ಸೋಕಬಾರದೆಂದು ಅವಳ ತವರು ಮನೆಯಲ್ಲಿ ಬಿಟ್ಟು ಬೆಳೆಸುತ್ತಿದ್ದಾಳೆ. ಇತ್ತೀಚೆಗಂತು ಅವಳ ಪ್ರತಿಯೊಂದು ಉಸಿರೂ ನನಗೆ ಬರೆಹಾಕುತ್ತ ಹೋಗಿದೆ.

ಗ್ರೀಷ್ಮಳ ಕತ್ತು ಹಿಸುಕಿ ಕೊಂದೇ ಬಿಡೋಣ ಅಂತ ಅವತ್ತು ಅವಳ ರೂಮಿಗೆ ಹೋಗಿದ್ದೆ. ಅವಳು ಮಲಗಿದಂತೆ ನಟಿಸಿದಳು. ಹೌದು… ನನ್ನ ಹೆಜ್ಜೆ ಸಪ್ಪಳಕ್ಕೆ ಅವಳಿಗೆ ಎಚ್ಚರವಾಗುತ್ತದೆ ಅಂತ ನನಗೆ ಚೆನ್ನಾಗಿ ಗೊತ್ತು. ಅವಳದು ಶ್ವಾನ ನಿದ್ರೆ. ಸಣ್ಣ, ಸಣ್ಣ ಸಪ್ಪಳಕ್ಕೂ ಅವಳಿಗೆ ಎಚ್ಚರವಾಗುತ್ತದೆ.

ಆದರಾಗಲಿ, ಪರವಾಗಿಲ್ಲ ಅಂತಲೇ ಹೋಗಿದ್ದೆ.

ಮೈಥುನದ ಹುನ್ನಾರದಲ್ಲಿ ಬಂದಿದ್ದಾನೆ ಅಂದುಕೊಂಡಳೇನೋ? ಹೊದಿಕೆಯನ್ನು ಮೇಲೆಳೆದುಕೊಂಡು ಹೊರಗಿಣುಕಿದ್ದ ಮೊಲೆ ಮುಚ್ಚಿಕೊಂಡಳು. ಅಸಹ್ಯವೆನಿಸಿತು.

ಎಷ್ಟು ದಿನಗಳಿಂದ ನಡೆಸುತ್ತಿದ್ದಳೋ?

'ಅಪ್ಪಾಜಿಗೆ ತೀರಾ ಹುಷಾರಿಲ್ಲ, ಬೇಗನೆ ಹೊರಟು ಬಾ' ಅಂತ ಅವತ್ತು ಊರಿನಿಂದ ಫೋನು ಬಂತು. ಬಟ್ಟೆ ಬರೆ ಪ್ಯಾಕ್ ಮಾಡಿಕೊಂಡು ಹೋಗಲು ಅನಿರೀಕ್ಷಿತವಾಗಿ ಮನೆಗೆ ಬಂದೆ. ಕೆಲಸಕ್ಕೆ ಹೋಗಿರಬೇಕಿದ್ದ ಅವಳು ಮನೆಯಲ್ಲಿದ್ದಳು! "ಊರಿನಿಂದ ಚಂದ್ರು ಅನ್ನುವವರು ಬಂದಿದ್ದರು, ಅದಕ್ಕೇ ಮನೆಗೆ ಬಂದಿದ್ದೆ, ಅವರು ಈಗಷ್ಟೇ ಹೋದರು " ಅಂದಳು.

ಅಸಲು, ನಾನವಳನ್ನು 'ಯಾಕೆ ಮನೆಯಲ್ಲಿದ್ದೀಯ?' ಅಂತ ಕೇಳಿರಲೇ ಇಲ್ಲ. ನಡು ಮಧ್ಯಾನ ಆಫೀಸಿನಿಂದ 'ನೀನು ಯಾಕೆ ಮನೆಗೆ ಬಂದೆ?' ಅಂತ ಅವಳು ಕೂಡ ಕೇಳಲಿಲ್ಲ. ನಾನಾಗಿ ಹೇಳಲೂ ಇಲ್ಲ. ಆದರೆ, ಇನ್ನೇನು ತರಾತುರಿಯಲ್ಲಿ ಹೊರಡುವಾಗ ಹಾಲಿನಲ್ಲಿದ್ದ ಕಸದಬುಟ್ಟಿಯಲ್ಲಿ ಅದು ಕಂಡಿತ್ತು. ಇನ್ನೂ ಹಸಿಯಾಗಿ, ಒಸರುತ್ತಿದ್ದ ಕಾಂಡೋಮ್. ಸೋಫಾದ ಮೇಲೇ ಮುಗಿಸಿಕೊಂಡಿರಬೇಕು. ಅವಳ ಗಂಡನಾದ ನಾನು ಆ ಕ್ಷಣ ಸ್ಫೋಟಗೊಳ್ಳಬೇಕಿತ್ತು. ಆದರೆ, ಅದರ ಬಗ್ಗೆ ಮಾತಾಡದಷ್ಟು ಹೊರಗಿನವನಾಗಿ ವರ್ಷಗಳಾಗಿದ್ದವು. ಗಾಯವನ್ನು ಕೆರೆದು ವ್ರಣಮಾಡಿಕೊಳ್ಳುವುದು ಆಗ ನನಗೆ ಬೇಕಿರಲಿಲ್ಲ.

ಅದಕ್ಕಿಂತ ಹೆಚ್ಚಾಗಿ ಅರ್ಜೆಂಟಾಗಿ ಹೋಗಬೇಕಿತ್ತು. ಇಲ್ಲದಿದ್ದರೆ ಊರಿಗೆ ಹೊರಡುವ ಟ್ರೈನ್ ತಪ್ಪಿಹೋಗುತ್ತಿತ್ತು. ನೋಡಿದರೂ ನೋಡದಂತೆ ಹೊರಬಿದ್ದೆ.

ಅಷ್ಟೆಯಾ?

ಇಲ್ಲ, ಅವತ್ತು ಅವಳು ಇನ್ನೂ ಶಕ್ತಳಾಗಿ ಕಂಡಿದ್ದಳು. ಅವಳ ಕಣ್ಣುಗಳಲ್ಲಿ ಅದೆಂತದ್ದೋ ಆರ್ದ್ರತೆಯಿತ್ತು. ಅಂದರೆ, ಅವಳ ಕನಸುಗಳು ನನ್ನ ಮೇಲೆ ಅಸ್ತ್ರವಾಗುತ್ತಿದ್ದವು. ನಾನೇನಾದರೂ ಪ್ರಶ್ನೆ ಕೇಳಿದ್ದರೆ, ಯಾವ ತಾರಕಕ್ಕೆ ಹೋಗಿ ಬೇಕಾದರೂ ನನ್ನನ್ನು ನಿಂದಿಸುವವಳಿದ್ದಳು. ನನಗೆ ಹಕ್ಕಿಲ್ಲದ್ದರ ಬಗ್ಗೆ ನಾನು ತಾನೇ ಯಾಕೆ ಹೊಡೆದಾಡಿಕೊಳ್ಳಬೇಕು ಎನ್ನುವ ವೈರಾಗ್ಯ ವಕ್ಕರಿಸಿತೋ ಅಂತ ಗೊತ್ತಾಗಲಿಲ್ಲ. ಎಲ್ಲ ಜಗಳಗಳ ಕೊನೆಯ ಮಾತು ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಯೇ ಮುಕ್ತಾಯವಾಗುತ್ತಿತ್ತು. ಹಾಗಂತ ಅವಳು ಪೂರ್ತಿ ಸುಳ್ಳೇನೂ ಹೇಳುತ್ತಿರಲಿಲ್ಲ. ಕಂಡೂ ಕಾಣದಂತೆ ನಾನು ಸುಮ್ಮನಾಗಲು ಅದೇ ಸುಪ್ತ ಕಾರಣವಿರಬೇಕು.

ನಾನು ಅಪರಾಧ ಮಾಡಿದ್ದೆ. ಮಾಡುತ್ತಲೂ ಇದ್ದೆ. ಅದಕ್ಕೇ ಆ ಚಂದ್ರು ನನ್ನ ಹೆಂಡತಿಯೊಂದಿಗೆ ಬಳಸಿ ಬಿಸಾಡಿದ ಕಾಂಡೋಮ್ ನೋಡಿ ಮತ್ತಷ್ಟು ಬರಡಾಗಿದ್ದೆನೇ ಹೊರತು ಮಾತಾಡಲಿಲ್ಲ ಅನ್ನಿಸುತ್ತದೆ.

ಏನು ಮಾಡುವುದು? ಅವಳಿನ್ನೂನನ್ನ ಹೆಂಡತಿಯಾಗಿ ದಾಖಲೆಗಳಲ್ಲಿದ್ದಾಳೆ. ಅದನ್ನು ಅಳಿಸಿಬಿಡಬೇಕು. ಇಲ್ಲದಿದ್ದರೆ ನನಗೆ ಬಿಡುಗಡೆಯಿಲ್ಲ ಅಂತ ಅದೆಷ್ಟು ಕಾಲದಿಂದ ನನ್ನ ಮನಸ್ಸು ಹೇಳುತ್ತಲೇ ಇದೆ. ಅದಕ್ಕಾಗಿ ಪ್ರತಿಬಾರಿ ಏಳಬೇಕೆಂದಾಗಲೂ ಅವಳ ಬಿರುಸಿನ ಸುತ್ತಿಗೆಯ ಪೆಟ್ಟಿಗೆ , ಇಂಚಿಂಚೇ ಒಳಹೊಗುವ ಮೊಳೆಯೊಂದರ ಹಾಗೆ ಆಳಕ್ಕೆ ಇಳಿದು ಏನನ್ನೋ ಗಟ್ಟಿಕೊಳ್ಳಿಸಿಕೊಳ್ಳುತ್ತಿದ್ದೇನೆ.

ಊರಿಗೆ ತಲಪುವ ವೇಳೆಗೆ ಅಪ್ಪ ಸತ್ತಿದ್ದ. ಅವಳಿಗೇನೂ ತಿಳಿಸಲಿಲ್ಲ. ಎಲ್ಲ ಮುಗಿಸಿ ಬರುವ ವೇಳೆಗೆ ನಾನು ಅವತ್ತು ಕಸದ ಬುಟ್ಟಿಯಲ್ಲಿ ಕಂಡಿದ್ದು ಕನಸೋ, ನಿಜವೋ ಗೊತ್ತಾಗದೇ ಹೋಗಿತ್ತು. ಆಮೇಲೆ ಏಂತದ್ದೋ ಕೆಟ್ಟ ಕುತೂಹಲ ಕೆರಳತೊಡಗಿತು.

ಅವಳು ಡೈರಿ ಬರೆಯುವುದನ್ನು ಯಾವತ್ತೂ ನಿಲ್ಲಿಸಿರಲಿಲ್ಲ. ಅದನ್ನೇ ನಾನು ಮೊದಲು ಹುಡುಕಿದ್ದು. ಪ್ರತಿ ದಿನ ಹೆಚ್ಚೂ ಕಡಿಮೆ ಅದೇ ಬರಹ. ಕಂಪ್ಯೂಟರೇ ಆಗಿದ್ದಿದ್ದರೆ 'ಕಾಪಿ ಅಂಡ್ ಪೇಸ್ಟ್' ಮಾಡಬಹುದಿತ್ತು ಎನ್ನುವ ಏಕತಾನತೆಯ ದಿನಗಳನ್ನು ದಾಖಲಿಸಿದ್ದಳು. ಚಂದ್ರುನನ್ನು ಊರಿನಿಂದ ಬಂದಿದ್ದ ಸಂಬಂಧಿ ಅಂತಲೇ ದಾಖಲಿಸಿದ್ದಳು. ಇನ್ಯಾವುದೇ ವಿವರಗಳಿರಲಿಲ್ಲ.

ಅಲ್ಲಲ್ಲಿ ನಾನೂ ಇದ್ದೆ. ಕಥೆಯಲ್ಲಿನ ಪಾತ್ರವೊಂದರಂತೆ ಇದ್ದ ನಾನು ಬಂದಾಗಲೆಲ್ಲ ಅವಳು ಅದೇ ತಿರಸ್ಕಾರವನ್ನು ತೋರಿದ್ದಳು. ಮನಸ್ಸಿಗೆ ಕಿರಿಕಿರಿಯೆನಿಸಿತು. ನನ್ನ ಮೇಲೆ ಅನುಮಾನದ ಯಾವ ಎಳೆಯೂ ವ್ಯಕ್ತವಾಗಿರಲಿಲ್ಲ. ಸಮಾಧಾನವೆನಿಸಿತು.

ಅವಳ ಒಳಬಟ್ಟೆಗಳನ್ನೆಲ್ಲ ತಡಕಿದೆ. ನಾನು ನೋಡಿಲ್ಲದ, ಮ್ಯಾಚಿಂಗ್ ಆಗುವ ಹಲವಾರು ಹೊಸ ಚಡ್ಡಿ-ಬ್ರಾಗಳು ಕಂಡವು. ಅವನ್ನು ನೋಡುವವರು ಯಾರಿದ್ದರು?. ಅವಳ ಕಾಸ್ಮೆಟಿಕ್ಸ್ ಗಳು ಅವಳ ಡ್ರೆಸ್ಸಿಂಗ್ ಟೇಬಲ್ ತುಂಬಾ ಅಲಂಕಾರಿಕವಾಗಿ ಕುಳಿತಿದ್ದವು. ನಾನು ಅವಳ ಮುಖವನ್ನು ಗಮನವಿಟ್ಟು ನೋಡಿ ಅದೆಷ್ಟೋ ತಿಂಗಳುಗಳಾಗಿದ್ದವು.

ಉಹೂಂ.. ಯಾವ ಸುಳಿವೂ ಸಿಗಲಿಲ್ಲ. ಸಿಕ್ಕಿದ್ದಿದ್ದರೆ ಚೆನ್ನಾಗಿತ್ತು.

ಅನುಮಾನ ನನ್ನ ಅದುವರೆಗಿನ ಅವಮಾನದ ಬದುಕಿಗಿಂತ ಬೃಹದಾಕಾರವಾಗಿ ಬೆಳೆಯತೊಡಗಿತು. ಅವಳನ್ನು ಪ್ರತಿನಿತ್ಯ ಗಮನಿಸತೊಡಗಿದೆ.

ಮೊದಲಿಗಿಂತ ಸಣ್ಣಗಾಗಿದ್ದಳು. ಕೂದಲನ್ನು ಅಲೆ ಅಲೆಯಾಗಿ ಕತ್ತರಿಸಿಕೊಂಡಿದ್ದಳು. ದಿನಾ ಸ್ವಲ್ಪ ಹೆಚ್ಚೇ ಎನ್ನುವಂತೆ ಅಲಂಕಾರ ಮಾಡಿಕೊಂಡು ಆಫೀಸಿಗೆ ಹೋಗುತ್ತಿದ್ದಳು. ವಾರಕ್ಕೆರಡು ಬಾರಿ ದಾರಿಯಲ್ಲಿನ ಜಿಮ್ ಗೆ ಭೇಟಿಕೊಡುತ್ತಿದ್ದಳು.

ಆ ಜಿಮ್ ನ ಬಗ್ಗೆ ಇರುವ ಎಲ್ಲ ಮಾಹಿತಿಗಳನ್ನು ಹುಡುಕಿದೆ. ಅದರ ಮಾಲೀಕ ಇವಳಿಗಿಂತ ಹತ್ತು ವರ್ಷ ಚಿಕ್ಕವನಿದ್ದ. ಒಳಹೊಗುವಾಗ, ಹೊರಬರುವಾಗ ಒಬ್ಬಳೇ ಇರುತ್ತಿದ್ದಳು. ಆಫೀಸಿನಲ್ಲೇನಾದರೂ ಹೊಸ ಸಂಬಂಧ?

ಗ್ರೀಷ್ಮಳ ಆಫೀಸಿನ ಒಳಗೆ ಹೋಗುತ್ತಿದ್ದವರನ್ನು ಒಮ್ಮೆ ನಿಂತು ಗಮನಿಸಿದೆ. ಬಹುತೇಕವು ನನಗೆ ಗೊತ್ತಿದ್ದ ಮುಖಗಳು. ಕೆಲವರದು ಅವಳು ಕೂಡಲು ಬಯಸದ ದೇಹಗಳು. ಬೇರೆ ಯಾರೋ ಇರಬೇಕು?

ಛೇ…ನಾನು ಈ ಪತ್ತೇದಾರಿಕೆ ಮಾಡುವ ಅಗತ್ಯವಿಲ್ಲ. ನನಗಿರುವ ಅಗತ್ಯವೆಂದರೆ ಕೊಲೆಗಡುಕನಾಗುವುದು… ಅದರಿಂದಲೇ ಮುಕ್ತಿ…ಅದಕ್ಕೆ ತಯಾರಾಗತೊಡಗಿದೆ.

## ಗ್ರೀಷ್ಮ

ಇತ್ತೀಚೆಗೆ ಯಾಕೋ ಸರಿ ಬರುತ್ತಿಲ್ಲ. ಅವನು ನನ್ನನ್ನು ಗಮನಿಸುತ್ತಿದ್ದಾನೆಯೇ? ಇವತ್ತಂತೂ ಅವನು ನನ್ನ ಕಡೆ ಹಲವಾರು ಬಾರಿ ದಿಟ್ಟಿಸಿ ನೋಡಿದ. ಅಡುಗೆ ಮಾಡುವಾಗ ಏನನ್ನೋ ತೆಗೆದುಕೊಳ್ಳುವಂತೆ ಅಡಿಗೆಮನೆಯ ಕಪಾಟುಗಳನ್ನು ತಡಕುತ್ತ ನಿಂತಿದ್ದ. ಆದರೆ, ಅವನ ಗಮನ ಇದ್ದುದು ನನ್ನ ಮೇಲೆ. ಒಂದೆರಡು ಬಾರಿ ತೀರ ಹತ್ತಿರಕ್ಕೂ ಬಂದಿದ್ದ. ನಾನು ತಟ್ಟನೆ ಅವನೆಡೆ ತಿರುಗಿ ನೋಡಿ ದೂರ ಸರಿದಾಗ ಅವನು ಸ್ವಲ್ಪ ಗಾಬರಿಯಾದಂತೆ ಕಂಡ.

'ನಿಮ್ಮ ಮನೆಯ ಬಾಗಿಲ ಬಳಿಯೇ ನಿಂತಿದ್ದೇನೆ' ಅಂತ ಅವತ್ತು ಚಂದ್ರು ಫೋನು ಮಾಡಿದಾಗ, ವಿಧಿಯಿಲ್ಲದೆ, 'ಕುಂಡದ ಕೆಳಗೆ ಇಡುತ್ತಿದ್ದ ಸೀಕ್ರೆಟ್ ಕೀ ಬಳಸಿ ಮನೆಯೊಳಗೆ ಕೂತಿರು, ಬರುತ್ತೇನೆ' ಅಂತ ಹೇಳಬಾರದಿತ್ತು. ನಾನು ಆಫೀಸಿನ ಕೆಲಸಗಳನ್ನು ತರಾತುರಿಯಲ್ಲಿ ಒಂದು ಸ್ಥಿತಿಗೆ ತಲುಪಿಸಿ, ಮ್ಯಾನೇಜರ್ ಗೆ ಹೇಳಿ ಮನೆಗೆ ಬರುವ ವೇಳೆಗೆ ಅವನು ಮನೆಯೊಳಗೆ ಬಂದು ಎರಡು ಗಂಟೆಗಳೇ ಆಗಿದ್ದವು.

ನಾನು ಒಳಬಂದಾಗ ಆಶ್ಚರ್ಯ ಕಾದಿತ್ತು. ಅವನೊಬ್ಬನೇ ಬಂದಿರಲಿಲ್ಲ. ಅವನ ಜೊತೆಗೆ ಹುಡುಗಿಯೊಬ್ಬಳಿದ್ದಳು. ಚಂದ್ರು, ತಾನು ಅವಳನ್ನು ಮನೆಯಿಂದ ಓಡಿಸಿಕೊಂಡು ಬಂದಿರುವುದಾಗಿ ಹೇಳಿದ. ಅವರಿಬ್ಬರ ಪ್ರೇಮದ ಕಥೆಯನ್ನು ರಸವತ್ತಾಗಿ ಬಣ್ಣಿಸಿ, ಅವಳೊಂದಿಗೆ ತಾನು ' ರಿಜಿಸ್ಟರ್ ಮದುವೆಯಾಗಲಿದ್ದೇನೆ, ನೀನು ಬರಲೇ ಬೇಕು ಅಕ್ಕಾ' ಎಂದು ಕೇಳಿಕೊಂಡ.

ಇನ್ನೂ ತಿಂದಿರದ ನನ್ನ ಬಾಕ್ಸಿನದೇ ತಿಂಡಿಯನ್ನು ಇಬ್ಭಾಗ ಮಾಡಿ ಮೈಕ್ರೋವೇವಿನಲ್ಲಿ ಬಿಸಿಮಾಡಿ ಅದರ ಜೊತೆಗೆ ಒಂದಿಷ್ಟು ಹಣ್ಣು ಮತ್ತು ಚಿಪ್ಸ್ ಹಾಕಿಕೊಟ್ಟೆ. ಇಬ್ಬರೂ ಹಸಿದಂತೆ ತಿಂದರು. ಕಾಫಿ ಮಾಡಿಕೊಟ್ಟೆ. ಅವರಿಬ್ಬರ ಕಣ್ಣಲ್ಲಿ ಅದೆಷ್ಟು ಕನಸುಗಳು. ಒಬ್ಬರ ಮೇಲೆ ಒಬ್ಬರಿಗೆ ಎಂತಹ ವಿಶ್ವಾಸ!

ಅರೆಕ್ಷಣ ಹಾಯೆನಿಸಿತು. ಹಿಂದೆಯೇ ವಿಷಾದ ಮನಸ್ಸನ್ನು ಒಳಗೊಳಗೇ ಸುಟ್ಟಿತು.

ನಾನು ಮತ್ತು ವಸಂತ್ ಹಾಗೇ ಇದ್ದುದ್ದಲ್ಲವೇ? ಅವನನ್ನು ಮೆಚ್ಚಿ ಮದುವೆಯಾದ ಮೇಲೆಯೇ ನನಗವನ ತೆವಲಿನ ಬಗ್ಗೆ ಅರಿವಾದದ್ದು, ಎಂತಹ ಹೊಟ್ಟೆಕಿಚ್ಚಿನವನು ಎಂದು ತಿಳಿಯುತ್ತ ಹೋದದ್ದು.

ಅವತ್ತು ಶನಿವಾರ. ಬ್ಯಾಂಕುಗಳು ಅರ್ಧದಿನವೇ ಕೆಲಸಮಾಡುತ್ತಿದ್ದವು. 'ನೀನು ಹೋಗಿ ಬಾ, ನಾನು ವಂಶಿಕ್ ನನ್ನು ನೋಡಿಕೊಳ್ಳುವೆ' ಎಂದು ಮನೆಯಲ್ಲೇ ಉಳಿದ. ಆಗ ವಂಶಿಕ್ ಗೆ ಕೇವಲ ಎರಡೂವರೆ ವರ್ಷ.

ಹೊಸದಾಗಿ ಕೊಳ್ಳಬೇಕೆಂದುಕೊಂಡಿದ್ದ ಫ್ಲಾಟ್ ಗೆ ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿ ಎಷ್ಟು ಲೋನ್ ಸಿಗಬಲ್ಲದೆಂದು ವಿಚಾರಿಸಲು ಹೋದೆ.

ಅಲ್ಲಿ ನಾನು ಮನೆಮಾಡಿಕೊಳ್ಳುವ ವಿಚಾರ ಮಾತಾಡುತ್ತಿದ್ದಾಗ ವಸಂತ್ ಮನೆ ಒಡೆಯುವ ಕೆಲಸದಲ್ಲಿ ತೊಡಗಿಕೊಂಡಿದ್ದ ಎಂದು ನೆನೆದರೆ ಈಗಲೂ ಮೈ ಕಿಡಿಕಿಡಿಯಾಗುತ್ತದೆ.

'ಬ್ಯಾಂಕ್ ಬಿಟ್ಟಾಗ ಒಂದು ಮಿಸ್ಡ್ ಕಾಲ್ ಕೊಡು' ಎಂದಿದ್ದ. 'ನೀನು ಬಂದ ಕೂಡಲೇ ನಾನು ಹೊರಗೆಲ್ಲೋ ಹೋಗುವುದಿದೆ, ಮೊದಲೇ ತಯಾರಾಗಿರಲು ಅನುಕೂಲವಾಗುತ್ತದೆ' ಎಂದಿದ್ದ. ಒಪ್ಪಿಕೊಂಡಿದ್ದೆ.

ಹೇಳಿದ್ದನ್ನು ಪಾಲಿಸುವ ನನ್ನ ನಿಯತ್ತಿನ ಬಗ್ಗೆ ಅವನಿಗೆ ಚೆನ್ನಾಗಿ ಗೊತ್ತಿತ್ತು.

ಮನೆಕೆಲಸವನ್ನೆಲ್ಲ ಮುಗಿಸಿ, ಹಿಂತಿರುಗುವವರೆಗೆ ವಂಶಿಕನನ್ನು ನೋಡಿಕೊಳ್ಳಲು ಬೇಕಾದ ಎಲ್ಲವನ್ನು ಅವನಿಗೆ ಹೇಳಿ, ಬ್ಯಾಂಕಿನವರು ಕೇಳಿದ ಎಲ್ಲ ದಾಖಲೆಗಳನ್ನು ಹೊಂದಿಸಿಕೊಂಡು ಹೊರಟ ನನಗೆ, ಬ್ಯಾಂಕಿನವರು ಅನಾವಶ್ಯಕವಾದ ಇನ್ನೇನೋ ಮಾತಾಡಿ ತಲೆತಿಂದರು. ಅದೇ ಸಿಟ್ಟಿನಲ್ಲಿ ಹೊರಬಿದ್ದಾಗ ವಸಂತ್ ಗೆ ಫೋನ್ ಮಾಡುವುದು ಮರೆತೇ ಹೋಯಿತು.

ಬರುವ ದಾರಿಯಲ್ಲಿ ಮನೆಗೆ ಬೇಕಾದ ವಸ್ತುಗಳನ್ನು ಕೊಂಡು ನಾನು ಹಿಂತಿರುಗುವ ವೇಳೆಗೆ ಒಂದೆರಡು ಗಂಟೆಗಳೇ ಕಳೆದುಹೋಗಿದ್ದವು. ಕೀ ಬಳಸಿ ಒಳಬಂದೆ.

ವಸಂತ್, ವಂಶಿಕ್ ನನ್ನು ಪಕ್ಕದ ರೂಮಿನಲ್ಲಿ ಆಡಲು ಬಿಟ್ಟು, ವಾರದ ದಿನಗಳಲ್ಲಿ ಮಗನನ್ನು ನೋಡಿಕೊಳ್ಳಲು ಬರುವ ವರ್ಷಳ ಜೊತೆ ಸುಖಿಸುತ್ತಿದ್ದ. ಫೋನು ಮಾಡಿ ಕರೆಸಿಕೊಂಡಿರಬೇಕು! ಎಷ್ಟು ದಿನಗಳಿಂದ ಇದೆಲ್ಲ ನಡೆಸುತ್ತಿದ್ದನೋ?

ನನ್ನನ್ನು ನೋಡಿದ ವರ್ಷಾ ತಾರಾತುರಿಯಲ್ಲಿ ಓಡಿಹೋದಳು. ವಸಂತ್, ಕಳ್ಳನಂತೆ ತಲೆತಗ್ಗಿಸಿಕೊಂಡು ಅವಳ ಹಿಂದೆಯೇ ಹೊರಗೋಡಿದ.

ನಾನು ಮಾತಿಲ್ಲದೆ, ಒಂಟಿಯಾಗಿ ನಿಂತಿದ್ದೆ. ನಿಂತ ನೆಲವೇ ಬಿರಿದಂತೆ ದೊಪ್ಪನೆ ಕುಸಿದು ಕೂತಾಗಲೂ ನಾನು ಒಂಟಿಯಾಗಿದ್ದೆ. ನನ್ನನ್ನು ನೋಡಿದ ವಂಶಿಕ್ ಓಡಿಬಂದು ತಬ್ಬಿಕೊಂಡ. ನನ್ನ ಕಣ್ಣಿಂದ ನೀರು ದಳ-ದಳನೆ ಹರಿಯತೊಡಗಿದವು. 'ಮಮ್ಮೀ...ಮಮ್ಮೀ' ಎಂದು ವಂಶಿಕ್ ಕೂಡ ಅಳದೇ ಹೋಗಿದ್ದಿದ್ದರೆ ನಾನು ಹಾಗೇ.. ಅದೆಷ್ಟು ಹೊತ್ತು ಕುಳಿತಿರುತ್ತಿದ್ದೆನೋ?

ರಾತ್ರಿಯಾದ ಮೇಲೆ ಅವನು ಹಿಂತಿರುಗಿದ!

ಆ ರಾತ್ರಿ ನನಗೆ ಬಹಳ ಭಯವಾಗಿತ್ತು. ಅವನು ಸಂಪೂರ್ಣ ಅಪರಿಚಿತನಂತೆ ಕಂಡ. ಮನೆಕಟ್ಟಲು ಹಣ ಹೊಂಚಲು ನನ್ನನ್ನು ಹೊರಗೆ ಕಳಿಸಿ ಸ್ವಂತ ಮಗನಾದ ಎಳೆಯ ವಂಶಿಕ್ ನ ಎದುರಿಗೆ... ಛೆ..ಇಷ್ಟೇ ಮಾಡಬಲ್ಲವನ ಮನಸ್ಸಿನಲ್ಲಿ ಇನ್ನಾವ ಕೆಡುಕುಗಳಿವೆಯೋ ಎಂದು ಶಂಕಿಸಿದೆ. ಅವನ ಹರಕತ್ತು ಹೊರಗೆ ಬರಬಾರದೆಂದು ನನಗೇನಾದರೂ ಹಾನಿ ಮಾಡಿದರೆ ಎಂದು ಹೆದರಿದೆ. ಪೋಲೀಸರಿಗೆ ತಿಳಿಸುತ್ತೇನೆ ಅಂತ ಬೆದರಿಸಿದೆ. ಅವನು ಸುಮ್ಮನಿದ್ದ. ಆ ರಾತ್ರಿಯೆಲ್ಲ ಆತಂಕದಲ್ಲೇ ಕಳೆಯಿತು. ಬದುಕು ಅಷ್ಟು ಕೆಟ್ಟದೆಂದು ನನಗೆಂದೂ ಅನ್ನಿಸಿರಲಿಲ್ಲ.

ಅಲ್ಲಿಂದ ಮುಂದೆ ನಮ್ಮ ಸಂಬಂಧ ಕಡಿದುಹೋಯಿತು. ಕೋರ್ಟು-ಕಟ್ಟೆ ಹತ್ತಿದ್ದ ನಮ್ಮ ವಿಚ್ಛೇದನ ನಡೆಯದಂತೆ ವಸಂತ್ ಪರಿ-ಪರಿಯಾಗಿ ಬೇಡಿಕೊಂಡು ತೇಪೆ ಹಾಕಿಕೊಂಡಿದ್ದ. ಆದರೆ, ನಾವು ಮತ್ತೆಂದೂ ಕೂಡಲಿಲ್ಲ. ಅವನ ದೇಹವನ್ನು ನೋಡಿದಾಗ ನನಗೆ ಅಸಹ್ಯವಾಗತೊಡಗಿತು.ವಂಶಿಕ್ ತಾತ-ಅಜ್ಜಿಯ ಬಳಿ ಬೆಳೆಯತೊಡಗಿದ.

ಸಮಯ ಹೋದಂತೆ ವಸಂತ್ ತಾನು ಮಾಡಿದ್ದನ್ನು ಮರೆತಂತೆ ಆಡತೊಡಗಿದ. ತಪ್ಪೇ ಮಾಡದ ನನ್ನನ್ನು ಮೌನದಿಂದ ಹಿಂಸಿಸತೊಡಗಿದ. ನಾನೇ ಆ ವಿಷಯವನ್ನು ಎತ್ತಿ ಅವನನ್ನು ಹಂಗಿಸಿದರೂ ಸುಮ್ಮನಿರತೊಡಗಿದ. ಅವನ ಮೌನ ಮುಂದುವರೆದಂತೆಲ್ಲ, ಕೆಟ್ಟಮಾತೇ ಆಡದ ನಾನು ಗಯ್ಯಾಳಿಯಂತೆ ಹರಿಹಾಯತೊಡಗಿದೆ. ಒಂದೇ ಒಂದು ಬಾರಿಯೂ ಅವನು ಇದೆಲ್ಲ ನಡೆದ ಬಗ್ಗೆ ನನ್ನೊಡನೆ ಕೂತು ವಿವರವಾಗಿ ಮಾತಾಡಲಿಲ್ಲ. ನಮ್ಮ ಸಂಸಾರದ ಗುಟ್ಟನ್ನು ಹೊರಹಾಕಿದರೆ ನನಗೇ ಕುತ್ತೆಂದು ಈ ನೋವನ್ನೆಲ್ಲ ನುಂಗಿ ಸಂಸಾರದಲ್ಲಿ ಈಜತೊಡಗಿದೆ.

ನಂತರ ನಮ್ಮ ಮಾತುಗಳು ವ್ಯಾವಹಾರಿಕವಾದವು. ಅಲ್ಲಿಂದ ಮುಂದಕ್ಕೆ ನಮ್ಮಿಬ್ಬರ ನಡುವಿನ ಬಿರುಕುಗಳು ದೊಡ್ಡವಾಗುತ್ತಲೇ ಹೋಗಿವೆ. ಈ ಬರ್ಬರ ಒಂಟಿತನ ನನ್ನನ್ನು ದಿನನಿತ್ಯ ದಹಿಸುತ್ತಿದೆ.

ಚಂದ್ರು ಅವನ ಹುಡುಗಿಯ ಜೊತೆ ಬಂದ ದಿನ ವಸಂತ್ ಕೂಡ ಮನೆಗೆ ಬಂದ. ಯಾಕೆ ಬಂದಿದ್ದ? ನನ್ನನ್ನು ನೋಡಿ ಅವನು ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. ನಾನಾಗಿ ಹೇಳಿದರೂ ನಿರ್ಲಕ್ಷದಿಂದ ಹೊರಗೋಡಿದ. ವಸಂತ್ ಅತ್ತ ಹೋಗಿ ಗಂಟೆಯಾದ ನಂತರ ಬಿನ್ ನಲ್ಲಿ ಕಾಂಡೋಮ್ ಕಂಡಿತ್ತು.

ಅದನ್ನು ಯಾರು ಉಪಯೋಗಿಸಿರಬಹುದು? ನಾನು ಮನೆಗೆ ಬರುವ ವೇಳೆಗೆ ಚಂದ್ರು ಮತ್ತು ಅವನ ಹುಡುಗಿಯೇ ಉಪಯೋಗಿಸಿರಬೇಕು. ಅಥವಾ ನಾನು ಕೆಲಸಕ್ಕೆ ಹೋದ ನಂತರ ವಸಂತ್ ಏನಾದರೂ?..

ವಸಂತ್ ಇನ್ನೂ ಹಾದರ ಮಾಡುತ್ತಿದ್ದಲ್ಲಿ ಇಷ್ಟೆಲ್ಲ ಆದನಂತರವೂ ಕಾಂಡೊಮನ್ನು ಕಣ್ಣಿಗೆ ಕಾಣುವಂತೆ ಎಸೆಯುವಷ್ಟು ಮೂರ್ಖನಲ್ಲ. ಯೋಚಿಸಿದಷ್ಟೂ ಚಂದ್ರುನದೇ ಇರಬೇಕು ಎನ್ನಿಸುತ್ತದೆ. ಅವತ್ತು ವಸಂತ್ ಕಣ್ಣಿಗೇನಾದರೂ ಅದು ಬಿದ್ದು ನನ್ನ ಬಗ್ಗೆ ಸಂಶಯ ಪಡುತ್ತಿಬಹುದೇ? ಇತ್ತೀಚೆಗೆ ಯಾಕೆ ನನ್ನ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾನೆ?

ಅವತ್ತು ರಾತ್ರಿ ಕತ್ತಲಲ್ಲೇ ರೂಮಿಗೆ ಬಂದು , ಹಾಸಿಗೆಯ ಪಕ್ಕವೇ ನಿಂತು ನನ್ನನ್ನು ನಿರುಕಿಸಿದ. ಅಪರಿಚಿತನೊಬ್ಬ ನಿಂತು ನೋಡುತ್ತಿದ್ದಂತೆ ನನಗೆ ಮುಜುಗರವಾಗಿತ್ತು. ಒಂದಿಷ್ಟು ಭಯವೂ ಆಗಿತ್ತು. ಕಣ್ಣು ಮುಚ್ಚಿ ನಿದ್ರಿಸಿದಂತೆ ನಟಿಸಿದೆ. ಅವನು ಹೊರಟುಹೋದ.

ಇವನು ವರ್ಷಳ ಜೊತೆ ಮಲಗಿ ಸುಖಿಸಿದ ಕಾರಣಕ್ಕೆ ನನಗದೆಷ್ಟು ಶಿಕ್ಷೆ. ಅವೆಷ್ಟು ಒಂಟಿ ರಾತ್ರಿಗಳು. ಇವನು ಊರಿಗೋ ಮತ್ತೆಲ್ಲಿಗೋ ಹೇಳದೆ, ಕೇಳದೆ ಹೋದಾಗ ನನಗದೆಷ್ಟು ಅನಿಶ್ಚಿತತೆ. ಇವನು ಮಾಡಿದ ಹಾದರಕ್ಕೆ, ನಾನ್ಯಾಕೆ ಮುಂದೆಬಿದ್ದು ಇವನೊಡನೆ ಸಂಧಾನ ಮಾಡಿಕೊಳ್ಳಲಿ?

ನನ್ನ ಒಂಟಿತನ ನೀಗಿಕೊಳ್ಳಲು, ಯಾರ್ಯಾರನ್ನೋ ಕನಸಲ್ಲಿ ಕೂಡಿ ಮಾನಸಿಕವಾಗಿ ಹಾದರ ಮಾಡುವಂತಾಗಿದೆ. ಥೇ... ಎಂತಹ ಆದರ್ಶಗಳನ್ನು ಮೈಗೂಡಿಸಿಕೊಂಡು ಬೆಳೆದ ನನಗೆ ಇಂತಹ ಪಶು ಸಾಂಗತ್ಯ ಸಿಕ್ಕಿರುವುದು ಯಾವ ಜನ್ಮದ ಪಾಪವೋ?

ಇವನ ಲಫಂಗತನಕ್ಕೆ ವಂಶಿಕ್ ನನ್ನು ತಂದೆಯಿಲ್ಲದಂತೆ ಬೆಳೆಸಿ ಯಾಕೆ ಶಿಕ್ಷಿಸಬೇಕು? ಎಂದು ನಾನು ವಿಚ್ಛೇದನದಿಂದ ದೂರಸರಿದೆ. ತಪ್ಪು ಮಾಡದೇ ಸ್ವತಃ ಶಿಕ್ಷೆ ಅನುಭವಿಸುತ್ತಿದ್ದರೂ ವಸಂತನಿಗೆ ಏನೂ ಅನ್ನದಿರಲು ಸಾಧ್ಯವೇ? ಎಗ್ಗಿಲ್ಲದೆ ತಾಡಿಸುವುದನ್ನು ಕಲಿತಿದ್ದೇನೆ. ಅವನು ಸುಮ್ಮನಿರುವುದನ್ನು ಕಲಿತ್ತಿದ್ದಾನೆ.

ನನ್ನ ಬದುಕೇ ಈಗ ಏಕತಾನತೆಯ ಮಂತ್ರವಾಗಿಹೋಗಿದೆ. ಇದು ಕಲಕಬೇಕೆಂದರೆ, ನಮ್ಮಲ್ಲಿ ಯಾರಾದರೂ ಒಬ್ಬರು ಸಾಯಬೇಕು ಎಂದು ಎಷ್ಟೋ ಬಾರಿ ಅನ್ನಿಸಿದೆ.

ಯಾರು ಸಾಯಬೇಕು? ತಪ್ಪು ಮಾಡಿದ ಅವನೋ? ದಿನನಿತ್ಯ ಶಿಕ್ಷೆ ಅನುಭವಿಸುತ್ತ ಸತ್ತ ಬದುಕನ್ನು ನಡೆಸುತ್ತಿರುವ ನಾನೋ?

ಅವನೇ ಸಾಯಬೇಕು. ನಾನಲ್ಲ.

ಆದರೆ, ಇವತ್ತು ಅವನ ಕಣ್ಣುಗಳಲ್ಲಿ ಹೊಸತನವಿದೆ. ನನ್ನನ್ನು ನೇರವಾಗಿ ನೋಡುತ್ತಿರುವ ಅವನ ನೋಟದಲ್ಲಿ ಭಯವಿಲ್ಲ. ಎಂತದ್ದೋ ಅಪರಿಚಿತ ಹೊಂಚು. ಮಿಕವನ್ನು ಅಳೆಯುವ ಬೇಟೆಗಾರನಂತದ್ದು. ಅವನಿಗೇನಾದರೂ ಗೊತ್ತಾಯಿತೇ?

ಮನಸ್ಸಿಗೆ ಏನೋ ಕಿರಿಕಿರಿಯಾಗುತ್ತಿದೆ. ಏನೋ ಅಪಾಯದ ಸುಳಿವು. ಮೈಯ ರೋಮಗಳು ಎದ್ದು ನಿಂತಿವೆ. ನನಗೆ ಭಯವಾಗುತ್ತಿದೆ. ಈ ರಾತ್ರಿಯಲ್ಲಿ ತಟ್ಟನೆ ಯಾರ ಮನೆಗೆ ಹೋಗಬೇಕೆಂದು ತಿಳಿಯುತ್ತಿಲ್ಲ.

ಹತ್ತಿರದಲ್ಲೇ ಇದ್ದ ಜಿಮ್ ರಾತ್ರಿ ಹನ್ನೊಂದರವರೆಗೂ ತೆಗೆದಿರುತ್ತದೆ. ಅಲ್ಲಿಗೆ ಹೋದರೆ ಮುಂದೆ ಯೋಚಿಸಬಹುದು.

ಬೇಗನೆ ಜಿಮ್ ಗೆ ಬೇಕಾದ ಉಡುಪು ಧರಿಸಿ, ಶೂ ಹಾಕಿಕೊಂಡು ಮನೆ ಬಿಡಲು ಬಾಗಿಲ ಬಳಿಗೆ ಓಡಿದೆ. ಆದರೆ, ಅವನ್ಯಾಕೆ ನನ್ನ ಹಿಂದೆ ಬರುತ್ತಿದ್ದಾನೆ? ....

ಹೊರಬಾಗಿಲನ್ನು ತೆರೆದೆ. ಅಷ್ಟರಲ್ಲಿ ಧೊಪ್ಪನೆ ತಲೆಗೆ ಬಿದ್ದ ಏಟಿಗೆ... ನಾನು ನೆಲಕ್ಕೆ ಬಿದ್ದಿದ್ದೇನೆ. ಅವನು ವಿಕಾರವಾಗಿ ನನ್ನನ್ನೇ ನೋಡುತ್ತ ನಿಂತಿದ್ದಾನೆ... ಕೂಗಲು.. ಧ್ವನಿಯೇ ಬರುತ್ತಿಲ್ಲ... ಅಯ್ಯೋ ತಲೆಯಿಂದ ರಕ್ತ... ಕಣ್ಣ ಮುಂದೆ ಕತ್ತಲೆ ಆವರಿಸುತ್ತಿದೆ...ಯಾರದು?

# ಹೇಮಂತ

ಅವನದ್ದು ಅತ್ಯಂತ ಶೀತಲ ಮನಸ್ಸೇ ಇರಬೇಕು.

'ರಾತ್ರಿ ಒಂಭತ್ತಕ್ಕೆ ಮನೆಗೆ ಬಂದಾಗ, ಮನೆಯ ಬಾಗಿಲು ತೆರೆದೇ ಇತ್ತು. ಆತುರದಿಂದ ಒಳಬಂದಾಗ ತನ್ನ ಹೆಂಡತಿ ರಕ್ತದ ಮಡುವಿನಲ್ಲಿ ಬಿದ್ದಿದ್ದಳು, ಮುಟ್ಟಿ ನೋಡಿದಾಗ ದೇಹ ತಣ್ಣಗಾಗಿ ಹೋಗಿತ್ತು' ಎಂದು ಹೇಳಿಕೆ ನೀಡಿದ್ದ.

ಐ.ಸಿ.ಯು ನಲ್ಲಿದ್ದ ಅವನು ಬದುಕುಳಿಯುವುದು ಕಷ್ಟವೆಂದು ವೈದ್ಯರು ಸೂಚ್ಯವಾಗಿ ಹೇಳಿದ್ದರು.

ಆದರೆ, ನನಗ್ಯಾಕೋ ಅವನೇ ಕೊಲೆಗಡುಕನಿರಬೇಕೆಂದು ತಟ್ಟನೆ ಅನ್ನಿಸಿಬಿಟ್ಟಿತು. ಮೋಟೀವ್ ಗಾಗಿ ಹುಡುಕಾಡಿದೆವು. ಗ್ರೀಷ್ಮಾಳ ಮೇಲೆ ಇನ್ಶೂರೆನ್ಸ್ ಇರಲಿಲ್ಲ. ಅವಳು ಸತ್ತ ನಂತರ ಅವಳ ಸ್ವಂತ ದುಡಿಮೆ, ಆಸ್ತಿ ಎಲ್ಲವನ್ನೂ ಅವಳು ವಂಶಿಕ್ ಗೆ ಎಂದು ಬರೆದಿದ್ದಳು. ಇಷ್ಟು ಚಿಕ್ಕ ವಯಸ್ಸಿನಲ್ಲೇ ಗ್ರಿಷ್ಮಾ ಯಾಕೆ ವಿಲ್ ಮಾಡಿದ್ದಳು? ಆದರೆ, ವಸಂತ್ ಕೂಡ ಮಾಡಿದ್ದ. ಹಾಗಾಗಿ ಇಬ್ಬರದೂ ಸಾಮಾನ್ಯ ಎಚ್ಚರಿಕೆ ಎಂದುಕೊಳ್ಳಬಹುದಿತ್ತು.

ಗ್ರೀಷ್ಮಾ ಅದೇ ತಾನೇ ಅಡುಗೆ ಮಾಡಿದ್ದಳು. ಸಿಂಕಿನಲ್ಲಿ ಉಂಡ ತಟ್ಟೆಯೊಂದಿತ್ತು.ತನಿಖೆಗೆಂದು ಕ್ರೈಂ ಸೀನಿನ ಪ್ರತಿಯೊಂದು ವಸ್ತುವನ್ನೂ ನಾನು ವಶಪಡಿಸಿಕೊಂಡಿದ್ದೇನೆ. ಅಂದಿನ ಅಡುಗೆಯನ್ನು ಕೂಡ ಫೊರೆನ್ಸಿಕ್ ಲ್ಯಾಬಿಗೆ ಕಳಿಸಿದ್ದೇನೆ.

ಗ್ರೀಷ್ಮಾಳ ದೇಹದ ಮೇಲೆ ಎಲ್ಲಿಯೂ ಬೆರಳ ಗುರುತಿರಲಿಲ್ಲ. ಉಪಯೋಗಿಸಿದ ಆಯುಧದ ಪತ್ತೆಯಿರಲಿಲ್ಲ. ಅವರಿಬ್ಬರ ಹೆಜ್ಜೆ ಗುರುತುಗಳು , ಬೆರಳ ಗುರುತುಗಳ ಹೊರತು ಮನೆಯಲ್ಲಿ ಏನೂ ದೊರೆತಿರಲಿಲ್ಲ. ಅವಳ ದಿನಚರಿಯ ಪುಸ್ತಕದಲ್ಲಿ ಅವರ ನಡುವೆ ವ್ಯವಹಾರವೇ ಕಡಿಮೆಯಿತ್ತು ಎನ್ನುವಂತೆ ಬರೆದಿದ್ದಳು. ಸ್ನೇಹಿತರು, ಸಂಬಂಧಿಗಳು ಅವರಿಬ್ಬರ ನಡುವೆ ಮನಸ್ತಾಪ ಇದ್ದ ಬಗ್ಗೆ ತಮಗೆ ಅಷ್ಟಾಗಿ ಗೊತ್ತಿಲ್ಲ ಎಂದಿದ್ದರು. ಗೊತ್ತಿದ್ದರೂ ಪೋಲೀಸರ ಉಸಾಬರಿ ನಮಗೇಕೆ ಎಂದು ಹಾಗೆ ಹೇಳುತ್ತಿದ್ದರೇ?

ಆದರೂ, ನನಗೆ ವಸಂತನ ಬಗ್ಗೆ ನಂಬಿಕೆ ಬರುತ್ತಿಲ್ಲ.

ಅವತ್ತಿನ ಸಂಜೆ ಸರಿಸುಮಾರು ಒಂಭತ್ತರವರೆಗೆ ವಸಂತ್ ತನ್ನೊಡನೆ ಇದ್ದ ಎಂದು ಮಹೇಶ ಎಂಬ ಗೆಳೆಯ ಅಲಿಬಿ ಕೊಟ್ಟಿದ್ದ. ಎಂಟರವರೆಗೆ ಅವರಿಬ್ಬರರನ್ನೂ ಪಬ್ಬಿನವರು ಒಟ್ಟಿಗೆ ನೋಡಿದ್ದರು. ಪಬ್ಬಿಂದ ಹೊರಟು, ಜೊತೆಯಾಗಿ ಪಾರ್ಕೊಂದರಲ್ಲಿ ಕುಳಿತು ಸ್ವಲ್ಪಕಾಲ ಹರಟಿದೆವು ಎಂದು ಮಹೇಶ್ ಹೇಳಿಕೆ ನೀಡಿದ್ದ.

ಅವರು ಹೇಳಿದ್ದ ಜಾಗದಿಂದ ಕಾರಿನಲ್ಲಿ ಮನೆ ತಲುಪಲು ಹತ್ತು ನಿಮಿಷ ಸಾಕಿತ್ತು. ಆದರೆ, ವಸಂತ್ ಬಂದಾಗ ಗ್ರೀಷ್ಮಾ ಆಗಲೇ ಸತ್ತು ಹೋಗಿದ್ದಳು. ಹಾಗಾಗಿ ವಸಂತನನ್ನು ಕ್ರೈಂ ನಡೆಸಿದ ಅನುಮಾನಗಳಿಂದ ಹೊರಗಿಡಲಾಗಿತ್ತು.

ಆದರೆ, ಅದೃಷ್ಟಕ್ಕೆ ಗ್ರೀಷ್ಮ ನಮಗೊಂದು ದೊಡ್ಡ ಸುಳಿವನ್ನು ಬಿಟ್ಟು ಹೋಗಿದ್ದಳು. ಗ್ರೀಷ್ಮಾಳ ಕೈಯಲ್ಲಿ ಸ್ಮಾರ್ಟ್ ವಾಚೊಂದಿತ್ತು. ಆ ಫಿಟ್-ಬಿಟ್ ವಾಚಿನಲ್ಲಿದ್ದ ಎಲ್ಲ ಮಾಹಿತಿಗಳನ್ನು ಹೊರತೆಗೆದು ಜಾಲಾಡಿದೆವು.

ಗ್ರೀಷ್ಮಾ ಒಂಭತ್ತಕ್ಕೆ ಸತ್ತಿರಲೇ ಇಲ್ಲ.

ಆ ಸ್ಮಾರ್ಟ್ ವಾಚಿನಲ್ಲಿ ಒಂಬತ್ತೂ ನಲವತ್ತರವರೆಗೆ ಅವಳ ಹೃದಯದ ಚಟುವಟಿಕೆ, ಉಸಿರಾಟ, ಪಲ್ಸ್ ಎಲ್ಲವೂ ದಾಖಲಾಗಿತ್ತು. ಅಂದರೆ, ಅಲ್ಲಿಯವರೆಗೆ ಅವಳು ಬದುಕಿಯೇ ಇದ್ದಳು. ಉಸಿರಾಡುತ್ತಿದ್ದಳು.

ಆದರೆ, ಒಂಭತ್ತಕ್ಕೆ ಮನೆಗೆ ಬಂದಾಗ ಅವಳ ದೇಹವಾಗಲೇ ತಣ್ಣಗಾಗಿ ಹೋಗಿತ್ತು ಎಂದು ವಸಂತ್ ಯಾಕೆ ಹೇಳಿಕೆ ಕೊಟ್ಟ?

ಹೆಂಡತಿಯ ತಲೆಗೆ ಹೊಡೆದು ಅವಳು ನೆಲಕ್ಕೆ ಬಿದ್ದು ರಕ್ತ ಹರಿದದ್ದನ್ನು ನೋಡಿ ಸತ್ತುಹೋದಳೆಂದೇ ಭಾವಿಸಿರಬೇಕು.

ಅವನ ಕೂಗನ್ನು ಕೇಳಿ ಅಕ್ಕ -ಪಕ್ಕದವರು ಬಂದಾಗ ವಸಂತ್ ವಾಂತಿ ಮಾಡಿಕೊಳ್ಳುತ್ತಿದ್ದನಂತೆ. ಅದು ನಿಂತಿರಲೇ ಇಲ್ಲ. ಜೊತೆಗೆ ಹೆಂಡತಿಯ ಕಳೇಬರದ ಕಡೆಗೆ ಕೈ ತೋರಿ ಅಳುತ್ತಿದ್ದ ಅವನನ್ನು ಒಂದಷ್ಟು ಹೊತ್ತು ಸುಧಾರಿಸಲು ಪ್ರಯತ್ನಿಸಿ ಸೋತ ಅವರೇ ಆಂಬ್ಯುಲೆನ್ಸ್ ಮತ್ತು ಪೋಲೀಸರ ನಂಬರಿಗೆ ಫೋನಾಯಿಸಿದ್ದರು. ಅಷ್ಟರಲ್ಲಾಗಲೇ ಹತ್ತುಗಂಟೆಯಾಗಿತ್ತು. ವಸಂತನನ್ನು ಆ ಕೂಡಲೇ ಆಸ್ಪತ್ರೆಗೆ ದಾಖಲಿಸಿಕೊಂಡಿದ್ದರು.

ಈ ಕೇಸ್ ಮುಗಿಸುವವರೆಗೆ ಆಸ್ಪತ್ರೆಯಲ್ಲಿರುವ ಅವನ ವಾರ್ಡಿಗೆ ಕಾವಲು ಹಾಕಿಸಿದ್ದೇನೆ. ವಸಂತ್ ಬದುಕುಳಿದರೆ ಅವನನ್ನು ಕಂಬಿಯೆಣಿಸುವಂತೆ ಮಾಡಲು ಗ್ರೀಷ್ಮಾಳ ಫಿಟ್ನೆಸ್ ವಾಚಿನ ಮಾಹಿತಿಗಳು ಸಾಕೇ ಸಾಕು.

ಇವತ್ತು ಬೇರೆ ಹೊರಗಡೆ ಸಿಕ್ಕಾಪಟ್ಟೆ ಮಳೆ ಸುರಿಯುತ್ತಿದೆ. ಈ ಮನುಷ್ಯ ಸಂಬಂಧಗಳ ಸೋಲಿಗೆ ಅದೂ ಕಣ್ಣೀರುಡುತ್ತಿರುವಂತಿದೆ. ಅಷ್ಟಕ್ಕೂ, ಯಾವಾಗ ಯಾವ ಋತು ಎಂದು ಹೇಳುವುದು ಕೂಡ ಇತ್ತೀಚೆಗೆ ಕಷ್ಟವೇನೋ?

# ವರ್ಷ

ಅವತ್ತು ಹೆಂಡತಿಗೆ ಸಿಕ್ಕಿಬಿದ್ದರೂ ವಸಂತ್ ನನ್ನನ್ನು ಬಿಟ್ಟಿರಲಿಲ್ಲ. ಆದರೆ ಇವತ್ತು ಅವನು ಈ ಪ್ರಪಂಚವನ್ನೇ ಬಿಟ್ಟು ಹೊರಟುಹೋಗಿದ್ದಾನೆ. ನನಗೆ ದುಃಖ ತಡೆಯಲಾಗುತ್ತಿಲ್ಲ. ರಾತ್ರಿ ಅವಳು ಬಾಗಿಲು ತೆರೆದು, ಹೊರಗಿಣಿಕಿದ ಕೂಡಲೇ ಹೊಂಚಿಕೂತಿದ್ದ ನಾನು ಕಬ್ಬಿಣದ ಸಲಕೆಯಿಂದ ಬಲವಾಗಿ ಹೊಡೆದೆ. ಸದ್ಯಕ್ಕೆ ಅವಳು ತನ್ನ ಮನೆಯೊಳಗೇ ಕುಸಿದುಬಿದ್ದಳು. ಅವಳ ಹಿಂದೆಯೇ ನಿಂತಿದ್ದ ವಸಂತ್ ನನ್ನನ್ನು ನೋಡಿ ಗಾಬರಿಯಾದ. ಅವನ ಮುಖ ರಕ್ತವೆಲ್ಲ ಇಂಗಿಹೋದಂತೆ ಬೆಳ್ಳಗಾಗಿತ್ತು. ಅವನ ಆರೋಗ್ಯ ಆಗಲೇ ಬಿಗಡಾಯಿಸುತ್ತಿತ್ತೇ? ನನ್ನ ಕೈಲಿದ್ದ ಸಲಾಕೆಯ ಸಮೇತ ಆ ಕೂಡಲೇ ಓಡಿಹೋಗುವಂತೆ ಹೇಳಿದ. ನಾನು ಹಾಗೇ ಮಾಡಿದೆ.

ಅವನು ಪಕ್ಕವೇ ಕೂತು ಅವಳು ಸಾಯುವುದನ್ನು ಖಾತ್ರಿಪಡಿಸಿಕೊಳ್ಳಲು ಕಾದಿರಬೇಕು. ಇಲ್ಲದಿದ್ದರೆ ಬೇಗನೆ ಆಂಬ್ಯುಲೆನ್ಸ್ ಗೆ ಫೋನ್ ಮಾಡಿಕೊಳ್ಳಬಹುದಿತ್ತು. ಛೇ…ನನ್ನ ವಸಂತನನ್ನು ನಾನೇ ಕೊಂದೆ ಎನಿಸುತ್ತಿದೆ. ವಸಂತನ ಸಾವಿಗೆ ಅವನ ದೇಹ ಸೇರಿದ್ದ ವಿಷವೇ ಕಾರಣ ಎಂದು ಆಸ್ಪತ್ರೆ ಹೇಳಿಕೆ ನೀಡಿದೆಯಂತೆ. ಅವಳೇ ಊಟದಲ್ಲಿ ವಿಷಹಾಕಿದ್ದಳೇನೋ? ಹಾಕಿದ್ದರೂ, ಅವಳನ್ನು ಈಗ ಯಾರೂ ಏನೂ ಮಾಡುವಂತಿರಲಿಲ್ಲ. ನಾನು ಮಾಡಿದ ಕೊಲೆಯನ್ನು ತನ್ನ ಮೇಲೆಳೆದುಕೊಂಡ ನನ್ನ ವಸಂತ್ ಕೂಡ … ಇನ್ನಿಲ್ಲ.. ಅವಳಿಗೆ ಏನಾದರೂ ಮಾಡಬೇಕು ಎಂದು ಅದೆಷ್ಟೋ ಸಾರಿ ವಸಂತನಿಗೆ ಪರೋಕ್ಷವಾಗಿ ಹೇಳಿ ನೋಡಿದೆ. ಅವನು ಹಿಂಜರಿಕೆಯಲ್ಲೇ ದಿನ ತಳ್ಳುತ್ತಿದ್ದ. ಅವಳು ಇರುವವರೆಗೆ ಅವನು ಕಳ್ಳನಂತೆ ನನ್ನನ್ನು ಕೂಡುವುದು ತಪ್ಪುತ್ತಿರಲಿಲ್ಲ. ಅವಳು ಬದುಕಿನಿಂದ ತೊಲಗಿದರೆ, ನಿನ್ನನ್ನೇ ಮದುವೆಯಾಗುವೆ ಎಂದು ಅವನದೆಷ್ಟು ಬಾರಿ ಹೇಳುತ್ತಿದ್ದ. ಈಗ ದಿನಾ ಸಾಯಲು ನಾನಾದರೂ ಯಾಕೆ ಬದುಕಿದ್ದೇನೋ?...ಈ ಮಳೆಯಲ್ಲೇ ಮಣ್ಣಾಗಿಹೋಗುತ್ತೇನೆ…ದೇವರೇ!



# ಅರಳದವಳು

ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ

ಹೊರಗಡೆ ದೋ ಎಂದು ಮಳೆ ಸುರಿಯುತ್ತಿದೆ, ಗುಡುಗಿನ ಶಬ್ದ ಮುಚ್ಚಿದ ಕಿಟಕಿಗಳ ತೂರಿ ಬರುತ್ತಿದೆ. ಸಿಕ್ಕಿದ ಒಂದೇ ಹೋಟೆಲ್ ರೂಮಿನಲ್ಲಿ ಈ ಕವಿಯತ್ರಿ ಜೊತೆ ಈ ರಾತ್ರಿ ಇರುವುದು ಮುಜುಗರ ತರುತ್ತಿದೆ. ಬೇರೆ ದಾರಿಗಾಣದೆ ಇಲ್ಲೇ ಉಳಿಯುವ ಪ್ರಸಂಗ ಎದುರಾಗಿ ಸಿಕ್ಕಿಹಾಕಿಕೊಂಡನೇನೋ ಅನಿಸುತ್ತಿದೆ. ಕವಿಯತ್ರಿ, ಇರುವ ಒಂದೇ ಹಾಸಿಗೆಯ ಮೇಲೆ ಕುಳಿತು ಯಾವುದೋ ಪುಸ್ತಕ ಓದುತ್ತಿದ್ದಾರೆ. ಕವಿತೆಗಳು. ನಾನೂ ಕವಿಯೇ. ಕವಿ-ಕವಿಯತ್ರಿ, ಇಬ್ಬರಿಗೂ ಮೂವತ್ತೈದರ ಆಸುಪಾಸು, ರಮ್ಯಗೀತೆಗಳನ್ನು ಸಾಕಷ್ಟು ಬರೆದಿದ್ದೇವೆ. ಕವಿಯತ್ರಿ ತುಂಬಾ ಸುಂದರವಾದ ಹೆಣ್ಣು, ತೆಳು, ಆಕಾಶ ನೀಲಿ ಸೀರೆ, ಕೆಂಪು ಬಣ್ಣದ ರವಿಕೆ ಉಟ್ಟಿದ್ದಾರೆ. ಉದ್ದ ಕೂದಲು ಕೆಳಗೆ ಹಾಸಿಗೆಗೆ ಹರಡಿವೆ, ಒಂದೇ ಒಂದು ಕ್ಲಿಪ್ ಹಾಕಿ ಕೂದಲನ್ನು ಬೆನ್ನಿನ ಮೇಲೆ ಹರಿಯ ಬಿಟ್ಟಿದ್ದಾರೆ. ಕೈಯ ತುಂಬಾ ಕೆಂಪು ಗಾಜಿನ ಬಳೆ,ಪುಸ್ತಕದ ಪುಟ ತಿರುಗಿಸುವಾಗ ಬಳೆ ಮಾಡುವ ಶಬ್ದ ಕಿವಿಗೆ ಇಂಪಿಗಿಂತ, ಮೋಹಕವಾಗಿದೆ. ಅವರು ಕುಳಿತಿರುವ ಭಂಗಿ ಯಾವೊದೋ ಕಲಾಕೃತಿಯಂತೆ ಇದೆ. ಕತ್ತಿನಲ್ಲಿ ಬಂಗಾರದ ಉದ್ದ ಸರ ಇದೆ, ಆ ಸರದ ಸುತ್ತ ಕೂದಲು ಲಾಸ್ಯವಾಡುತ್ತಿವೆ. ಪರಿಸರದ ಪರಿವೆಯೇ ಇಲ್ಲದೆ ಕವಿತೆಗಳಲ್ಲಿ ಮುಳುಗಿ ಹೋಗಿದ್ದಾರೆ, ಆಗಾಗ ಕೆಂಪು ತುಟಿಯಲ್ಲಿ ತುಸುನಗೆ ಮೂಡುತ್ತದೆ. ಬೆಳ್ಳಗಿನ ಕೆನ್ನೆ, ಗಂಭೀರ ಮುಖ. ಹೆಣ್ಣು ಹದಿನಾರ ವಯಸ್ಸಿಗಿಂತ ಮೂವತ್ತರ ವಯಸ್ಸಿನಲ್ಲೇ ಹೆಚ್ಚು ಸುಂದರವಾಗಿ ಕಾಣಿಸುತ್ತಾಳೆ ಎನಿಸುತ್ತದೆ. ಏಕೆಂದರೆ ಹದಿಹರಯದ ಚೆಲ್ಲು, ಅತೀ ಮುಗ್ದತೆ, ಪ್ರಪಂಚದ ಅರಿವಿಲ್ಲದಿರುವುದು, ಗಾಂಭೀರ್ಯ ಇರದಿರುವುದು, ಇವೆಲ್ಲಾ ಮೂವತ್ತರ ನಂತರ ಬದಲಾಗುತ್ತವೆ. ಮೂವತ್ತರ ವಯಸ್ಸಿಗೆ ಗಾಂಭೀರ್ಯ ಹೊಂದಿದ ಮುಖ , ಎಲ್ಲವನ್ನೂ ತಿಳಿದುಕೊಂಡಿರುವ ಮನಸ್ಸು, ಪರಿಸರವನ್ನು ನಿಭಾಯಿಸುವ ಶಕ್ತಿ ಎಲ್ಲವು ಕೂಡಿ ಬಂದು ಸೌಂದರ್ಯ ತುಸು ಹೆಚ್ಚೇ ಆಗುತ್ತದೆ. ಜೀವನಸ್ಥಿರತೆ ಇನ್ನೂ ಹೆಚ್ಚು ನಿರಾಳ ನೀಡುತ್ತದೆ.

ಇಷ್ಟೊತ್ತಿಗಾಗಲೇ ನೀವು ಗಂಡಸು ಬುದ್ದಿ ಅಂದುಕೊಂಡಿರಬಹದು, ಗಂಡಸರು ಎಷ್ಟೇ ಒಳ್ಳೆಯವರಾಗಿದ್ದರೂ ಹೆಣ್ಣಿನ ಸೌಂದರ್ಯದ ಸೆಳೆತ ಉಂಟೇ ಉಂಟಾಗುತ್ತದೆ, ಅದು ಪ್ರಕೃತಿ ದತ್ತ. ಒಳ್ಳೆಯವರು ಎಂದು ಅನಿಸಿಕೊಳ್ಳುವುದಕ್ಕೆ ಸ್ವಲ್ಪ ಕಷ್ಟಪಡಬಹುದೇನೋ ಆದರೆ ಒಳಹೊಕ್ಕು ನೋಡಿದರೆ ಹೆಣ್ಣಿನ ಸೌಂದರ್ಯ ಸಂತೋಷದ ಅಲೆಗಳನ್ನು ಎಬ್ಬಿಸಿಯೇ ಎಬ್ಬಿಸುತ್ತವೆ. ಎಲ್ಲಾ ವಿಕಾರವಾಗುವುದು ಅತಿರೇಖಕ್ಕೆ ಹೋದಾಗ, ಇಲ್ಲ ಹೆಣ್ಣಿನ ಇಷ್ಟದ ವಿರುದ್ಧಹೋದಾಗ ಮಾತ್ರ.

ತನ್ನನು ಒಬ್ಬ ಪುರುಷ ಗಮನಿಸುವುದು ಹೆಣ್ಣಿಗೆ ತಿಳಿದೇ ತಿಳಿಯುತ್ತದೆ. ಪುರುಷ ಇಷ್ಟದವನಾಗಿದ್ದರೆ ಸಂತೋಷವೂ, ಇಷ್ಟವಿಲ್ಲದಿದ್ದರೆ ಮುಜುಗರುವೂ ಆಗುತ್ತದೆ. ಕೆಲವು ಸಲ ಏನನ್ನೂ ವ್ಯಕ್ತಪಡಿಸದ ಕಲೆ ಹೆಣ್ಣಿಗೆ ಸಿದ್ಧಿಸಿರುತ್ತದೆ. ಒಳಗೆ ಎಂತಹ ತರಂಗಳು ಏಳಿದರೂ ಅವು ಮನಸಿನಾಚೆಗೆ ಸುಳಿಯುವುದಿಲ್ಲ. ಗಂಡಿಗಿಂತ ಹೆಣ್ಣು ಹೆಚ್ಚು ಸೂಕ್ಷ್ಮಳೂ, ಬುದ್ಧಿವಂತಳೂ ಆಗಿರುತ್ತಾಳೆ. ಹೆಣ್ಣಿಗೆ ಸಂದರ್ಭಗಳನ್ನು ನಿಭಾಯಿಸುವ ಶಕ್ತಿ ಹೆಚ್ಚು ಇರುತ್ತದೆ. ಹಿಂದಿನಿಂದ, ಗಂಡಿಗೆ ಸಿಕ್ಕ ಅವಕಾಶಗಳು ಹೆಣ್ಣಿಗೆ ಸಿಕ್ಕಿದ್ದಿದ್ದರೆ ಇಂದು ಹೆಣ್ಣು ಇನ್ನೂ ಎತ್ತರಕ್ಕೆ ಏರುವುದಲ್ಲದೆ ಪ್ರಪಂಚವನ್ನು ಇನ್ನೂ ಹೆಚ್ಚು ಸುಂದರವಾಗಿರಿಸುತ್ತಿದ್ದಳು. ಮನೆಯಲ್ಲಿ ಹೆಣ್ಣಿನ ಇರುವಿಕೆಯೇ ನೆಮ್ಮದಿ.

*******************************************************************************************

ಮಂಗಳೂರಿನ ಕನ್ನಡ ಸಂಘ ಕನ್ನಡ ರಾಜ್ಯೋತ್ಸವಕ್ಕೆ ನನ್ನನು ಅತಿಥಿ ಆಗಿ ಬರಲು ಸಾಧ್ಯವೇ ಎಂದು ಕೇಳಿದ್ದರು. ಮಂಗಳೂರಿನ ಕಡಲ ತೀರವೆಂದರೆ ನನಗೂ ಇಷ್ಟವೇ, "ಸರಿ" ಎಂದು ಒಪ್ಪಿಕೊಂಡಿದ್ದೆ. ನಾನಿರುವ ಊರಿನಿಂದ ಮೂರು ಗಂಟೆಯ ಪ್ರಯಾಣ, ಕಾರ್ಯಕ್ರಮ ಬೆಳಿಗ್ಗೆ ಹತ್ತು ಗಂಟೆಗೆ, ಸರಿ ಬೆಳಿಗ್ಗೆ ಆರು ಗಂಟೆಗೆ ಹೊರಟರೂ, ಸಂಜೆ ವಾಪಸ್ ಆಗಬಹದು. ಹೆಂಡತಿ ಸ್ವಾತಿ, ಎರಡನೇ ಮಗುವಿನ ಬಾಣಂತನಕ್ಕೆ ತವರಿಗೆ ಹೋಗಿದ್ದಾಳೆ. ಪತ್ನಿ ಕವಿಯಲ್ಲದಿದ್ದರೂ "ತೌರ ಸುಖದಲೆನ್ನ ಮರೆತಿಹಳು ಎನ್ನದಿರಿ" ಎಂದು ಪತ್ರ ಬರೆಯುವಷ್ಟು ರೋಮ್ಯಾಂಟಿಕ್. ಅವಳೆಂದರೆ ನನಗೆ ಇನ್ನಿಲ್ಲದ ಪ್ರೀತಿ.

ಕಾರ್ಯಕ್ರಮ ಮುಗಿದಾಗ ಸಂಜೆ ಐದು ಗಂಟೆ, ಇನ್ನೂ ಬಿಸಿಲಿತ್ತು. ಬಂದಿದ್ದವರೆಲ್ಲಾ ಹೊರಡತೊಡಗಿದ್ದರು, ನಾನು ಹೊರಗಡೆ ಬಂದು ಬಸ್ಸಿಗಾಗಿ ನಿಲ್ದಾಣದ ಕಡೆ ನಡೆಯುವುದೋ, ಇಲ್ಲಾ ಸಮುದ್ರ ತೀರಕ್ಕೆ ಹೋಗಿ ಸ್ವಲ್ಪ ಸಮಯ ಕಳೆಯುವುದೋ ಎನ್ನುವ ಗೊಂದಲದಲ್ಲಿ ನಿಂತಿದ್ದೆ. ಸರಿ ಇನ್ನೂ ಸಮಯವಿದೆ,ಸಮುದ್ರ ತೀರಕ್ಕೆ ಹೋಗೋಣ ಎಂದು ಆ ಕಡೆ ನಡೆಯಲು ತಿರುಗಿದಾಗ "ಸರ್" ಎಂದು ಹೆಣ್ಣಿನ ದನಿ ಕೇಳಿಸಿತು, ಹಿಂದೆ ತಿರುಗಿದರೆ ಕಾರ್ಯಕ್ರಮಕ್ಕೆ ಬಂದಿದ್ದ

ಕವಿಯತ್ರಿ, ಅವರ ಹೆಸರು ಪಲ್ಲವಿ, "ಪ್ರಕೃತಿ" ಎನ್ನುವ ಕಾವ್ಯನಾಮದಿಂದ ಕವಿತೆ ಬರೆಯುತ್ತಾರೆ. ಅವರ "ಎದೆಯಲ್ಲಿ ಅರಳಿದ ಹೂವು" ಕವನ ಸಂಕಲನದ ಬಗ್ಗೆ ಕಾರ್ಯಕ್ರಮದಲ್ಲಿ ಮಾತನಾಡಿದ್ದೆ. ಅಲ್ಲಿನ ಕವನಗಳಿಂದ ಪ್ರಭಾವಿತನಾಗಿದ್ದೆ. ಅಲ್ಲೇ ನಿಂತೆ.

ಹತ್ತಿರ ಬಂದವರೆ "ಸರ್ ನಿಮ್ಮ ಮಾತು ತುಂಬಾ ಚೆನ್ನಾಗಿತ್ತು" ಎಂದಳು . "ಥ್ಯಾಂಕ್ಸ್ " ನಾನೆಂದೆ.

"ಬಸ್ ಸ್ಟ್ಯಾಂಡ್ಗೆ ಹೊರಟಿರಾ' ಎಂದಳು. "ಇಲ್ಲ ಇಲ್ಲೇ ಬೀಚ್ ಹತ್ತಿರ ಹೋಗೋಣ ಎಂದು" ಎಂದೆ

"ಹೌದಾ ನಡೆಯಿರಿ ನಾನೂ ಬರುತ್ತೇನೆ, ಬೀಚ್ ನೋಡಿ ತುಂಬಾ ದಿನ ಆಯಿತು" ಎಂದು ನಡೆಯತೊಡಗಿದಳು . ಸರಿ ನಾನೂ ಹೆಜ್ಜೆ ಹಾಕಿದೆ.

ಇದೊಂದು ಸೋಜಿಗವಾಗಿ ಕಂಡಿತಾದರೂ, ಒಬ್ಬನೇ ಬೀಚಿನಲ್ಲಿ ಕುಳಿತಿರುವುದಕ್ಕಿಂತ ಸಮಾನ ಅಭಿರುಚಿಯೊಂದಿದ ಒಬ್ಬರು ಸಿಕ್ಕಿದ್ದು ಒಳ್ಳೆಯದೇ ಅನಿಸಿತು. ದಾರಿಯುದ್ದಕ್ಕೂ ಅವಳು ಮಾತನಾಡುತ್ತಲೇ ಇದ್ದಳು. ಸಿಹಿಯಾದ ದನಿ ಅನಿಸಿತು. ಸಾಹಿತ್ಯ, ಸಂಗೀತ, ರಾಜಕಾರಣ ಎಲ್ಲವೂ ಅವಳ ಮಾತಿನಲ್ಲಿ ಬಂದು ಹೋದವು. ನಾನು "ಆ,ಹೂಂ" ಅಂತಿದ್ದೆ. ಅವಳು ತುಂಬಾ ಬುದ್ದಿವಂತಳು ಅನಿಸಿತು.

ಅದು ಇದೂ ಮಾತನಾಡುತ್ತಾ ಸಮುದ್ರ ತೀರಕ್ಕೆ ಬಂದೆವು. ಸೂರ್ಯನ ಬೆಳಕು ಪ್ರತಿಫಲಿಸಿ, ನೀರೆಲ್ಲಾ ಬೆಳಕಾದಹಾಗೆ ಸಮುದ್ರ ಕಂಡಿತು. ಸಮುದ್ರದ ಹತ್ತಿರಕ್ಕೆ ಓಡಿದ ಪಲ್ಲವಿ, ಚಿಕ್ಕ ತುಂಟ ಹುಡುಗಿಯಂತೆ, ಅಲೆಗಳೊಡನೆ ಆಟವಾಡತೊಡಗಿದಳು. ಸೀರೆಯ ನೆರಿಗೆಗಳನ್ನು ಎತ್ತಿ ಅಲೆ ಬಂದಾಗ ಅಲೆಗಳಿಂದ ದೂರ ಓಡುವುದು, ಅಲೆ ಸಮುದ್ರಕ್ಕೆ ಹಿಂತಿರುಗಿದಾಗ ಹಿಂಬಾಲಿಸುವುದು ಮಾಡುತಿದ್ದಳು. ಅವಳ ಬಿಳಿ ಪಾದದಲ್ಲಿನ ಬೆಳ್ಳಿ ಗೆಜ್ಜೆಗಳು ಸುಂದರವಾಗಿ ಕಾಣಿಸುತ್ತಿದ್ದವು.

ಇದ್ದಕಿದ್ದಹಾಗೆಯೇ ಮೋಡ ಕವಿಯಿತು, ಆಗಸವೆಲ್ಲಾ ಕಪ್ಪುಮೋಡದಿಂದ ತುಂಬಿ ಹೋಯಿತು. ಸೂರ್ಯ ಮೋಡಗಳ ಒಳಗೆ ಮರೆಯಾಗಿ ಕತ್ತಲು ಆವರಿಸಿದಂತಾಯಿತು. ಈಗಷ್ಟೇ ಇಲ್ಲಿ ಸೂರ್ಯ ರಶ್ಮಿ ಇತ್ತು ಎನ್ನುವುದು ನಂಬುವುದೇ ಅಸಾಧ್ಯ ಎನ್ನುವ ಮಟ್ಟಿಗೆ ಕತ್ತಲು ಕವಿಯಿತು. ಎಲ್ಲರೂ ಮಳೆ ಬರಬಹುದು ಎಂದು ಅಲ್ಲಿಂದ ಎದ್ದು ಓಡತೊಡಗಿದರು. ನಾನು "ಪಲ್ಲವಿ ಅವರೆ" ಎಂದು ಜೋರಾಗಿ ಕೂಗಿದೆ.

ನಾವಿಬ್ಬರೂ ರಸ್ತೆಗೆ ಬರುವಷ್ಟರಲ್ಲಿ ಮಳೆ ಜೋರಾಗಿ ಸುರಿಯತೊಡಗಿತು.ಎಲ್ಲಿ ಹೋಗುವುದೋ ತಿಳಿಯದೆ ಅಲ್ಲೇ ಇದ್ದ ಅಂಗಡಿ ಮಳಿಗೆಯ ಮುಂಬಾಗ ನಿಂತೆವು. ಅಂಗಡಿ ಆಗಲೆ ಮುಚ್ಚಿತ್ತು.

ಏನು ಮಾಡುವುದು ಎಂದು ಅವಳ ಕಡೆ ನೋಡಿದೆ. ಅವಳು ನಿರಾಳವಾಗಿ ನಿಂತಿದಳು. ಜೊತೆಯಲ್ಲಿ ಪುರುಷನಿದ್ದರೆ ತನ್ನ ಜವಾಬ್ದಾರಿಯೆಲ್ಲಾ ಅವನದೇ ಎಂದು ಹೆಣ್ಣು ತಿಳಿಯುತ್ತಾಳೆಯೇ ಎನಿಸಿತು. ಇಲ್ಲೇ ಇದ್ದರೆ ರಾತ್ರಿಯೆಲ್ಲಾ ಇಲ್ಲೇ ಕಳೆಯಬೇಕೇನೋ ಅನಿಸಿತು. ನಮ್ಮ ಅದೃಷ್ಟಕ್ಕೆ ಎಂಬಂತೆ ಒಂದು ಆಟೋ ನಮ್ಮ ಕಡೆ ಬರುತ್ತಿರುವುದು ಕಾಣಿಸಿತು. ಹೋಗಿ ದಾರಿಗೆ ಅಡ್ಡನಿಂತೆ.

"ಸ್ವಲ್ಪ ನಮ್ಮನ್ನು ಹತ್ತಿರದ ಹೋಟೆಲ್ ಒಂದಕ್ಕೆ ಕರೆದುಕೊಂಡು ಹೋಗಲು ಸಾಧ್ಯವೇ" ಎಂದೆ

ಅವನು ಸ್ವಲ್ಪ ಯೋಚಿಸಿ ಹೊತ್ತು "ಬನ್ನಿ' ಎಂದ.

ಆಟೋ ಹತ್ತಿದೆವು. ಮುಂದೆ ಸಾಗಿದರೆ ರಸ್ತೆಯೆಲ್ಲಾ ನೀರು. ಆಟೋದವ ಆಟೋವನ್ನು ಕಷ್ಟದಿಂದ ನಡೆಸುತ್ತಿದ್ದ. ರಸ್ತೆ ಯಾವುದು ಗುಂಡಿ ಯಾವುದೋ ತಿಳಿಯದೆ ಸಾಧ್ಯವಾದಷ್ಟು ನಿಧಾನವಾಗಿ ಚಲಿಸುತ್ತಿದ್ದ. ಕರೆಂಟು ಹೋಗಿ ತುಂಬಾ ಹೊತ್ತು ಆಗಿತ್ತು.

ಅಂತೂ ಇಂತೂ ಒಂದು ಗಂಟೆಯ ಸ್ಲೋ ಮೋಶನ್ ಪ್ರಯಾಣದಲ್ಲಿ ಒಂದು ಹೋಟೆಲ್ ತಲುಪಿದೆವು. ಕೌಂಟರ್ ಹತ್ತಿರ ತಲುಪಿದಮೇಲೆ ತಿಳಿದಿದ್ದು ಯಾವುದೇ ರೂಮ್ ಖಾಲಿ ಇಲ್ಲ ಎಂದು. ಹೋಟೆಲ್ ಮ್ಯಾನೇಜರ್ ಹತ್ತಿರ ಗೋಗೆರೆಯುತ್ತಿದ್ದಾಗ ಅವನಿಗೆ ಒಂದು ಫೋನ್ ಬಂತು "ಹೌದಾ ಸರ್,ಓಕೆ, ಸರ್" ಎಂದು ಫೋನ್ ಇಟ್ಟು "ನಿಮ್ಮಅದೃಷ್ಠ ಚನ್ನಾಗಿದೆ. ಅದು ನಮ್ಮ ಓನರ್ ಫೋನ್ ಅವರು ಇಂದು ಇಲ್ಲಿ ಬರಬೇಕಾಗಿತ್ತು ಆದರೆ ಮಳೆಯಿಂದ ಬರಲಾಗುವುದಿಲ್ಲ ಎಂದರು" ಎಂದು "ಅವರ ರೂಮ್ ನಿಮಗೆ ಕೊಡುತೇನೆ" ಎಂದ. ನಾನು "ತುಂಬಾ ಧನ್ಯವಾದಗಳು" ಎಂದೆ.

ಪಲ್ಲವಿ ಯಾರಿಗೋ ಫೋನ್ ಮಾಡಿ ವಿಷಯ ತಿಳಿಸಿದಳು.

" ನೀವು ರೂಮ್ಗೆ ಹೋಗಿ ನಾನು ಇಲ್ಲೇ ಎಲ್ಲಾದರೂ ಮಲಗುತ್ತೇನೆ" ಎಂದೆ

ಪಲ್ಲವಿ ಸುತ್ತಲೂ ನೋಡುತ್ತಾ " ಇಲ್ಲಿ ನೋಡಿದ್ರು ಎಷ್ಟು ಜನ ಇದಾರೆ, ನೀವು ಇಲ್ಲಿ ಮಲಗಲು ಸಾಧ್ಯವೇ ಇಲ್ಲ, ಪರವಾಗಿಲ್ಲ ಬನ್ನಿ" ಎಂದಳು

ರೂಮ್ ಚನ್ನಾಗಿತ್ತು. ಹೋಟೆಲ್ನಲ್ಲಿ ಯುಪಿಎಸ್ ಇದ್ದುದ್ದರಿಂದ ಲೈಟ್ಸ್ ಎಲ್ಲ ಬೆಳಗುತ್ತಿದ್ದವು.

****************************************************************************************

ಹಾಸಿಗೆಯ ಮೇಲೆ ಕುಳಿತು ಪುಸ್ತಕ ಓದುತ್ತಿದ್ದ ಪಲ್ಲವಿಯನ್ನು ನಾನು ನೋಡುತ್ತಿರುವುದು ಅವಳ ಗಮನಕ್ಕೆ ಬಂತೇನು ಎಂಬಂತೆ ತಲೆ ಎತ್ತಿ ನಸು ನಕ್ಕಳು. ನಾನು ತಲೆ ತಗ್ಗಿಸಿದೆ.

ಮೌನ ತುಸು ಹೆಚ್ಚಾಯಿತು ಅನಿಸಿತು. ಮಳೆ, ಮಿಂಚು, ಗುಡುಗು ಕೂಡ ಮೌನದ ಭಾಗವಾದಂತಾಯಿತು, ಎಷ್ಟೋಸಲ ಒಂದೇ ಶಬ್ದ ನಿರಂತರವಾಗಿ ಕೇಳಿಸುತಿದ್ದರೆ ಅದು ನಮ್ಮ ಒಂದು ಭಾಗವಾಗಿ ಅದು ಶಬ್ದ ಅನಿಸುವುದೇ ಇಲ್ಲ. ಅಷ್ಟು ಮಾತನಾಡುತ್ತಿದ್ದವಳು ಇಷ್ಟು ಮೌನವಾಗಿರುವುದು ಕಂಡು ಆಶ್ಚರ್ಯವಾದರೂ ಅವಳು ಓದುತ್ತಿರುವ ಪುಸ್ತಕ ತುಂಬಾ ಆಸಕ್ತಿದಾಯಕವಾಗಿರಬೇಕು ಅನಿಸಿತು.

ಮೌನ ಮುರಿಯಲು ಎಂಬಂತೆ " ನಿಮ್ಮ ಮನೆಯಲ್ಲಿ ವಿಷಯ ತಿಳಿಸಿದ್ರಾ" ಎಂದೆ

"ಹೌದು ಆಗಲೇ ಫೋನ್ ಮಾಡಿ ಹೇಳಿದೆ ಬೆಳಿಗ್ಗೆ ಬರುತ್ತೇನೆ ಎಂದು" ಎಂದಳು

ಹೆಂಡತಿ ತವರಿಗೆ ಹೋಗಿರುವ ವಿಷಯ ತಿಳಿಸಿದೆ.

"ನೀವು ನಿಮ್ಮ ಹೆಂಡತಿಯನ್ನು ಎಷ್ಟು ಪ್ರೀತಿಸುತ್ತೀರಾ?" ಎಂದಳು. ಇದೊಂದು ಗಂಭೀರ ಪ್ರಶ್ನೆಯೇ, ಇಲ್ಲ ಪ್ರಶ್ನೆಯಲ್ಲಿ ಕೀಟಲೆಯಿದೆಯೇ ಎಂದುಕೊಂಡು ಅವಳ ಮುಖ ನೋಡಿದೆ, ಗಂಭೀರವಾಗಿದ್ದಳು.

ಎಷ್ಟು ಎಂದರೆ, ಹೇಗೆ ಹೇಳುವುದು, ಕಾವ್ಯಾತ್ಮಕವಾಗಿ ಹೇಳಿದರೂ ಅದು ಇನ್ನೊಬ್ಬ ಕವಿಯ ಹತ್ತಿರ ಕ್ಲೀಷೆ ಅನಿಸಬಹುದು, ಏನೂ ಹೇಳದೆ ಸುಮ್ಮನೆ ಮುಗುಳ್ನಕ್ಕೆ.

"ಹೇಳಿ ಪರವಾಗಿಲ್ಲ"

" ನೋಡಿ ಗಂಡ ಹೆಂಡತಿಯ ನಡುವೆ "ಪ್ರೀತಿ, ಗೌರವ, ಅಭಿಮಾನ, ಹೆಮ್ಮೆ ಮತ್ತು ನಂಬಿಕೆ " ಇರಬೇಕು, ಅದು ನಮ್ಮ ನಡುವೆ ಇದೆ ಅನಿಸುತ್ತದೆ"

"ಹೌ ಸ್ವೀಟ್" ಎಂದ ಅವಳು "ಪ್ರೀತಿ, ಗೌರವ, ಅಭಿಮಾನ, ಹೆಮ್ಮೆ ಮತ್ತು ನಂಬಿಕೆ" ಎಂದು ಪುನರುಚ್ಚರಿಸಿ ಮುಂದುವರೆಯುತ್ತಾ,

"ಪ್ರೀತಿ ಹೇಗೆ ವ್ಯಕ್ತಪಡಿಸುವುದು, ಯಾವುದನ್ನು ಪ್ರೀತಿ ಎನ್ನುವುದು, ಕಾಮವನ್ನು ಪ್ರೀತಿ ಅಂಗಳದಿಂದ ಹೊರಗಡೆ ಇಟ್ಟರೆ, ಈ ಪ್ರೀತಿ ಯಾವುದಿರಬಹುದು, ಒಬ್ಬರಿಗೊಬ್ಬರ ನೋವಿಗೆ ಮಿಡಿಯುವುದು ಪ್ರೀತಿ ಎನ್ನಬಹುದೇ?, ಬಹುಶ ಹೆಣ್ಣೇ ಹೆಚ್ಚು ಪ್ರೀತಿ ವ್ಯಕ್ತಪಡಿಸುವುದಲ್ಲವೇ, ಏಕೆಂದರೆ ಅವಳ ಪ್ರಪಂಚ, ಮನೆ, ಗಂಡ, ಮಕ್ಕಳೇ ಅಲ್ಲವೇ? ಹೆಣ್ಣು ಪ್ರಪಂಚ ಗೆದ್ದರೂ ಕೊನೆಗೆ ಯೋಚಿಸುವುದು ತನ್ನ ಕುಟುಂಬದ ಬಗ್ಗೆ ಮಾತ್ರ, ಇನ್ನು ಪರಸ್ಪರ ಗೌರವ ಸಿಗಬೇಕಾದರೆ, ಇಬ್ಬರೂ ಗೌರವ ತರುವಂತೆ ನಡೆದುಕೊಳ್ಳಬೇಕು, ನೀನು ಎಲ್ಲಾ ಹೆಂಗಸರಂತೆ ಅಥವಾ ನೀನು ಎಲ್ಲಾ ಗಂಡಸರಂತೆ ಎಂದು ಪರಸ್ಪರ ಹೇಳಿಕೊಳ್ಳುವ ಪ್ರಸಂಗ ಬರಬಾರದು, ಅಭಿಮಾನ ಮತ್ತು ಹೆಮ್ಮೆಎನ್ನುವುದು ನಾವು ಹೇಗೆ ಮನೆಯನ್ನು ನಿಭಾಯಿಸುತ್ತೇವೆ, ಹೇಗೆ ನಮ್ಮ ಕಾರ್ಯಗಳಲ್ಲಿ ಸಕ್ಸಸ್ ಆಗುತ್ತೇವೆ ಎನ್ನುವುದರಿಂದ ಆಗುತ್ತದೆ. ಇನ್ನು ನಂಬಿಕೆ ಇಲ್ಲದಿದ್ದರೆ ಜೊತೆಗೆ ಇರುವುದಾದರೂ ಹೇಗೆ?.

ಹಾಗೆ ಮಾತನಾಡುತ್ತ ಇದ್ದಕ್ಕಿಂದಂತೆ ಬೇರೆ ವಿಷಯಕ್ಕೆ ತೆರಳಿದಳು.

"ಗಂಡು ಹೆಣ್ಣಿನ ಸೌಂದರ್ಯಕ್ಕೆ ಅಷ್ಟೊಂದು ಸೋಲುವುದೇಕೆ? ಪರಸ್ತ್ರೀಯನ್ನು ನೋಡುವಾಗಿನ ಗಂಡಿನ ಆಸೆಗಳು ಏನಿರಬಹುದು. ಹೆಣ್ಣಿಗೂ ಆಸೆಗಳು ಬರುತ್ತವೆ ಆದರೆ ಅವನ್ನು ಕ್ರಿಯೆಯ ಇಳಿಸುವ ಮಟ್ಟಕ್ಕೆ ಅವಳು ಹೋಗುವುದಿಲ್ಲ. ತನ್ನ ಮಗಳು ಎಷ್ಟೇ ಸುಂದರಿಯಾದರೂ ಅಪ್ಪನಿಗೆ ಮಮತೆಯಲ್ಲದೆ ಬೇರೆಯದೇ ಭಾವನೆ ಉಂಟಾಗುವುದಿಲ್ಲ, ಅದೇ ಅಪ್ಪ ಬೇರೆ ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿ ಬೇರೆಯಾಗುತ್ತದೆ. ಎಲ್ಲಾ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡುವ ಹಾಗೆ ನೋಡಿದರೆ, ಅಷ್ಟೇ ಅಲ್ಲ ಎಲ್ಲಾ ಹೆಣ್ಣು ಮಕ್ಕಳನ್ನು ತಮ್ಮ ಮಕ್ಕಳಂತೆ ಕಾಪಾಡಿದರೆ ಸಮಾಜ ಎಷ್ಟೊಂದು ಸೊಗಸಾಗಿರುತ್ತದೆ. ಹೆಣ್ಣಿಗೂ ಏನೇನೋ ಬಯಕೆಗಳು ಇರುತ್ತವೆ. ಇಲ್ಲಿ ನಾನು ಪರಸ್ಪರ ಒಪ್ಪಿತ ಒಲವಿನ ಬಗ್ಗೆ ಮಾತನಾಡುತ್ತಿಲ್ಲ, ವಿಕಾರದ ಬಗ್ಗೆ ಮಾತ್ರ ಎಂದು ತನ್ನೊಳಗೆ ತಾನೇ ಮಾತನಾಡುತ್ತಿದ್ದವಳು "ಸಾರಿ" ಎಂದು ನಿಲ್ಲಿಸಿದಳು.

"ಪರವಾಗಿಲ್ಲ ಮಾತನಾಡಿ" ನಾನೆಂದೆ

"ಒಂದು ಹೆಣ್ಣು ಒಂದು ಗಂಡಿಗೆ ಆಕರ್ಷಿತಳಾಗುವುದಕ್ಕೂ, ಒಂದು ಗಂಡು ಒಂದು ಹೆಣ್ಣಿಗೆ ಆಕರ್ಷಿತನಾಗುವುದಕ್ಕೂ ಎಷ್ಟೊಂದು ವ್ಯತ್ಯಾಸವಿದೆ. ಹೆಣ್ಣು ಸೋಲುವುದು ಗಂಡಿನ ಸೌಂದರ್ಯಕ್ಕೆ ಅಲ್ಲ, ಅವನ ವ್ಯಕ್ತಿತ್ವಕ್ಕೆ, ಒಳ್ಳೆಯ ಗುಣಕ್ಕೆ, ಮಾತುಗಾರಿಕೆಗೆ, ಆದರೆ ಗಂಡಿಗೆ ಹೆಣ್ಣಿನ ಸೌಂದರ್ಯವೇ ಮುಖ್ಯ. ಮೊದಲು ಸೋಲುವುದು ಬಾಹ್ಯ ಸೌಂದರ್ಯಕ್ಕೆ, ಹೆಣ್ಣನ್ನು ನೋಡಲು ಬರುವ ಗಂಡಿಗೆ ಕಾಣಿಸಬೇಕಾಗಿರುವುದು ಹೆಣ್ಣಿನ ಸೌಂದರ್ಯ ಮಾತ್ರ, ಅದಕ್ಕೆ ಅಷ್ಟು ಅಲಂಕಾರ ಮಾಡಿ ಹೆಣ್ಣನ್ನು ತೋರಿಸುವುದು. ಗಂಡಿನ ಬಗ್ಗೆ ಒಂದೇ ಮಾತು,ಹುಡುಗ ಒಳ್ಳೆಯವನು ಅಂತ. ಹುಡುಗನ ಒಳ್ಳೆಯತನ ಗೊತ್ತಾಗುವುದು ಅವನಿಗೆ ತುಂಬಾ ಹತ್ತಿರವಾದಾಗ ಮಾತ್ರ. ಅದಕ್ಕೆ ಅವನ ಪ್ರೇಯಸಿಯೋ, ಹೆಂಡತಿಯೋ ಆಗಿರಬೇಕು. ಯಾರು ಏನೇ ಹೇಳಿದರೂ ಇಬ್ಬರು ತುಂಬಾ ಹತ್ತಿರವಾಗುವವರೆಗೂ ಪರಸ್ಪರರ ಸ್ವಭಾವ ತಿಳಿಯುವುದಿಲ್ಲ.

ಇವಳು ನನ್ನ ಬಗ್ಗೆ ಮಾತನಾಡುತ್ತಿಲ್ಲ ತಾನೇ. ನಾನು ಅವಳ ಸೌಂದರ್ಯ ಆಸ್ವಾದಿಸುತ್ತಿದ್ದುದ್ದು ಅವಳ ಗಮನಕ್ಕೆ ಬಂದಿರಬಹುದೇ, ಬಂದು ಹೀಗೆ ಮಾತನಾಡುತ್ತಿದ್ದಾಳೆಯೇ, ಮನಸಿಗೆ ಕಸಿವಿಸಿಯಾಯಿತು.

"ಹಾಗಾದರೆ ಪ್ರೀತಿ ಎಂದರೇನು" ನಾನು ಕೇಳಿದೆ.

" ಇನ್ನೊಬ್ಬರನ್ನು ಹೇಗಿದ್ದಾರೋ ಹಾಗೆ, ಅವರ ಒಪ್ಪು ತಪ್ಪುಗಳನ್ನೂ ಸೇರಿಸಿ ಇಷ್ಟಪಡುವುದೇ ಪ್ರೀತಿ. ನೀನು ಹೀಗಿದ್ದರೆ ಮಾತ್ರ ನಾ ನಿನ್ನ ಪ್ರೀತಿಸುವೆ ಎನ್ನುವುದು ಪ್ರೀತಿಯಲ್ಲ. ಎಲ್ಲರಿಗೂ ಅವರದೇ ಆದ ವ್ಯಕ್ತಿತ್ವ ಇರುತ್ತದೆ, ಅದನ್ನು ತನ್ನವರಿಗಾಗಿ ಸ್ವಲ್ಪ ಬದಲಾಯಿಸಿಕೊಂಡರೂ ಮೂಲ ಹಾಗೆ ಇರುತ್ತದೆ. ಅದು ಯಾವುದೋ ಒಂದು ಸಂಧರ್ಭದಲ್ಲಿ ಹೊರಬರುತ್ತದೆ. ಆಗ ನಮ್ಮ ಹತ್ತಿರದವರಿಗೆ ಭ್ರಮನಿರಸನವಾಗುತ್ತದೆ. ಅರೆ ಇವನು ಹಾಗೆ ಅಥವಾ ಇವಳು ಹೀಗೆ ಎಂದುಕೊಂಡಿದ್ದೆನಲ್ಲಾ ಎಂದು. ಎಂಬತ್ತು ಪ್ರತಿಶತ ಒಳ್ಳೆಯ ಗುಣಗಳಿಗಾಗಿ ಒಪ್ಪಿಕೊಂಡವರವನ್ನು ಅವರ ಇಪ್ಪತ್ತು ಪ್ರತಿಶತ ಅವಗುಣಗಳನ್ನೂ ಒಪ್ಪಿಕೊಳ್ಳಬೇಕು. ನಮ್ಮವರನ್ನೂ, ನಮ್ಮ ಸಂಗಾತಿಗಳನ್ನು ನಾವು ಆರ್ಡರ್ ಮಾಡಿ ಪಡೆಯುವುದಕ್ಕೆ ಆಗುವುದಿಲ್ಲ. ಅವರು ಹೇಗಿದ್ದರೂ ನಮ್ಮವರೇ, ಇದು ಇಡೀ ದೇಶಕ್ಕೆ ಅನ್ವಯಸುತ್ತದೆ. ನಮ್ಮ ಸಂಗಾತಿಯಲ್ಲಿ ಯಾವುದೋ ನಮಗೆ ಒಪ್ಪಿಗೆಯಾಗದ ಗುಣ ಇರುತ್ತದೆ ಎಂದು ಒಪ್ಪಿಕೊಳ್ಳಬೇಕು, ಹಾಗೆ ಒಪ್ಪಿಕೊಂಡಾಗ ಅದು ಹೊರ ಬಂದಾಗ ಬೇಸರ, ಗಾಬರಿ ಆಗುವುದಿಲ್ಲ".

ಮಾತನಾಡುತ್ತಲೇ ಪಲ್ಲವಿ ಏನೋ ಎತ್ತಿಕೊಳ್ಳಲು ಬಗ್ಗಿದಳು. ಅವಳ ಸೆರಗು ಜಾರಿತು. ಅವಳ ಸುಂದರ ತುಸು ದೊಡ್ಡದೇ ಎನಿಸುವ ಎದೆ ಮೋಡ ಸರಿದ ಚಂದ್ರನಂತೆ ಮೋಹಕ ಎನಿಸಿದವು ನಾನು ನನ್ನ ನೋಟವನ್ನು ಪಕ್ಕಕ್ಕೆ ಸರಿಸಿದೆ. ಅವಳು ಸೆರಗು ಸರಿಮಾಡಿಕೊಂಡು ತುಸು ನಕ್ಕಳು. ಅವಳ ನಗುವಿನಲ್ಲಿ ವ್ಯಂಗವೇನಾದರೂ ಇದೆಯೇ ಎಂದು ಹುಡುಕಿದೆ,ಹಾಗೇನೂ ಅನ್ನಿಸಲಿಲ್ಲ, ಅದು ಸಹಜವಾಗಿತ್ತು.

" ಈಗ ನನ್ನ ನೋಡಿ ನಿಮಗೆ ಎನ್ನನಿಸಿತು" ಎಂದಳು.

ನಾನು ಅಂತಹ ಪ್ರಶೆಯನ್ನು ನೀರೀಕ್ಷೆ ಮಾಡಿರಿರಲಿಲ್ಲ. ಇಂತಹ ಸಂಧರ್ಭಗಳು ಗಂಡಿಗೆ ಎಷ್ಟೋ ಸಲ ಬಂದಿರಬಹದು, ಹೆಣ್ಣಿನೊಡನೆ ಮಾತನಾಡುತ್ತಾ ತನಗೇ ಅರಿವಿಲ್ಲದೆ ಗಂಡೊಬ್ಬ ಹೆಣ್ಣಿನ ಎದೆಯ ಕಡೆ ದೃಷ್ಟಿ ನೆಟ್ಟಿರಬಹದು, ಅದು ದೃಷ್ಟಿ ಮಾತ್ರ, ಮನಸು ಎಲ್ಲೋ ಇರಬಹದು. ಕೆಲವರು ಬೇಕೆಂತಲೇ ನೋಡಲೂಬಹದು.

" ಕೆಟ್ಟ ಆಲೋಚನೆಗಳೇನೂ ಬರಲಿಲ್ಲ, ಆದರೆ ನೀವು ತುಂಬಾ ಸುಂದರಿ ಅನಿಸಿತು. ನನ್ನದು ಸೌಂದರ್ಯ ಉಪಾಸನೆ ಮಾತ್ರ, ಒಂದು ಹೂವನ್ನೋ, ಹಕ್ಕಿಯನ್ನೋ, ಹಸಿರನ್ನೋ ನೋಡಿದಂತೆ"

"ಅದ್ಭುತ" ಎಂದಳು, ಮುಂದುವರೆಸುತ್ತಾ "ನಿಜ ಹೇಳಿ ನಿಮಗೆ ಮದುವೆ ಆಗಿರದಿದ್ದರೆ, ನಾನೇ ನಿಮ್ಮ ಹತ್ತಿರ ಸರಿದಿದ್ದರೆ ನೀವು ನನ್ನನ್ನು ನಿರಾಕರಿಸುತ್ತಿದ್ದಿರಾ?" ಎಂದಳು.

ನನ್ನ ಎದೆ ಧಸಕ್ಕೆಂದಿತು. ಇದೆಂತಹ ಪ್ರಶ್ನೆ. ನನ್ನ ಪ್ರಾಮಾಣಿಕತೆಯನ್ನು ಪಣಕ್ಕೆ ಒಡ್ಡುವ ಪ್ರಶ್ನೆ. ನನಗೆ ಮದುವೆ ಆಗಿಲ್ಲದಿದ್ದರೆ ಇಂತಹ ಸಂದರ್ಭದಲ್ಲಿ ಹೇಗೆ ವರ್ತಿಸುತ್ತಿದ್ದೆ. ಮದುವೆಯಾಗಿದೆ, ನನ್ನವಳೆಂದರೆ ನನಗೆ ತುಂಬಾ ಇಷ್ಟ. ಅವಳ ನೆನಪೇ ಮಧುರ. ಅವಳು ಮನೆಯಲ್ಲಿ ಇದ್ದರೆ ಒಂದು ನೆಮ್ಮದಿ. ಅವಳ ಇರುವಿಕೆಯೇ ಮನಸಿಗೆ ಒಂದು ಮುದ. ಎಷ್ಟೋಸಲ ನಾನು ಎಲ್ಲೋ ಒಂದು ರೂಮಿನಲ್ಲಿ ಕುಳಿತು ಏನಾದರೂ ಓದುತ್ತಿರುತ್ತೇನೆ, ಅವಳು ಇನ್ಯಾವುದೋ ರೂಮಿನಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಅವಳು ಮನೆಯಲ್ಲಿ ಇದ್ದಾಳೆ ಅನ್ನುವುದೇ ಒಂದು ಖುಷಿ. ಅವಳಿಗೆ ನನ್ನ ಇಷ್ಟ ಅಯಿಷ್ಟಗಳು ಗೊತ್ತು, ನನಗೂ ಕೂಡ. ನಾವು ಜಗಳ ಆಡುವುದು ತುಂಬಾ ಕಡಿಮೆ, ನಾನು ಕೋಪಿಸಿಕೊಳ್ಳುವುದಿಲ್ಲ, ಅವಳು ಆಗಾಗ ಕೋಪಿಸಿಕೊಳ್ಳುತ್ತಾಳೆ.

" ನಾನು ಮದುವೆಯಾಗಿಲ್ಲದಿದ್ದರೆ ಎನ್ನುವುದು ಈಗ ಒಂದು ಹೈಪಾಥೆಟಿಕಲ್ ಪ್ರಶ್ನೆ. ಮದುವೆ ಆಗಿಲ್ಲದಿದ್ದರೆ ನಾನು ನಿಮ್ಮನ್ನು ಇಷ್ಟ ಪಡುವ ಅವಕಾಶವಿರುತ್ತಿತ್ತು, ಇಲ್ಲ ಇಷ್ಟಪಡದ ಅವಕಾಶವೂ ಇತ್ತು. ನನ್ನ ಮನ, ದೇಹ ಈ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳುತ್ತಿತ್ತು ಎಂದು ಹೇಳಲು ಈಗ ಅಸಾದ್ಯ. ದೇಹ ತಯಾರಿದ್ದರೂ ಮನಸು ಅದನ್ನು ನಿಲ್ಲಿಸಲು ಪ್ರಯತ್ನ ಪಡುತ್ತಿತ್ತೇನೋ, ಆದರೆ ಮನಸೇ ಸಿದ್ಧಗೊಂಡರೆ ದೇಹಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ."

ಅವಳು ಮುಗುಳ್ನಕ್ಕಳು. "ನೀವು ನಿಮ್ಮ ಹೆಂಡತಿಯನ್ನು ತುಂಬಾ ಪ್ರೀತಿಸುತ್ತೀರಿ ಅಲ್ಲವೇ, ಒಂದು ಪರೀಕ್ಷೆ ಮಾಡುವ. ನಾವಿಬ್ಬರು ಇರುವ ಈ ಒಂದೇ ಹಾಸಿಗೆಯಲ್ಲಿ ಮಲಗೋಣ, ಒಂದೇ ರಗ್ಗನ್ನು ಹೊದ್ದಿಕೊಂಡು. ಸಾದ್ಯವಾದರೆ ಬೆತ್ತಲೆಗೊಂಡು, ಆಗ ನೋಡುವ ನಮ್ಮ ನಿಗ್ರಹ ಶಕ್ತಿ ಎಷ್ಟಿದೆ ಎಂದು, ಏನಂತೀರಿ?

ಅವಕ್ಕಾಗಿ ಅವಳ ಕಡೆ ನೋಡಿದೆ,ಇದೆಂತಹ ವಾದ, ಇದೆಂತಹ ಪರೀಕ್ಷೆ. ಇದೆಲ್ಲ ಬೇಡ ಎನಿಸಿತು.

"ನೋಡಿ ನೀವು ಏನಾದರೂ ನನಗೆ ಪರಸ್ತ್ರೀ ಅಲ್ಲವೇ, ನಿಮ್ಮನ್ನು ಬೆತ್ತಲೆ ನೋಡುವುದೇ, ಇಂತಹ ಪರೀಕ್ಷೆಗೆ ನಾನು ಎಂದೂ ಒಳಗೊಂಡಿಲ್ಲ, ರಾತ್ರಿ ನಿದ್ದೆಯ ಮಂಪರಿನಲ್ಲಿ ನಾನು ಕಾಲೋ ಕೈಯೋ ನಿಮ್ಮ ಮೇಲೆ ಹಾಕಿದರೆ ಅದನ್ನು ನನ್ನ ಇಷ್ಟ ಎಂದು ಪರಿಗಣಿಸುವ ಸಾಧ್ಯತೆ ಇದೆ"

" ಹಾಗಲ್ಲ, ನೀವು ತನ್ನನು ತಾಕಿದಾಗ ನಿಮಗೆ ಎಚ್ಚರ ಆಗೇ ಆಗುತ್ತದೆ, ಆಗ ನೀವು ಮುಂದುವರೆಯುತ್ತಿರೋ ಇಲ್ಲ ಪಕ್ಕಕೆ ತಿರುಗಿ ಮಲಗುತ್ತಿರೋ ನೋಡೋಣ, ಇದು ನಿಮಗೆ ಮಾತ್ರ ಪರೀಕ್ಷೆ ಅಲ್ಲ ನನಗೂ ಕೂಡ, ನೆನಪಿಡಿ ನನಗೂ ಮದುವೆಯಾಗಿದೆ, ಇದು ಸುಮ್ಮನೆ ತಮಾಷೆಗೆ ಎಂದು ಕೊಳ್ಳಿ, ಹಾಗೇನಾದರೂ ನಮ್ಮ ನಿಗ್ರಹ, ನಮ್ಮ ಸಂಗಾತಿ ಮೇಲಿನ ಪ್ರೀತಿ ಕೈಕೊಟ್ಟರೆ, ಅಂತದೊಂದು ಪ್ರೀತಿ ಇಲ್ಲ ಎಂದು ಸಾಬೀತಾಗುತ್ತದೆ" ಎಂದು ಜೋರಾಗಿ ನಕ್ಕಳು.

"ಇದು ಅತಿರೇಕ ಅನ್ನಿಸುವುದಿಲ್ಲವೇ, ಯಾವುದನ್ನೋ ಪರೀಕ್ಷಿಸಲು ಹೋಗಿ ಇನ್ನೇನೋ ಮಾಡಿದಂತೆ, ನೀವು ತುಂಬಾ ಬುದ್ದಿವಂತರು ಹಾಗು ಸೂಕ್ಷಮನಸ್ಸಿನವರು ಎಂದು ಕವನಗಳನ್ನು ಓದಿದರೆ ಅನಿಸುತ್ತದೆ. ಆದರೆ ನೀವು ಇದಕ್ಕೆ ತಯಾರಿದ್ದೀರಿ ಎಂದರೆ"

ಪಲ್ಲವಿ ಇನ್ನೂ ಜೋರಾಗಿ ನಕ್ಕುಬಿಟ್ಟಳು. "ನೋಡಿದಿರಾ ನನ್ನ ಮೇಲಿನ ಅಭಿಪ್ರಾಯ ಎಷ್ಟು ಬೇಗ ಬದಲಾಯಿಸಿ ಕೊಂಡಿರಿ" ಎಂದಳು.

"ಹಾಗಲ್ಲ ನಾವೇನಾದರೂ ತಪ್ಪು ಮಾಡಿದರೆ, ಅದರ ನೋವನ್ನು ಅನುಭವಿಸಬೇಕಲ್ಲವೇ, ನಮ್ಮ ಸಂಗಾತಿಗಳು ಹಾಗೆ ಮಾಡಿದರೆ ನಾವು ಒಪ್ಪಿಕೊಳ್ಳಲು ಸಿದ್ಧರಿರಬೇಕಲ್ಲವೇ. ಇಲ್ಲಿ ನಡೆಯುವ ಪ್ರತಿಯೊಂದನ್ನೂ ನಾನು ಮನೆಯಲ್ಲಿ ಹೇಳೇ ಹೇಳುತ್ತೇನೆ, ನನ್ನವಳು ಕೇಳೇ

ಕೇಳುತ್ತಾಳೆ, ನಾನು ಇಂತಹ ಪರೀಕ್ಷೆಗೆ ಹೊರಟರೆ ನಿಮಗೆ ಸಮ್ಮತವೇ ಎಂದು "

" ನಮ್ಮ ಸಂಗಾತಿ ಮೇಲಿನ ಪ್ರೀತಿ ನಮ್ಮನ್ನು ಕಾಪಾಡಿಕೊಳ್ಳುತ್ತೆ ಅಲ್ಲವೇ, ನಾವು ಅಷ್ಟು ನಿಷ್ಠರಾಗಿದ್ದರೆ ನಾವು ಈಗಿರುವ ಹಾಗೆಯೇ ನಾಳೆ ಬೆಳಿಗ್ಗೆ ಏಳುತ್ತೆವೆ"

ನಾನು ಸುಮ್ಮನೆ ಅವಳ ಮುಖ ನೋಡಿದೆ, ನಿರಾಳವಾಗಿದ್ದಳು. ಅವಳಿಗೆ ಅವಳ ಮೇಲೆ ಹೆಚ್ಚು ನಂಬಿಕೆ ಇದೆ ಅನ್ನಿಸಿತು.

ಇಂತಹ ಸಂಭಾಷಣೆಯಿಂದ ಇವಳನ್ನು ಹೊರತರುವುದೇ ಸೂಕ್ತ ಅನಿಸಿತು. ಹಾಗಾಗಿ ಅವಳನ್ನು ಕೇಳಿದೆ.

" ನಿಮ್ಮ ಅರ್ಥದಲ್ಲಿ ಸಂತೋಷ ಎಂದರೆ ಏನು?"

ಅವಳು ಸ್ವಲ್ಪ ಹೊತ್ತು ನನ್ನ ನೋಡಿ" ಮನಸು ಉಲ್ಲಸಿತವಾಗಿರುವುದೇ ಸಂತೋಷ. ಅದು ಯಾವ ರೂಪದಲ್ಲಿ ಬಂದರೂ ಸರಿ, ಆದರೆ ಆ ಸಂತೋಷ ಪಶ್ಚಾತ್ತಾಪಕ್ಕೆ ದಾರಿಯಾಗಬಾರದು. ಹಿಂಸೆ ಎನ್ನುವುದು ಅಸಂತೋಷಕರ ಕ್ರಿಯೆ ಆದ್ದರಿಂದ ಅಹಿಂಸೆಯೆ ಸಂತೋಷ.. ಹಿಂಸೆಯೆಂದರೆ ದೈಹಿಕ ನೋವೊಂದೇ ಅಲ್ಲ ಮಾತಿನಲಿ ಮಾನಸಿಕವಾಗಿ ಹಿಂಸಿಸುವುದೂ , ಮನಸಿನಲಿ ಸಂಚು ಹೂಡುವುದೂ ಸಹಾ. ಆತ್ಮಹತ್ಯೆ ಮಾಡಿಕೊಳ್ಳುವುದೂ ಸಹಾ ಬದುಕಲು ಹಾತೊರೆಯುವ ಒಂದು ದೇಹಕ್ಕೆ ಮಾಡುವ ಹಿಂಸೆ. ದೇಹ ನಮ್ಮದಾದರೂ ಅದೂ ಕೂಡ ಬದುಕಲು ಪ್ರಯತ್ನ ಪಡುತ್ತಿರುತ್ತದೆ. ಅಂತಹ ದೇಹವನ್ನು ಕಷ್ಟಪಟ್ಟು, ಹಿಂಸೆಕೊಟ್ಟು ಮುಗಿಸುವುದು ಕೊಲೆಯೇ ಹೌದು. ಒಂದು ಕಾಲದಲ್ಲಿ ಊಟ, ಇರಲು ಜಾಗ ಸಿಕ್ಕರೆ ಅದೇ ಸಂತೋಷ,ಈಗ ಅಂತಹ ಮೂಲಭೂತ ಅಗತ್ಯತೆಗಳಿಗೆ ಕಷ್ಟಪಡುವುದು ಬೇಕಾಗಿಲ್ಲ. ಮನುಷ್ಯನ ಹೊಟ್ಟೆ ತುಂಬಿರುವುದರಿಂದ ಬೇರೆ ಬೇರೆ ಆಸೆ ಅಗತ್ಯಗಳ ಯೋಚನೆ ಎಲ್ಲರನ್ನು ಅಸಂತೋಷಿಗಳನ್ನಾಗಿ ಮಾಡಿದೆ .

ಅವಳು ಸ್ವಗತ ಎಂಬಂತೆ ಮಾತನಾಡಿಕೊಳ್ಳುತ್ತಲೇ ಇದ್ದಳು.

" ಸಂತೋಷವೆಂಬುದು ಏನು? ಅದು ಎಲ್ಲಿರುತ್ತದೆ? ಬಾಹ್ಯದ ಆತಂಕಗಳಿಗೆ ಆಂತರಿಕವಾಗಿ ಗಲಿಬಿಲಿ ಗೊಳ್ಳುವುದ ಸಂಬಾಳಿಸುವುದು ಹೇಗೆ. ಮನಸಿನೊಳಗೆ ಬರೀ ಸಂತೋಷವನ್ನೇ ತುಂಬಿಕೊಳ್ಳುವುದು ಹೇಗೆ. ನಮ್ಮದೇ ಒಂದು ಪ್ರಪಂಚ ಸೃಷ್ಟಿಸಿಕೊಳ್ಳುವುದು ಹೇಗೆ. ನಮ್ಮ ಏಕಾಂತಕ್ಕೆ ನಮ್ಮನ್ನೇ ಜೊತೆಮಾಡಿಕೊಳ್ಳುವುದು ಹೇಗೆ. ಪ್ರಶ್ನೆಗಳು, ಉತ್ತರವಿಲ್ಲದ ಅಥವಾ ಅನುಸರಿಸಲಾಗದ ಉತ್ತರವಿರುವ ಪ್ರಶ್ನೆಗಳು. ಎಲ್ಲರೂ ತಮಗೆ ಸರಿ ಎಣಿಸಿದ ಉತ್ತರಗಳ ಕಾಣಿಸಿದ್ದಾರೆ, ಆದರೆ ಅವು ಎಷ್ಟು ಪ್ರಾಯೋಗಿಕ. ಎಷ್ಟು ಅನುಕರಣೀಯ, ಎಷ್ಟು ಸಂತೋಷಕರ ಎಂದು ತಿಳಿಯಾಗುತ್ತಿಲ್ಲ. ಊಟ, ನಿದ್ರೆ, ಮೈಥುನ, ಸಾವು ಇರುವ ಈ ಬಾಳಿನಲ್ಲಿ ಯಾವುದು ಮುಖ್ಯ. ಸಾವು ನಮ್ಮ ಕೈಯಲ್ಲಿ ಇರುವುದಿಲ್ಲವಾದ್ದರಿಂದ ಅದರ ಚಿಂತನೆಗೆ ಅರ್ಥವಿಲ್ಲ, ನಮ್ಮ ಇರುವಿಕೆಯ ಮಿತಿಯ ಎಚ್ಚರಿಕೆಗೆ ಸಾವಿನ ಅರಿವಿರಬೇಕಾಗುತ್ತದೆ, ಇರುವ ಸಮಯ ತುಂಬಾ ಕಡಿಮೆ ಇರುವುದರಿಂದ ಅಂತಹ ಸಮಯವನ್ನು ನಾವು ಮಾಡಲೇಬೇಕಾದ ಕೆಲಸಕ್ಕೆ ಮಾತ್ರ ಉಪಯೋಗಿಸಬೇಕು ಎನ್ನುವ ಅರಿವು ಸಾವಿನ ಅರಿವಿನಿಂದ ಮಾತ್ರ ಬರುತ್ತದೆ. ಎಲ್ಲರಿಗೂ ಇದರ ಅರಿವು ಮೂಡಿಸಬೇಕು, ಸಮಯ ಕಡಿಮೆ ಇರುವುದರಿಂದ ಅನಾವಶ್ಯಕ ವಿಷಯಗಳಿಗೆ, ರಾಜಕಾರಣಿಗಳ ಸುತ್ತ ಸುತ್ತುವುದಕೆ, ಅವರಿಗೆ ಜೈ ಕಾರ ಆಗುವುದಕ್ಕೆ, ಧರ್ಮಕಲಹಗಳಲ್ಲಿ ಭಾಗವಹಿಸುವುದಕ್ಕೆ, ಬಂದ್ ಮಾಡುವುದಕ್ಕೆ ಹೀಗೆ ಯಾವುದಕ್ಕೂ ಉಪಯೋಗಿಸದೆ ತಮಗೆ ಉಪಯೋಗುವಂತಹುದಕ್ಕೆ ಮಾತ್ರ ಉಪಯೋಗಿಸುವ ಹಾಗೆ ಅರಿವು ಮೂಡಿಸಬೇಕು.

ಅವಳು ಮಾತನಾಡುತ್ತಲೇ ಇದ್ದಳು. ಅವಳ ಹಾವಭಾವ, ಇಂಪಾದ ಧ್ವನಿ, ಸುಂದರ ಮುಖ ನೋಡುತ್ತಾ ಕುಳಿತೆ. ಗಂಡು ಮದುವೆಯಾಗಿದ್ದರೂ, ಇನ್ನೊಂದು ಹೆಣ್ಣಿನ ಸೌಂದರ್ಯಕ್ಕೆ ಸೋಲುವುದೇಕೆ? ಅದು ಗಂಡಿನ ಮಿತಿಯೇ ಇಲ್ಲ ಅವನ ನಿಯಂತ್ರಣದಲ್ಲಿ ಇಲ್ಲದಿರುವ ಭಾವವೇ. ಮದುವೆಯಾದ ಗಂಡಸರು ಹೆಣ್ಣಿನ ಸೌಂದರ್ಯಕ್ಕೆ ಸೋತರೆ ಅದು ಅವರ ಬಲಹೀನತೆಯೇ, ಸೌಂದರ್ಯ ಉಪಾಸನೆಯೇ, ಮನದಲ್ಲಿ ಏಳುವ ಸಿಹಿ ಭಾವನೆಯೇ, ಇದರಲ್ಲಿ ಅವನನ್ನು ತಪ್ಪಿತಸ್ಥ ಎನ್ನಬಹುದೇ. ಹೆಣ್ಣಿನ ಸೌಂದರ್ಯಕ್ಕೆ ಸೋಲದ ಗಂಡು ಇರುವುದು ಸಾಧ್ಯವೇ. ಸಾಧ್ಯ ಎನ್ನುವವರು ಆತ್ಮವಂಚನೆ ಮಾಡಿಕೊಳ್ಳುತಿದ್ದಾರೆಯೇ. ಹೆಣ್ಣಿನ ಸೌಂದರ್ಯವನ್ನು ಆಸ್ವಾದಿಸಿದರೂ ಅದು ಅಲ್ಲಿಗೆ ನಿಲ್ಲದೆ ಮುಂದುವರೆದರೆ ವಿಕಾರ ಆಗಬಹುದೇನೋ.

ಅವಳು ಮಾತನಾಡುತ್ತಿದ್ದಾಗ ನಾನು ಹಾಗೆ ನಿದ್ದೆಗೆ ಜಾರಿದ್ದೆ ಅನಿಸುತ್ತದೆ. ರಾತ್ರಿಯೆಲ್ಲಾ ಏನೇನೋ ಕನಸುಗಳು.

*****************************************************************************************

ಎಚ್ಚರವಾದಾಗ, ಬೆಳಕು ಹರಡಿತ್ತು. ಸೂರ್ಯಕಿರಣಗಳು ಹೋಟೆಲ್ ರೂಮಿನ ತುಂಬಾ ಹರಡಿದ್ದವು. ಕಣ್ಣುಜ್ಜಿಕೊಂಡು, ಮಲಗಿದ ಕಡೆಯಿಂದ ಎದ್ದು, ಹಾಸಿಗೆಯ ಕಡೆ ನೋಡಿದೆ. ಅದು ಖಾಲಿಯಾಗಿತ್ತು. ಹೊರಗಡೆ ಬಂದು ಎಲ್ಲ ಕಡೆ ಹುಡುಕಿದರೂ, ಎಲ್ಲೂ ಪಲ್ಲವಿ ಕಾಣಿಸಲಿಲ್ಲ.

ಎರಡು ದಿನಗಳ ನಂತರ ಪಲ್ಲವಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಂತು .

# ಕಥೆಗಳು



# ಅವಳೆಂದರೆ ಮುಂದುವರೆದ ಭಾಗ...

**ಎಂ.ವಿ. ಶಶಿಭೂಷಣ ರಾಜು** , ಪೆನ್ಸಿಲ್ವೇನಿಯ



ಅವನು ಓದಲಿ ಎಂದೇ ಡೈರಿಯನ್ನು ಮನೆಯಲ್ಲಿ ಬಿಟ್ಟುಹೋಗಿದ್ದಳು. ತನ್ನ ಪಾಪಪ್ರಜ್ಞೆಯಿಂದ ಹೊರಬರಬೇಕಾದರೆ, ಗಂಡನಿಗೆ ಎಲ್ಲಾ ಹೇಳಬೇಕು ಅದೊಂದೇ ಮಾರ್ಗ, ಆದರೆ ಅವನಿಗೆ ಪಕ್ಕ ಕುಳಿತು ಹೇಳುವ ಧೈರ್ಯ ಸಾಲದಾಗಿತ್ತು, ಆದ್ದರಿಂದಲೇ ಡೈರಿಯನ್ನು ಮನೆಯಲ್ಲೇ ಬಿಟ್ಟು ಹೋಗಿದ್ದಳು. ಮೋಹನನ ನಡವಳಿಕೆಯಲ್ಲಿ ಯಾವುದೇ ವ್ಯತ್ಯಾಸ ಕಾಣಲಿಲ್ಲ, ಅವನು ಎಂದಿನಂತೆ ಇದ್ದ. ಅವನು ಡೈರಿ ಓದಿಲ್ಲ ಎಂದುಕೊಂಡು ಅವನ ವ್ಯಕ್ತಿತ್ವದ ಬಗ್ಗೆ ಹೆಮ್ಮೆ ಆದರೂ, ಓದಿದ್ದರೆ ಚನ್ನಾಗಿತ್ತು ಎಂದುಕೊಂಡಳು.

ಇತ್ತ ಮೋಹನ, ಸಹಜವಾಗಿ ನಟಿಸುತ್ತಿದ್ದರೂ, ತಾನು ಡೈರಿ ಓದಿದ ವಿಷಯ ಅನನ್ಯಳಿಗೆ ಎಲ್ಲಿ ತಿಳಿದುಹೋಗುವುದೋ ಎಂಬ ಆತಂಕದಲ್ಲಿ ಇದ್ದ. ಹೆಣ್ಣು, ಗಂಡಿನ ನಡವಳಿಕೆಯಲ್ಲಿನ ಬದಲಾವಣೆ, ಮನಸಿನ ಏರಿಳಿತ, ರಹಸ್ಯಗಳನ್ನು ತುಂಬಾ ಬೇಗನೆ ಕಂಡುಹಿಡಿಯುತ್ತಾಳೆ ಎಂದು ಅವನಿಗೆ ತಿಳಿದ ವಿಷಯವೇ ಆಗಿತ್ತು. ಅದು ಅವಳಿಗೆ ಪ್ರಕೃತಿದತ್ತವಾದ ಒಂದು ವರ. ಆದ್ದರಿಂದಲೇ ಅವನಿಗೆ ಎಂದೂ ಸುರ್ಪ್ರೈಸ್ ಮಾಡಲು ಆಗಿರಲಿಲ್ಲ. ತಾನು ಅವಳ ಹುಟ್ಟಿದ ಹಬ್ಬಕ್ಕೋ, ಪ್ರೇಮಿಗಳ ದಿನಕ್ಕೋ ಒಂದು ಹೂವು ತಂದು ಸುರ್ಪ್ರೈಸ್ ಮಾಡೋಣ ಎಂದರೂ ಅದು ಅನನ್ಯಗಳಿಗೆ ಮೊದಲೇ ತಿಳಿದಿರುತ್ತದೆ. ಆದ್ದರಿಂದ ಅವಳಿಗೆ ಹೇಳೇ ಏನಾದರೂ ಉಡುಗೊರೆ ತರುತ್ತಾನೆ. ಆಭರಣಗಳಾದರೆ ಅವಳನ್ನು ಕರೆದುಕೊಂಡು ಹೋಗಿಯೇ ಕೊಡಿಸುತ್ತಾನೆ.

ಮೋಹನ, ಅನನ್ಯ ಇಬ್ಬರೂ ತೆರೆದುಕೊಳ್ಳದಿದ್ದರೂ, ಅವರವರ ಆಫೀಸಿನಲ್ಲಿ ಎಲ್ಲಾ ಮಾಮೂಲಿನಂತೆ ನಡೆಯುತಿತ್ತು. ಅನನ್ಯಳು ತಾನು ತುಂಬಾ ಅಲಂಕಾರಮಾಡಿಕೊಳ್ಳದೆ ಆಫೀಸಿಗೆ ಹೋಗಬೇಕು ಎಂದು ಬಯಸಿದರೆ, ಶ್ರೇಷ್ಠಳ ಧ್ವನಿ ನನ್ನ ಕಿವಿಗೆ ಬೀಳದಿರಲಿ ಅವಳು ತನ್ನ ಎದುರಾಗದಿರಲಿ ಎಂದು ಮೋಹನ ಭಾವಿಸುತ್ತಾನೆ.

ಸಮಸ್ಯೆ ಬೇಗ ತೀರದಿದ್ದರೆ ಅದಕ್ಕೆ ಹೊಂದಿಕೊಳ್ಳಬೇಕು ಇಲ್ಲಾ ಸಮಸ್ಯೆಯನ್ನು ದೂರ ತಳ್ಳುವ ಸಾಧ್ಯತೆಯನ್ನು ಹುಡುಕಬೇಕು. ಇಬ್ಬರಿಗೂ ಹೇಗೆ ಸಮಸ್ಯೆಯನ್ನು ದೂರಮಾಡುವುದು ಎಂದು ತಿಳಿಯಲಿಲ್ಲ. ಅನನ್ಯ ಮನಸ್ಸಿನಲ್ಲಿ ಮಥನ ಪಡುವುದು ಮೋಹನನಿಗೆ ತಿಳಿಯುತ್ತಿತ್ತು. ಆದರೂ ಏನೂ ಹೇಳದಾದ. ಇಬ್ಬರೂ ಸಹಜವಾಗಿ ಇರಲು ಸದಾ ಪಯತ್ನಿಸುತ್ತಿದ್ದರು. ಎಂದಿನಂತೆ ತಬ್ಬಿಕೊಂಡು ಕುಳಿತು ಟಿವಿ ನೋಡುತ್ತಿದ್ದರು, ಆಗಾಗ ಮುತ್ತಿನಮಳೆ ಸುರಿಸುತ್ತಿದ್ದರು. ಇಂತಹ ಖುಷಿಯ ಸಮಯದಲ್ಲಿ ಶ್ರೇಷ್ಠಳ ನೆನಪು ಆಗದಿದ್ದನ್ನು ಮೋಹನ ಗಮನಿಸಿದ್ದ. ಮನೆಯಲ್ಲಿ ಪ್ರಜ್ಞಾ ಪೂರ್ವಕವಾಗಿ ಶ್ರೇಷ್ಠಳನ್ನು ಮರೆಯಲು ಪ್ರಯತ್ನಿಸುತ್ತಿದ್ದ. ಆದರೂ ಅದು ಅಷ್ಟು ಸುಲಭವಾಗಿರಲಿಲ್ಲ. ಆಫೀಸಿನಲ್ಲಿ ಅವಳಿಂದ ತಪ್ಪಿಸಿಕೊಳ್ಳಲು ಅಷ್ಟು ಆಗುತ್ತಿರಲಿಲ್ಲ. ಎಷ್ಟೋ ಸಲ ಸಹಜವಾಗಿ ತುಂಬಾ ಹೊತ್ತು ಮಾತನಾಡುತಿದ್ದರು. ಅದು ಅವನಿಗೆ ಖುಷಿಕೊಡುತ್ತಿತ್ತು.

ಅಂದು ಶುಕ್ರವಾರ, ಮೀಟಿಂಗ್ ನಡೆಯುತ್ತಿತ್ತು. ಯಾವುದೋ ವಿಷಯದಮೇಲಿನ ಚರ್ಚೆ ವಾಗ್ವಾದಕ್ಕೆ ತಿರುಗಿತ್ತು. ಮೋಹನ ತನ್ನ ವಾದ ಮಂಡಿಸುತ್ತಿದ್ದ. ತಾನು ಹೇಳುತ್ತಿರುವುದು ಸರಿ ಎಂದು ಅವನಿಗೆ ಗೊತ್ತಿತ್ತು. ಬೇರೆಯವರೂ ತಮ್ಮ ವಾದ ಮಂಡಿಸುತ್ತಿದ್ದರು. ಶ್ರೇಷ್ಠಳೂ ಬೇರೆಯದೇ ವಾದ ಮಂಡಿಸುತ್ತಿದ್ದಳು. ಮೋಹನ ಬೇಸರದಿಂದ ತನ್ನ ಮಾತನ್ನು ಜೋರಾಗಿ ಕಿರುಚಿ ಹೇಳಿದ,ಅಷ್ಟೇ, ಶೇಷ್ಠ ಮೋಹನನ ಕಡೆ ತಿರುಗಿ,

"ಏ ಕುಳಿತೋಕೊಳ್ರಿ ನೋಡಿದ್ದೇನೆ, ಏನು ದೊಡ್ಡ ಬುದ್ದಿವಂತ, ಸ್ಮಾರ್ಟ್ನೆಸ್ ತೋರೊಸೋಕೆ ಬರಬೇಡಿ, ನಾನು ತುಂಬಾ ವರ್ಷಗಳಿಂದ ನೋಡುತ್ತಿದ್ದೇನೆ, ನೀವೊಬ್ಬರೇ ಬುದ್ದಿವಂತರು ಅನ್ನೋತರ ಬೀಹೇವ್ ಮಾಡ್ತಿದ್ದೀರಾ, ನನಗೆ ಎಲ್ಲಾ ಗೊತ್ತು" ಎಂದು ಅಬ್ಬರಿಸಿದಳು.

ಮೋಹನನ ತಲೆ ದಿಮ್ ಎಂದಿತು. ತಾನು ಹೇಳುತ್ತಿರುವುದು ಸರಿ ಎಂದು ಅಲ್ಲಿರುವ ಬಹಳ ಜನಕ್ಕೆ ಗೊತ್ತು, ಆದರೆ ತನಗೆ ಇಷ್ಟವಾಗುತ್ತಿರುವ ಹುಡುಗಿ ತನ್ನ ಅವಮಾನ ಮಾಡುತ್ತಿದ್ದಾಳೆ. ಅದೂ ಎಲ್ಲರ ಎದುರಿಗೆ, ಅಂದರೆ ತಾನು ಇಷ್ಟು ದಿನ ತಿಳಿದಿದ್ದೆಲ್ಲಾ ಸುಳ್ಳು, ಅವಳಿಗೆ ನಾನೂ ಕೂಡ ಒಬ್ಬ ಸಹೋದ್ಯೋಗಿ, ತಾನೇನೂ ವಿಶೇಷವಲ್ಲ, ತಾನು ತಿಳಿದಿದ್ದೆಲ್ಲಾ ಭ್ರಮೆ ಅಥವಾ ಊಹೆ. ಅವನಿಗೆ ಏಕಕಾಲದಲ್ಲಿ ದುಃಖ ಹಾಗು ಸಂತೋಷ ಉಂಟಾಯಿತು. ಇವಳಂತವಳಿಗೆ ಅಂತಹ ಮನ್ನಣೆ ಕೊಟ್ಟೆನಲ್ಲ ಎಂದು ದುಃಖವಾದರೆ, ಇವಳ ಮನಸ್ಸು, ಇವಳೆಂತಹವಳು ಎಂದು ತಿಳಿದಿದ್ದಲ್ಲದೆ, ಇನ್ನು ಇವಳ ನೆನೆಪೂ ಕೂಡ ನನಗಾಗುವುದಿಲ್ಲ ಎಂದು ಸಂತೋಷವಾಯಿತು. ಬೇಸರಕ್ಕಿಂತ ಸಂತೋಷ ಹೆಚ್ಚಾಗಿ, ಅವನ ಮುಖ ಖುಷಿಯಿಂದ ಅರಳಿತು. ಅವನು ಶ್ರೇಷ್ಠಳ ಅಬ್ಬರಕ್ಕೆ ಬೇಸರಿಸದೆ ಖುಷಿಯಾದದ್ದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಅವನು ಖುಷಿಯಿಂದ " ನಿಮಗೆ ಏನು ಸರಿ ಅನಿಸುತ್ತದೆಯೋ ಹಾಗೆ ಮಾಡಿ" ಎಂದು ಎದ್ದು ಹೊರನಡೆದ.

ಅವನ ದೊಡ್ಡ ಸಮಸ್ಯೆಯೊಂದು ಇಷ್ಟು ಸಲೀಸಾಗಿ ಕರಗಿಹೋಗಿದ್ದು ಅವನಿಗೆ ಆಶ್ಚರ್ಯವಾಗಿತ್ತು. ತನ್ನ ಜೀವನಕ್ಕೆ ಹೆಣ್ಣು ಎಂದರೆ ತನ್ನ ಹೆಂಡತಿ ಮಾತ್ರ, ಅವಳೇ ತನಗೆ ಎಲ್ಲಾ, ಅಂತವಳನ್ನು ಬಿಟ್ಟು ಈ ಕೆಟ್ಟ ಹೆಣ್ಣಿನ ನೆನಪು ಮಾಡಿಕೊಳ್ಳುತ್ತಿದ್ದೆನಲ್ಲ ಎಂದುಕೊಂಡ. ಇನ್ನೂ ಅರ್ಧದಿನ ಇದ್ದರೂ ಆಫೀಸಿನಿಂದ ಮನೆಗೆ ಬಂದುಬಿಟ್ಟ.

ಎಂತಹ ಸಂಬಂಧಗಳೂ ಅವಮಾನವನ್ನು ಭರಿಸುವುದಿಲ್ಲ. ಅವಮಾನ ದೊಡ್ಡದೇ ಆಗಬೇಕಾಗಿಲ್ಲ, ಒಂದು ಸಣ್ಣ ನಿರ್ಲಕ್ಷ ಸಂಬಂಧಗಳನ್ನು ತುಂಡರಿಸಬಹುದು. ಒಂದು ಸಣ್ಣ ಅಗೌರವ, ಅದೂ ತಾವು ಇಷ್ಟಪಡುವವರಿಂದ ಆದರೆ ಅದರ ಪರಿಣಾಮ ದೊಡ್ಡದಾಗಿರುತ್ತದೆ. ಒಂದೊಂದು ಸಲ ಅವಮಾನಗಳು, ಕೋಪ ಹೇಗೋ ಹಾಗೆ ಜೀವನಪಾಠಗಳನ್ನು ಕಲಿಸುತ್ತವೆ. ದಂಪತಿಗಳ ವಿಚ್ಛೇದನ ಯಾವುದೋ ಸಣ್ಣ ಸಂಗತಿಯಿಂದಲೇ ಶುರುವಾಗುತ್ತದೆ. ದೇಹ ದೇಹಗಳನ್ನೇ ಹಂಚಿಕೊಳ್ಳುವಷ್ಟು ಹತ್ತಿರದ ಸಂಬಂಧ ಹೇಗೆ ಒಂದು ಸಣ್ಣ ಮಾತಿನಿಂದ ದೂರವಾಗುತ್ತದೆ. ದ್ವೇಷವಾಗಿ ಮಾರ್ಪಾಡಾಗುತ್ತದೆ, ತಿಳಿಯದು.

ಮನೆಗೆ ಬಂದರೆ ಅನನ್ಯ ಮನೆಯಲ್ಲಿ ಕುಳಿತು ಯಾವುದೋ ಪುಸ್ತಕ ಓದುತ್ತಿದ್ದಳು.

ಅವನು ಆಶ್ಚರ್ಯದಿಂದ " ಇಷ್ಟು ಬೇಗ ಬಂದುಬಿಟ್ಟಿದ್ದೀಯ" ಎಂದ

"ಯಾಕೋ ಖುಷಿ ಆಗುತ್ತಿತ್ತು, ಆದ್ದರಿಂದಲೇ ಬಂದುಬಿಟ್ಟೆ" ಎಂದವಳು ಎದ್ದು ಅವನನ್ನು ಅಪ್ಪಿಕೊಂಡಳು. ಆ ಅಪ್ಪುಗೆಯಲ್ಲಿ ಸ್ವರ್ಗಕಂಡಾಯಿತು ಮೋಹನಿಗೆ.

"ಬಟ್ಟೆ ಬದಲಿಸಿ ಬನ್ನಿ, ಒಳ್ಳೆಯ ಟೀ ಮಾಡುತ್ತೇನೆ" ಎಂದಳು.

ಅವನು ಬಟ್ಟೆ ಬದಲಾಯಿಸಲು ಮಲಗುವ ಕೋಣೆಗೆ ಬಂದಾಗ ಅನನ್ಯಳ ದಿನಚರಿ ಪುಟ ತೆರೆದುಕೊಂಡು ಹಾಸಿಗೆಯಮೇಲೆ ಬಿದ್ದಿತ್ತು. ಹಾಗೇ ಕಣ್ಣಾಡಿಸಿದ, ಅಲ್ಲಿ ಹೀಗೆ ಬರೆದಿತ್ತು.

" ಅವನು ನನ್ನನ್ನು ಅವಮಾನಗೊಳಿಸಿದ್ದು ಒಳ್ಳೆಯದೇ ಆಯಿತು, ಒಂದು ದೊಡ್ಡ ಸಮಸ್ಯೆ ತೀರಿದಂತಾಯಿತು".

ಜೀವನ ಇಷ್ಟೊಂದು ಕಾಕತಾಳೀಯವೇ ಎಂದುಕೊಂಡ. ಮನಸು ನಿರಾಳವಾಯಿತು.



# ಆಧುನಿಕ ಭೂತಗಳು

**ತನುಶ್ರೀ**, ಬೆಂಗಳೂರು

ಬೀಕರ ಬರಗಾಲದ ಪರಿಣಾಮದಿಂದ ಬೇಸತ್ತ ಜನರು ನಗರಗಳಿಗೆ ಕೆಲಸಕ್ಕೆಂದು ಊರು ತೊರೆದರು. ಶಂಕರಪ್ಪ ಹಾಗೂ ಅವನ ಕುಟುಂಬವು ಕೆಲಸವನ್ನು ಹುಡಿಕಿಕೊಂಡು ತನ್ನ ಪುಟ್ಟ ಗ್ರಾಮದಿಂದ ಬೆಂಗಳೂರು ನಗರಕ್ಕೆ ರೈಲಿನಲ್ಲಿ ಬರುತ್ತಿದ್ದ ಶಂಕರಪ್ಪನ ಹೆಂಡತಿ ಕಾಳಮ್ಮಳಿಗೆ ಬೆಂಗಳೂರು ನಗರ ಹೊಸ ಪರಿಚಯವಾಗಿತ್ತು. ತಮಗಿದ್ದ ಒಬ್ಬಳೇ ಮಗಳು ಕಮಲಾಳನ್ನು ಕಿಕ್ಕಿರಿದು ತುಂಬಿದ್ದ ರೈಲಿನ ಜನರ ಮದ್ಯೆ ಮಗಳನ್ನ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡಿದ್ದಳು.

ಕಮಲ ಒಂಬತ್ತನೆ ತರಗತಿ ಮುಗಿಸಿ ಈಗ ಹತ್ತನೇ ತರಗತಿಗೆ ಬಡ್ತಿ ಪಡೆದಿದ್ದಳು. ಕಮಲ ರೈಲಿನಲ್ಲಿ ಬರುವಾಗ ಅಲ್ಲಿ ತುಂಬಿದ ಜನರನ್ನು ನೋಡಿ ಆಶ್ಚರ್ಯಚಕಿತಳಾಗಿದ್ದಳು. ಶಂಕರಪ್ಪನ ಕುಟುಂಬ ಅಂತೂ ಮುಂಜಾನೆ ಬೆಂಗಳೂರಿಗೆ ಬಂದಿಳಿದರು. ಮುಗಿಲೆತ್ತರದ ಕಟ್ಟಡಗಳನ್ನು ನೋಡಿದ ಕಮಲಳಿಗೆ ಇದೊಂದು ಅದ್ಭುತವೇ ಸರಿ ಎಂದೆನ್ನಿಸಿ ಅಪ್ಪ ಅಮ್ಮಳ ಜೊತೆಗೆ ಹೆಜ್ಜೆ ಹಾಕಿದಳು. ಶಂಕರಪ್ಪನಿಗೆ ಗೊತ್ತಿರುವುದು ಗಾರೆ ಕೆಲಸವೊಂದೆ. ಬೆಂಗಳೂರಿನಲ್ಲಿ ಕೆಲಸಕ್ಕೇನು ಕೊರತೆ ಇಲ್ಲ ನೋಡಿ. ಶಂಕರಪ್ಪನ ಪರಿಚಯ್ಯರೊಬ್ಬರು ಶಂಕರಪ್ಪನಿಗೆ ಕಟ್ಟಡ ಕಟ್ಟುವ ಕೆಲಸವನ್ನು ಹುಡಿಕಿ ಕೊಟ್ಟ. ಶಂಕರಪ್ಪ ತನ್ನ ಕುಟುಂಬದೊಂದಿಗೆ ಕೆಲಸ ಆರಂಭಿಸಿದ. ಅಲ್ಲೇ ಪಕ್ಕದಲ್ಲಿ ಒಂದು ಸಣ್ಣ ಸೂರನ್ನು ಕಟ್ಟಿಕೊಂಡು ವಾಸವಾಗಿದ್ದರು.

ಮುಕ್ಕಾಲು ತಿಂಗಳು ಕಳೆಯುತ್ತಿದ್ದಂತೆ ಕಮಲಳಿಗೆ ಹತ್ತನೇ ತರಗತಿ ಶಾಲೆಗೆ ಅಡ್ಮಿಷನ್ ಪ್ರಾರಂಭವಾಯಿತು. ಶಂಕರಪ್ಪ ಅಲ್ಲೇ ಪಕ್ಕದಲ್ಲಿದ್ದ ಸರಕಾರಿ ಮತ್ತು ಅನುದಾನಿತ ಶಾಲೆಗೆ ಮಗಳನ್ನು ಸೇರಿಸಿದ. ಕಮಲ ದಿನ ನಿತ್ಯ ತರಗತಿಗೆ ಹೋಗಿ ಎಲ್ಲಾ ಪಾಠಗಳನ್ನು ಸರಿಯಾಗಿ ಕೇಳಿ ಉತ್ತಮ ವಿದ್ಯಾರ್ಥಿ ಎಂದೆನಿಸಿಕೊಂಡಳು. ಕಮಲಳಿಗೆ ಶಾಲೆಯಲ್ಲಿ ವಿಶಾಲ್ ಎಂಬ ಹುಡುಗನ ಪರಿಚಯವಾಯಿತು. ಕಲಮ ವಿಶಾಲ ಇಬ್ಬರು ಒಳ್ಳೆಯ ಸ್ನೇಹಿತರೆಂದು ಶಾಲೆಯ್ಲಿ ಹೆಸರು ಪಡೆದಿದ್ದರು. ಕಮಲ, ವಿಶಾಲ್‌ಗೆ ಓದಿನ ಬಗ್ಗೆ ಹೇಳಿಕೊಡುತ್ತಿದ್ವದಳು. ಇದನ್ನು ಗಮನಸಿದ ವಿಶಾಲ್ ತಂದೆ ತಾಯಿ ಕಾಳಮ್ಮ ಹಾಗೂ ಶಂಕರಪ್ಪನಿಗೆ ಒಪ್ಪಿಸಿ ಅದೇ ಬೀದಿಯಲ್ಲಿದ್ದ ವಿಶಾಲ್ ಮನೆಗೆ ಓದಲು ಕಳುಹಿಸಲು ತಿಳಿಸಿದರು. ಕಮಲಳ ತಂದೆ ತಾಯಿ ಮೊದಲು ಭಯದಿಂದ ಆಗುವುದಿಲ್ಲ ಎಂದು ಹೇಳಿದರು. ನಂತರ ವಿಶಾಲ್ ತಂದೆ ತಾಯಿ ಒತ್ತಾಯಕ್ಕೆ ಒಪ್ಪಿದರು.

ಕಮಲ ಓದಿನಲ್ಲಿ ತುಂಬಾ ಜಾಣೆಯಾಗಿದ್ದರಿಂದ ವಿಶಾಲ್‌ಗೆ ಹೇಳಿಕೊಡುತ್ತಿದ್ದಳು. ವಿಶಾಲ್‌ಗೆ ಮನೆಯಲ್ಲಿ ಶ್ರೀಮಂತಿಕೆಯ ಪ್ರಭಾವದಿಂದ ಮೊಬೈಲ್ ಮತ್ತು ಟಿ.ವಿ. ಬಳಕೆ ಹೆಚ್ಚಾಗಿದ್ದರಿಂದ ಓದಿನಲ್ಲಿ ಆಸಕ್ತಿ ಕಡಿಮೆ ಇತ್ತು. ನಂತರ ಕಮಲ ಎಂದೂ ನೋಡದ ಮೊಬೈಲ್ ಫೋನ್‌ನನ್ನು ನೋಡಿದಾಗ ಸಹಜವಾಗಿ ಸಂತೋಷವಾಯಿತು. ಟಿ.ವಿ. ವೀಕ್ಷಣೆ ಹೆಚ್ಚಾಯ್ತು ವಿಶಾಲ್ ಹಾಗೂ ಕಮಲ ಓದುವುದಕ್ಕಿಂತ ಹೆಚ್ಚಾಗಿ ಮೊಬೈಲ್‌ನಲ್ಲಿ ಗೇಮ್ ಆಡುವುದು, ಟಿ.ವಿ. ನೋಡುವುದು ಹೆಚ್ಚಾಗಿ ಹೋಯಿತು. ಎಷ್ಟರ ಮಟ್ಟಿಗೆ ಅಂದರೆ ಶಾಲೆಯ ಪರೀಕ್ಷೆಗಳಲ್ಲಿ ಸದಾ ಮೊದಲು ಬರುತ್ತಿದ್ದ ಕಮಲ ಇತ್ತೀಚೆಗೆ ಪಾಸಾಗಲು ಕಷ್ಟಪಡುತ್ತಿದ್ದಳು. ವಿಶಾಲ್ ಒಂದೆರಡು ವಿಷಯಗಳಲ್ಲಿ ಫೇಲಾಗಿ ಬಿಟ್ಟಿದ್ದನು.

ಒಂದು ದಿನ ವಿಜ್ಞಾನ ಶಿಕ್ಷಕರು ಕಣ್ಣಿನ ಬಗ್ಗೆ ಪಾಠ ಮಾಡುವಾಗ ಕಣ್ಣಿನ ಪೊರೆಗಳಿಗೆ ಮೊಬೈಲ್, ಟಿ.ವಿ. ವಿಕಿರಣಗಳಿಂದ ಉಂಟಾಗುವ ಪರಿಣಾಮಗಳನ್ನು ಹೇಳಿದಾಗ ವಿಶಾಲ್ ಹಾಗೂ ಕಮಲಾಳ ಮೇಲೆ ಗಂಭೀರ ಪರಿಣಾಮ ಬೀರಿತು. ಕಮಲ, ವಿಶಾಲ್ ಇಬ್ಬರು ಮಾತಾಡಿಕೊಂಡು ಇಂದಿನಿಂದ ಮೊಬೈಲ್ ಬಳಸುವುದನ್ನ ಬಿಟ್ಟು ಓದಿನಲ್ಲಿ ಸಮಯ ಕಳೆಯೋಣ ಎಂದು ಪಣತೊಟ್ಟರು. ಅದರಂತೆ ದಿನನಿತ್ಯ ಅಭ್ಯಾಸ ಮಾಡತೊಡಗಿದರು. ಹತ್ತನೇ ತರಗತಿ ಬೋರ್ಡ್ ಎಕ್ಸಾಮ್ ಪರೀಕ್ಷೆ ಬರೆದು ಬೆಂಗಳೂರು ನಗರಕ್ಕೆ ಕಮಲ ಮೊದಲ ಸ್ಥಾನಗಳಿಸಿದಳು. ವಿಶಾಲ್ ಎರಡನೇ ಸ್ಥಾನಗಳಿಸಿದ.

ಕಮಲ ಮತ್ತು ವಿಶಾಲ್‌ರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಿತು. ಶಾಲೆಯಲ್ಲಿ ಎಲ್ಲಾ ಗುರುಗಳು ಹಾಗೂ ವಿದ್ಯಾರ್ಥಿಗಳು ಇವರಿಬ್ಬರ ಸ್ನೇಹವನ್ನು ಕೊಂಡಾಡಿದರು.

ಶಂಕರಪ್ಪನಿಗೆ ವಿಷಯ ತಿಳಿಯುತ್ತಿದ್ದಂತೆ ಮನೆಯ ಕುಟುಂಬದವರೆಲ್ಲರೂ ಸೇರಿ ಎರಡು ದಿವಸ ಕೆಲಸಕ್ಕೆ ರಜೆ ಹಾಕಿ ತನ್ನ ಹಳ್ಳಿಗೆ ಭೇಟಿ ನೀಡಿ ನನ್ನ ಮಗಳು ಕಾಲೇಜಿಗೆ ಮೊದಲನೇ ಸ್ಥಾನ ಬಂದಿದ್ದಾಳೆ ಎಂದು ಊರಿನಲ್ಲಿರುವ ತನ್ನ ಸ್ನೇಹಿತರೆಲ್ಲರಿಗೂ ಹೇಳಿಕೊಂಡು ಬಂದ. ಮಧ್ಯಾಹ್ನ ಊರ ಜನಕ್ಕೆ ಹೋಳಿಗೆ ಊಟ ಹಾಕಿಸಿ ಸಂಭ್ರಮಿಸಿದರು. ಶಂಕರಪ್ಪನ ಕುಟುಂಬದವರು, ಕಾಳಮ್ಮಳಿಗೆ ಎಲ್ಲಿಲ್ಲದ ಖುಷಿ ತನ್ನ ಸ್ನೇಹಿತರಿಗೆ ತನ್ನ ಮಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡು ಬಂದಳು.

ಮರಳಿ ಬೆಂಗಳೂರಿಗೆ ಬಂದರು. ಶಾಲೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಿದರು. ಶಾಲಾ ಮಕ್ಕಳು, ಗುರುಗಳು, ತಂದೆ ತಾಯಿಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಸನ್ಮಾನ ಸ್ವೀಕರಿಸಿದ ನಂತರ ಕಮಲ ಹಾಗೂ ವಿಶಾಲ್ ತಮ್ಮ ಅನುಭವ ಹಂಚಿಕೊಂಡರು.

ಕಮಲ ನಾನು ಮತ್ತು ವಿಶಾಲ್ ಇಬ್ಬರು ಆಧುನಿಕ ಭೂತಗಳಾದ ಮೊಬೈಲ್ ಹಾಗೂ ಟಿ.ವಿ.ಗೆ ಬಲಿಯಾಗುತ್ತಿದ್ದೆವು. ನಮ್ಮ ಅದೃಷ್ಟ ವಿಜ್ಞಾನ ಮೇಡಂ ಪಾಠದಿಂದ ಪಾರಾದೇವು. ಕೂಡಲೇ ಎಚ್ಚೆತ್ತುಕೊಂಡು ಮೊಬೈಲ್ ಮತ್ತು ಟಿ.ವಿ.ಯಿಂದ ದೂರವಾಗಿ ಚೆನ್ನಾಗಿ ಓದಿ ಈ ಮಟ್ಟಕ್ಕೆ ಬರಲು ಸಾಧ್ಯವಾಯಿತು. ನಮ್ಮ ಕೆಲಸಗಳು ಚೆನ್ನಾಗಿದ್ದರೆ ನಾವು ಒಳ್ಳೆಯ ಸ್ಥಳದಲ್ಲಿರುತ್ತೇವೆ ಎಂದು ಹೇಳಿ ಮಾತು ಮುಗಿಸಿದಳು.



# ಜನಮೆಚ್ಚಿದ ಶರಣಪ್ಪ

**ಸರಿತಾ** , ಬೆಂಗಳೂರು

ಬಸಾಪುರ ಸುಮಾರು ಎರಡು ನೂರು ಮನೆಗಳಿರುವ ಒಂದು ಪುಟ್ಟ ಹಳ್ಳಿ. ಈ ಹಳ್ಳಿಯಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬರು ಕೃಷಿಯನ್ನೇ ಪ್ರಧಾನವಾಗಿ ನಂಬಿರುವ ಬಸಾಪುರದ ಜನರಿಗೆ ಬಸವನಗೌಡ ಹಿರಿಯ ಮುಖಂಡ. ಈತನಿಗೆ ಜನಿಸಿದ ಒಬ್ಬನೇ ಗಂಡುಮಗುವಿನ ಹೆಸರು ಶರಣಪ್ಪ. ಬಸವನಗೌಡ ಬಸಾಪುರದಲ್ಲಿ ಅಂದಾಜು ಇನ್ನೂರು ಎಕರೆ ಆಸ್ತಿಯನ್ನು ಹೊಂದಿರುವ ವ್ಯಕ್ತಿ.

ಶರಣಪ್ಪ ಹುಟ್ಟಿದ ಒಂದು ವರ್ಷಕ್ಕೆ ತನ್ನ ತಾಯಿ ಕಮಲಮ್ಮಳನ್ನು ಕಳೆದುಕೊಳ್ಳುತ್ತಾನೆ. ಕಮಲಮ್ಮಳಿಗೆ ಟಿ.ಬಿ. ಖಾಯಿಲೆ ಗುಣವಾಗದ ಕಾರಣ ತನ್ನ ಕೊನೆಯುಸಿರೆಳೆಯುತ್ತಾಳೆ. ನಂತರ ಬಸವನಗೌಡ ತನಗಿದ್ದ ಒಬ್ಬನೇ ಮಗನನ್ನ ಕಾಳಜಿವಹಿಸಿ ಶಿಕ್ಷಣ, ಮಾನವೀಯ ಮೌಲ್ಯಗಳನ್ನು ಮಗನಿಗೆ ತಿಳಿಸುತ್ತಾ ಉತ್ತಮ ಪ್ರಜೆಯನ್ನಾಗಿ ಬೆಳೆಸುತ್ತಾನೆ. ಶರಣಪ್ಪ ದ್ವಿತೀಯ ಪಿಯುಸಿ ಪರೀಕ್ಷೆ ಮುಗಿಸಿ ಮನೆಗೆ ಬರುವಾಗ ಮನೆಯ ಮುಂದೆ ಸಾವಿರಾರು ಜನರು ಕಣ್ಣೀರ ಕಡಲಲ್ಲಿ ಮುಳುಗಿ ಹೋಗಿದ್ದರು. ಶರಣಪ್ಪ ತನ್ನ ತಂದೆಯನ್ನು ನೋಡಲು ಮನೆಗೆ ಪ್ರವೇಶ ಮಾಡುತ್ತಿದ್ದಂತೆ ತಂದೆ ತನ್ನ ಉಸಿರು ನಿಲ್ಲಿಸಿ ನೆಲದ ಮೇಲೆ ಮಲಗಿದ್ದ. ಶರಣಪ್ಪನಿಗೆ ದುಃಖ ತಡೆಯಲಾಗಲಿಲ್ಲ. ಮೌನವಾಗಿ ಎಲ್ಲವನ್ನು ತಡೆದುಕೊಂಡು ಎಲ್ಲಾ ಕಾರ್ಯವನ್ನು ಮುಗಿಸಿ ಮನೆಗೆ ಬಂದ.

ಶರಣಪ್ಪ ಮನೆಯ್ಲಲಿ ಏಕಾಂಗಿಯಾಗಿ ಕುಳಿತು ಆಲೋಚನೆ ಮಾಡುವಾಗ, ಆತನ ಕಣ್ಣೆದುರಿಗೆ ನೂರಾರು ಎಕರೆ ಜಮೀನು, ದಸವ, ದಾನ್ಯ, ಎಲ್ಲವೂ ಇದೆ, ಆದರೆ ಮನೆ-ಮನಸ್ಸು ಎರಡೂ ಖಾಲಿಯಾಗಿದೆ ಎಂಬ ಭಾವನೆ ಮೂಡಿತು. ಶರಣಪ್ಪ ತನ್ನ ಬುದ್ಧಿಯನ್ನು ಬಳಸಿ ಬಸಾಪುರದಲ್ಲಿ ಬಡತನದಲ್ಲಿ ಬೇಸತ್ತ ಜನರನ್ನು ಗುರುತಿಸಿ ತನ್ನ ಜಮೀನಿನಲ್ಲಿ ಅವರಿಗೆ ಸ್ವಂತ ಉಳುಮೆ ಮಾಡಿ ಅವರಿಗೆ ಬಂದ ಫಲದಲ್ಲಿ ಶರಣಪ್ಪನಿಗೆ ಅವರಿಗೆ ಎಷ್ಟು ಕೊಡಬೇಕು ಎಂದೆನಿಸುತ್ತದೆ ಅಷ್ಟು ಫಲವನ್ನು ನೀಡಲು ತಿಳಿಸಿದ. ಬಡಜನರಿಗೆ ಇದಕ್ಕಿಂತ ದೊಡ್ಡ ಅವಕಾಶ ಬೇಕೇ? ಎಂದು ಕಷ್ಟಪಟ್ಟು ದುಡಿಯಲು ಆರಂಭಿಸಿದರು. ಬಂದ ಫಲದಲ್ಲಿ ಶರಣಪ್ಪನಿಗೆ ಇಂತಿಷ್ಟು ಭಾಗವನ್ನು ನೀಡಿದರು. ಶರಣಪ್ಪ ಎಂತಹ ನಿಸ್ವಾರ್ಥ ಜೀವಿ ಎಂದರೆ ತನ್ನ ಪಾಲಿಗೆ ಬಂದ ಫಲವನ್ನು ಮಾರಿ ತನ್ನೂರಿಗೆ ಅವಶ್ಯಕವಾಗಿ ಬೇಕಾಗಿದ್ದ ಸರ್ಕಾರಿ ಶಾಲೆ ಕಟ್ಟಡವನ್ನು, ಆಸ್ಪತ್ರೆಯನ್ನು ಕಟ್ಟಿಸಿ ತನ್ನ ತಂದೆ-ತಾಯಿಗೆ ಅರ್ಪಿಸಿದ.

ಶರಣಪ್ಪ ತಾನು ವಿಧ್ಯಾಭ್ಯಾಸದ ಜೊತೆಗೆ ಸಾಮಾಜಿಕ ಜವಾಬ್ದಾರಿಗಳನ್ನು ಸಣ್ಣ ವಯಸ್ಸಿನಲ್ಲಿಯೇ ನಿಭಾಯಿಸತೊಡಗಿದ. ಆ ಕಾರಣದಿಂದಾಗಿ ಶರಣಪ್ಪ ಜನರ ನೆಚ್ಚಿನ ನಾಯಕನಾಗಿ ಬೆಳೆಯತೊಡಗಿದ. ಶರಣಪ್ಪ ಎಲ್ಲರನ್ನೂ ಕಳೆದುಕೊಂಡು ನೋವಿನಲ್ಲಿದ್ದಾಗ ಆತನಿಗೆ ಜೊತೆಯಾಗಿದ್ದು ಬಸಾಪುರದ ಜನರು. ಹಾಗಾಗಿ ಬಸಾಪುರದ ಜನರ ಮೇಲೆ ಆತನಿಗೆ ಎಲ್ಲಿಲ್ಲದ ಪ್ರೀತಿ ಗೌರವ. ಶರಣಪ್ಪ ತನ್ನ ಜಾಣತನದ ಮೂಲಕ ಡಿಗ್ರಿಯನ್ನು ಫಸ್ಟ್‌ಕ್ಲಾಸ್‌ನಲ್ಲಿ ಉತ್ತೀರ್ಣನಾಗಿ ಊರಿನ ಇತರೆ ವಿದ್ಯಾರ್ಥಿಗಳಿಗೆ ಆದರ್ಶ ವಿದ್ಯಾರ್ಥಿಯೂ ಆದನು.

ಒಂದು ದಿನ ಶರಣಪ್ಪ ತನ್ನ ಜಮೀನನ್ನು ನೋಡಲು ಹೋದಾಗ ತುಂಬಾ ವಯಸ್ಸಾದ ಪಾರ್ವತಿ ಹಾಗೂ ಶಿವಪ್ಪ ಎಂಬುವವರನ್ನು ನೋಡಿದ ಅವರು ಇದ್ದಲ್ಲಿಗೆ ಹೋಗಿ ಮಾತನಾಡಿಸಿದ. ಪಾರ್ವತಿ, ಶಿವಪ್ಪ ಮೂಲತಃ ಬಸಾಪುರದ ನಿವಾಸಿಗಳು ಅವರು ದಿನಗೂಲಿ ಮಾಡಿಯೇ ಜೀವನ ಕಳೆಯುತ್ತಿದ್ದರು. ಶಿವಪ್ಪ, ಪಾರ್ವತಿಯವರಿಗೆ ಸ್ವಂತ ಜಮೀನು ಇಲ್ಲದ ಕಾರಣ ಶರಣಪ್ಪನ ಹೊಲದಲ್ಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಅವರ ಬದುಕಿನ ಪಯಣವನ್ನು ಆಲಿಸಿದ ಶರಣಪ್ಪ ಅವರನ್ನು ನೀವು ಇನ್ನು ಮುಂದೆ ಹೊಲದಲ್ಲಿ ಕೆಲಸ ಮಾಡುವುದು ಬೇಡ ನನ್ನ ಮನೆಯಲ್ಲಿ ನನ್ನೊಂದಿಗೆ ಸಂತೋಷದಿಂದ ಇರಬಹುದು. ನಿಮ್ಮಿಬ್ಬರ ಒಪ್ಪಿಗೆ ಇದ್ದರೆ ಎಂದು ಪ್ರಶ್ನೆ ಹಾಕಿದ. ಪಾರ್ವತಿ, ಶಿವಪ್ಪ ಸಂತೋಷದಿಂದ ನಮಗೂ ಮಕ್ಕಳಿಲ್ಲದ ನೋವು ಕಡಿಮೆಯಾಗುತ್ತದೆ, ಶರಣಪ್ಪ ನಿನ್ನದು ದೊಡ್ಡ ಗುಣ ಹಾಗೇ ಆಗಲಿ ಎಂದರು.

ಶರಣಪ್ಪನ ಸಂತೋಷ ಮುಗಿಲು ಮುಟ್ಟಿತು. ಕೂಡಲೇ ಮನೆಗೆ ಕರೆದುಕೊಂಡು ಹೋದ. ಶಿವಪ್ಪ, ಪಾರ್ವತಿ ಏಕಾಂಗಿಯಾಗಿದ್ದ ಶರಣಪ್ಪನಿಗೆ ತಂದೆ-ತಾಯಿಯ ಪ್ರೀತಿ ನೀಡಿದರು. ಶರಣಪ್ಪ ಪ್ರತಿಯಾಗಿ ಅವರಿಗೆ ಮಗನಿಲ್ಲದ ನೋವನ್ನು ದೂರಗೊಳಿಸಿದನು. ಊರಿನ ಜನರೆಲ್ಲ ಶರಣಪ್ಪನ ನಡೆಯನ್ನು ನೋಡಿ ಮತ್ತೆ ಮನಸ್ಸಿನಿಂದ ಹಾಡಿ ಹೊಗಳಿದರು. ಜನರಲ್ಲಿ ಒಬ್ಬ ಮುಂದೆ ಬಂದು ಮನುಷ್ಯ ಎಷ್ಟೇ ಕಲಿತರು, ಎಷ್ಟೇ ಎತ್ತರಕ್ಕೆ ಬೆಳೆದರು ಮಾನವೀಯ ಮೌಲ್ಯಗಳಿಲ್ಲದಿದ್ದರೆ ಬದುಕು ಬರುಡಾಗುತ್ತದೆ. ಕಲಿಕೆಯ ಜೊತೆಗೆ ಮೌಲ್ಯಗಳನ್ನು ಹೊಂದಿದ್ದರೆ ಬದುಕು ಬಂಗಾರವಾಗುತ್ತೆ. ನಮ್ಮೆಲ್ಲರ ಮನೆ ಮಗ ಶರಣಪ್ಪನ ಬದುಕಿನಂತೆ ಎಂದು ಹರ್ಷದಿಂದ ಹೇಳಿದ.

# ಸತ್ಯ ಕಥೆ ಆಧಾರಿತ ಬರಹಗಳು



# ಆದಿಲ್ ಶಾಹಿಗಳು

**ವಿನಯ್ ಕುಮಾರ್**, ಮೈಸೂರ್

ಸದಾಶಿವ ಹೇಳಿದ ಸತ್ಯ ಘಟನೆ ಆಧಾರಿತ ಆದಿಲ್ ಶಾಹಿಗಳ ಕಾಲದ ಕಥೆ .*

ಶಿವಪ್ಪನವರು, 'ತಾಯಿ ಸಂಗವ್ವ, ಆದಿಲ್ ಶಾಹಿಗಳು ಇಲ್ಲಿಗೂ ಬಂದ್ರಮ್ಮ, ಇನ್ನೆರಡು ದಿನಗಳಲ್ಲಿ ಇಲ್ಲಿಗೆ ತಲಪುತ್ತಾ ಇದ್ದಾರಂತೆ, ವಿಜಯಪುರ ಬಿಟ್ಟು ನಾವು ಇಷ್ಟು ದೂರದ ಊರಿಗೆ ಬಂದ್ರೂ, ನಮ್ಮ ಬೆನ್ನು ಹತ್ತಿದ್ದಾರೆ, ಏನಮ್ಮ ಮಾಡೋದು?'

'ಅಣ್ಣಾ, ಹೆಣ್ಣಿನ ಸೌಂಧರ್ಯ ಅಂದ್ರೆ ಹಾಗೇನೇ ಅಲ್ವಾ! ಹೆಣ್ಣಿಗಾಗಿ ರಾಮ ರಾವಣರ ಯುದ್ಧ ನಡೆದೇ ಹೋಯ್ತಲ್ಲ, ಮಹಾಭಾರತ ನಡೆದದ್ದು ಹೆಣ್ಣಿಗಾಗಿ ಅಲ್ವೇ!! ನೀನು ಹಿರಿಯ ಅಣ್ಣ, ನನಗೆ ತಂದೆಯ ಸಮಾನ. ಮಿಕ್ಕ ಆರು ಜನ ಅಣ್ಣಂದಿರು ನನಗೆ ಪಿತೃ ಸಮಾನರೇ, ಆದ್ರೆ ನೀನು ಸ್ವಲ್ಪ ಜಾಸ್ತಿ!!'

ಶಿವಪ್ಪನ ಹೆಂಡತಿ ದೇವಮ್ಮ, ಯಾವುದಕ್ಕೂ ತಕರಾರು ಮಾಡದವಳು, ಮಿತಭಾಷಿ, ಸಂಕಟ ತಡೆಯಲಾರದೆ 'ಒಂದು ಹೆಣ್ಣನ್ನು ಕಾಪಾಡಲು ಇಷ್ಟೊಂದು ಕಷ್ಟವೇ? ಒಟ್ಟಿಗೆ ಹೋರಾಡೋಣ, ಇಲ್ಲವೇ ಒಟ್ಟಿಗೆ ಪ್ರಾಣ ಬಿಡೋಣ'!! ಎಂದುಬಿಟ್ಟಳು

'ವೈನಿ ಇದೆಂತಹಾ ಮಾತು, ನನ್ನ ಒಬ್ಬಳ ಸುಖಕ್ಕಾಗಿ ಎಲ್ಲರ ಪ್ರಾಣವೇ?'

ಮಧ್ಯರಾತ್ರಿಯಲ್ಲಿ ಇವರ ಏರುಧ್ವನಿ ಕೇಳಿ ವಾಡೆಯಲ್ಲಿದ್ದ ಎಲ್ಲರೂ ಓಡಿ ಬಂದರು. ಮನೆಯ ಹಿರಿಯ ರುದ್ರಪ್ಪ ನವರು, ದೇವಮ್ಮನ ತಂದೆ, ಅಳಿಯ ಶಿವಪ್ಪನ ಸಹಾಯಕ್ಕಾಗಿ ಬಂದು ನಿಂತಿದ್ದಾರೆ, ಹೀಗೆ ಕುಟುಂಬದ ಸದಸ್ಯರ ಸಂಖ್ಯೆ ಸುಮಾರು 300 ರಿಂದ 350! ಆದಿಲ್ ಶಾಹಿ ದಬ್ಬಾಳಿಕೆ ತಡೆಯಲಾರದೆ, ಅವನ ಆದೇಶದಂತೆ ಸಂಗವ್ವಳನ್ನು ಅವನ ಜನಾನಗೆ ಅಂತಃಪುರಕ್ಕೆ ಕಳಿಸಲು ಸುತಾರಾಂ ಮನಸ್ಸಿಲ್ಲದೆ, ತಮ್ಮ ಆಸ್ತಿ, ಜಮೀನು, ಮನೆ, ಮಠ ಎಲ್ಲವನ್ನು ತೊರೆದು ಗುಳೆ ಎದ್ದು ಬಂದು ಆರು, ಏಳು ವರ್ಷವೇ ಆಗಿದೆ. ತಮ್ಮ ಪೂರ್ವಜರು ಇದ್ದ ವಿಜಯಪುರ ತೊರೆದು ಬಂದು, ಈಗಿರುವ ಸಾಸುವೆ ಹಳ್ಳಿ ರಾಮಪುರವನ್ನೇ ತಮ್ಮ ಕರ್ಮ ಭೂಮಿ ಮಾಡಿಕೊಂಡದ್ದಾಗಿದೆ. ಪಕ್ಕದಲ್ಲೇ ತುಂಗಭದ್ರಾ ನದಿ. ತಾಯಿ ಯಾವಾಗಲೂ ತುಂಬಿ ಹರಿಯುತ್ತಾಳೆ! ಸಮೃದ್ಧಿಯಾಗಿದೆ ಭೂಮಿ! ಒಳ್ಳೆ ಬೆಳೆ! ದನಕರುಗಳು ಅವಕ್ಕೆ ಯಥೇಚ್ಛವಾಗಿ ಮೇವು, ದನಕರುಗಳು ದಷ್ಟಪುಷ್ಟ ವಾಗಿವೆ, ಇಲ್ಲಿಯ ಜನ ನಮ್ಮನ್ನು ಒಪ್ಪಿಕೊಂಡಿದ್ದಾರೆ, ದೈವ ಸಂಕಲ್ಪವು ಇದೆ! ಗುಡ್ಡೆ ರಾಮೇಶ್ವರನ ಕೃಪೆ ಇದೆ!

ಈಗ ಹಠಾತ್ತನೆ ಪುನಃ ವಿಧಿ ತೊಂದರೆ ಉಂಟು ಮಾಡಿದೆ!

ರುದ್ರಪ್ಪ ನವರು ಶಿವಪ್ಪನವರ ಹೆಣ್ಣು ಕೊಟ್ಟ ಮಾವ, ಈಗ ಅಳಿಯ ಮತ್ತು ಮಗಳ ಸಹಾಯಕ್ಕೆ ನಿಂತಿದ್ದಾರೆ. ಎಲ್ಲಾ ತಮ್ಮಂದರಿಗೂ ಶಿವಪ್ಪನವರು ಪಿತೃ ಸಮಾನ.

ಈ ಸಂಧರ್ಭ ಎಷ್ಟು ಜಟಿಲವಾಗಿತ್ತೆಂದರೆ, ಶಿವಪ್ಪನವರ ಬಾಯಿ ಕಟ್ಟಿತ್ತು, ಶಿವಪ್ಪನವರ ಹೆಂಡತಿ ದೇವಮ್ಮ 'ಒಂದು ಹೆಣ್ಣನ್ನು ಕಾಪಾಡಲು ಇಷ್ಟೊಂದು ಕಷ್ಟವೇ? ಒಟ್ಟಿಗೆ ಹೋರಾಡೋಣ, ಇಲ್ಲವೇ ಒಟ್ಟಿಗೆ ಪ್ರಾಣ ಬಿಡೋಣ' ಅನ್ನುವ ವಾಕ್ಯಗಳು ಶಿವಪ್ಪನವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದವು!!

ರುದ್ರಪ್ಪನವರಿಗೆ, ಹಳೆ ವಿಷಯಗಳು ನೆನಪಿಗೆ ಬಂದ್ವು! ಆದಿನ ರಾತ್ರಿ ಸಂಗಾ, ಸುಶ್ರಾವ್ಯವಾಗಿ ಹಾಡುತ್ತಿದ್ದಾಗ, ತನ್ನಷ್ಟಕ್ಕೆ ತಾನೇ ನಲಿಯುತ್ತಿದ್ದಾಗ, ಆಕೆಯ ವಯ್ಯಸ್ಸು ಇನ್ನು 12-13 ವರ್ಷ ಇರಬಹುದು, ಆಗ ತಾನೇ ಮೈ ನರೆದಿತ್ತು. ಮಾರುವೇಷದಲ್ಲಿ ತಿರುಗುತ್ತಿದ್ದ ಆದಿಲ್ ಶಾಹಿ ಸುಲ್ತಾನರ ಕಣ್ಣಿಗೆ ಬಿದ್ದಿದ್ದಾಳೆ. ಆದಿಲ್ ಶಾಹಿ ಗಳಿಗೆ ಸಂಗಾ ತನ್ನ ಜನಾನದ ಬೇಗಂ ಆಗ್ಬೇಕು ಅನ್ನೋ ಆಸೆ ಹುಟ್ಟಿದೆ, ಅದಕ್ಕಾಗಿ ಶಿವಪ್ಪನವರ ಮೇಲೆ ಒತ್ತಡ ತಂದಿದ್ದಾರೆ, ಶಿವಪ್ಪನವರು ತಮ್ಮ ಬಂಧು ಬಳಗದೊಂದಿಗೆ, ಇದ್ದ ಜಾಮೀನು, ವ್ಯಾಪಾರ ಬಿಟ್ಟು, ರಾತ್ರೋ ರಾತ್ರಿ ಗುಳೆ ಎದ್ದು, ವಿಜಯಪುರದಿಂದ ಕೆಳಗೆ ಬಳ್ಳಾರಿ ಸಮೀಪದ ಜಟಂಗಿ ರಾಮೇಶ್ವರಕ್ಕೆ ಹೋಗಿ ಅಲ್ಲಿ ವಾಸ್ತವ್ಯ ಹೂಡಿದ್ದಾರೆ. ಆಗ ಬಳ್ಳಾರಿ ಹಂಡೆ ನಾಯಕರ ಸುಪರ್ದಿನಲ್ಲಿದ್ದು , ಅದು ಪ್ರಶಸ್ತ್ಯ ವಾದ ಸ್ಥಳ ಅಂದೆನಿಸಿ ಅಲ್ಲಿ ವಾಸ್ತವ್ಯ ಹೂಡಿ, ನಾಲ್ಕಾರು ವ್ಯಾಪಾರ ಶುರು ಮಾಡಿ ಹೆಸರು ಸಂಪಾದಿಸುವ ಹೊತ್ತಿಗೆ, ಅಲ್ಲಿಗೂ ಆದಿಲ್ ಶಾಹಿ ಗಳು ಹುಡುಕಿಕೊಂಡು ಬರುತ್ತಿದ್ದಾರೆ ಅನ್ನುವ ವಿಷಯ ತಿಳಿದು, ಅಲ್ಲಿಂದ ಗುಳೆ ಎದ್ದು ಇಲ್ಲಿ ಹೊನ್ನಾಳಿ ಪಕ್ಕದ ಸಾಸುವೆ ಹಳ್ಳಿ ರಾಮಪುರಕ್ಕೆ ಬಂದು ಬೀಡುಬಿಟ್ಟು ಮೂರು ವರ್ಷ ವಾಯ್ತು. ಈಗ ಇಲ್ಲಿಗೂ ಬಂದಿದೆ ಆದಿಲ್ ಶಾಹಿ ಸೈನ್ಯ! ರುದ್ರಪ್ಪನವರು ಎಲ್ಲರನ್ನು ಕುರಿತು 'ಎಷ್ಟು ದಿನ ಓಡಲು ಸಾಧ್ಯ, ನಮಗಿರುವ ಒಂದೇ ದಾರಿ, ಎಲ್ಲರೂ ಯುದ್ಧ ಮಾಡಿ ಹೋರಾಡಿ ವೀರ ಮರಣ ಹೊಂದುವುದು!'

ಇವರ ಮಾತಿಗೆ ಎಲ್ಲರೂ ಧ್ವನಿಗೂಡಿಸಿದರು!!

ಆದರೆ ಸಂಗವ್ವನಿಗೆ ಇದೆಲ್ಲ ಏತಕ್ಕಾಗಿ? ತನ್ನ ಸೌಂಧರ್ಯ ಇಷ್ಟೆಲ್ಲಾ ರಾದ್ಧಾಂತಗಳಿಗೆ ಕಾರಣವಾಗಿದೆ! ತಾನು ಒಬ್ಬಳು ಪ್ರಾಣ ಕಳೆದುಕೊಂಡರೆ ಇಷ್ಟೆಲ್ಲಾ ಜನರ ಪ್ರಾಣ ಉಳಿಯುತ್ತೆ ಅನ್ನುವ ತೀರ್ಮಾನಕ್ಕೆ ಬಂದಳು. ಹಾಗೆ ಎದ್ದುಹೋಗಿ ಮಲಗುವ ಕೋಣೆಯಲ್ಲಿ 'ಜೈ ರಾಮೇಶ್ವರ' ಎಂದು, ತನ್ನ ಕುತ್ತಿಗೆಯ ನರವನ್ನು ಹರಿತವಾದ ಕತ್ತಿ ಇಂದ ಕತ್ತರಿಸಿಕೊಂಡಳು, ಕುಸಿದಳು! ಒಂದು ನಿಮಿಷದಲ್ಲಿ ನಡೆದು ಹೋದ ಘಟನೆ ತಿಳಿದು ವಾಡಿಯ ಜನ ಸ್ತಂಭೀಬೂತರಾದ್ರು, ಸಂಗವ್ವಳ ಪ್ರಾಣ ಪಕ್ಷಿ ಹಾರಿಹೋಗಿತ್ತು!!!

ಹೆಳವರ (ಹೇಳುವರ) ಮಾದಪ್ಪ ಇದನ್ನೆಲ್ಲಾ ಸದಾಶಿವನಿಗೆ ವಿವರಿಸುತ್ತಿದ್ದರೆ, ಈ ಸಾಫ್ಟ್ ವೇರ್ ಇಂಜಿನಿಯರ್ ಇದನ್ನೆಲ್ಲಾ ನಂಬಲು ಸಿದ್ಧನಿರಲಿಲ್ಲ! ಇವನ ಇಂಜಿನಿಯರಿಂಗ್ ಮೈಂಡ್ ಕೆಲಸ ಮಾಡಲು ಶುರುವಾಯ್ತು! ಅಲ್ರೀ ಮಾದಪ್ಪ, ಇದೇನ್ರಿ ಕಾಗಕ್ಕ, ಗುಬ್ಬಕ್ಕ ಕಥೆ! ದುಡ್ಡು ಬೇಕಾದ್ರೆ ಕೇಳ್ರಿ, ಏನ್ರೀ ಈ ಕಥೆ ನಂಬಲಿಕ್ಕಾದ್ರೂ ಆಗುತ್ತಾ?

ಹೆಳವರ ಮಾದಪ್ಪನಿಗೆ, ಅವನ ವಂಶದವರು ಬರೆದಿಟ್ಟಿರುವ ಸದಾಶಿವನ ವಂಶಜರ ವಂಶಾವಳಿ ಮತ್ತು ಅವರ ಚರಿತ್ರೆಯೇ ಜೀವಾಳ. ಇದನ್ನು ಸುಳ್ಳು ಎನ್ನುವ ನವ ಯುಗದ ಇಂಜಿನಿಯರ್ ಕಂಡು ಒಂದು ಕಡೆ ಕೋಪ, ಮತ್ತೊಂದು ಕಡೆ ಮರುಕ!

ರೀ ಮಾದಪ್ಪ, ಇದೆಲ್ಲಾ ನಿಜ ಅನ್ನೋಣ, ಇದಕ್ಕೆ ಸಾಕ್ಷಿ ಯಾಗಿ ನೀವು ತೋರಿಸುತ್ತಿರುವ ಈ ಕಡತಗಳು 300-400 ವರ್ಷದ ಹಳೆಯದಲ್ಲ! 300-400 ವರ್ಷದ ಹಳೆಯ ಪುಸ್ತಕ/ಕಡತ ಹೀಗಿರಲು ಸಾಧ್ಯವಿಲ್ಲ ಬಿಡಿ!

ಮಾದಪ್ಪ 'ಇಂಜಿನಿಯರ್ ಸಾಹೇಬ್ರೆ, ನನ್ನ ಕುಲ ಕಸುಬೇ ವಂಶಾವಳಿ ಬರೆದಿಟ್ಟು ಕೊಳ್ಳುವುದು!! ನಿಮಗೆ ಕೆಲವು ವಿಷಯ ತಿಳಿಸುತ್ತೇನೆ'

1. ಈಗಲೂ ನಿಮ್ಮ ಪೂರ್ವಜರು ಸ್ಥಾಪಿಸಿಕೊಂಡಿದ್ದ ಬಳ್ಳಾರಿ ಬಳಿಯ ಜಟಂಗಿ ರಾಮೇಶ್ವರದ ದೇವರಿಗೆ ಪೂಜೆ ನಡೆಯುತ್ತಿದೆ, ಹೋಗಿ ನೋಡಿ ಬನ್ನಿ

2. ನಮ್ಮ ಮನೆಗೆ ಬನ್ನಿ, ಈಗಲೂ ತಾಳೆ ಗರಿಗಳಲ್ಲಿ ಬರೆದಿರುವ ನಿಮ್ಮ ವಂಶಜರ ವಿಷಯಗಳು ಇವೆ, ನೋಡುವಿರುವಂತೆ!

3. ನಿಮ್ಮಸಂಗವ್ವನ ಸಮಾಧಿ ಅಲ್ಲೇ ಆಲದಮರದ ಕೆಳಗೆ ಇದೆ ನೋಡಿ ಹೋಗಿ!!

ಕೊನೆಯ ಮಾತುಗಳನ್ನು ಕೇಳಿ, ಸದಾಶಿವನಿಗೆ ನಿಜವಾಗಿ ವಿದ್ಯುತ್ ಸಂಚಾರವಾಯ್ತು!!

ಮೊನ್ನೆ ಬೆಂಗಳೂರಿನಲ್ಲಿ ತಾನು ಅರಮನೆ ಜೋತಿಷಿ ಅಚ್ಯುತ ಶಾಸ್ತ್ರಿಗಳಲ್ಲಿ ತನ್ನ ಜಾತಕ ತೋರಿಸಿದಾಗ, ಅವರು 'ನಿಮ್ಮ ಪೂರ್ವಜರಲ್ಲಿ ಒಬ್ಬರು ಅಕಾಲಿಕ ಮರಣ ಹೊಂದಿದ್ದು, ಅವರ ಶ್ರಾದ್ಧ ವಿಧಿ ಸುಲಲಿತವಾಗಿ ನಡೆದಿಲ್ಲ, ಅವರ ಆತ್ಮಕ್ಕೆ ಶಾಂತಿ ಸಿಗಲು ಕೆಲವು ಪೂಜೆ ಮಾಡಿಸಿ' ಅಂದದ್ದು, ಹಾಗು ತಾನು ಅವರು ಹೇಳಿದಂತೆ ಮಾಡಿದ್ದು, ಎಲ್ಲವೂ ಜ್ಞಾಪಕಕ್ಕೆ ಬಂತು!

ಅಲ್ಲದೆ, ಇವರ ಮನೆಯ ಸಂಪ್ರದಾಯದಂತೆ, ಒಳ್ಳೆಯ ಕೆಲಸ ಶುರು ಮಾಡುವ ಮೊದಲು, ಆ ಸಾಮಾಧಿಗೆ ಪ್ರಾರ್ಥನೆ ಮಾಡಿ ಬರುವ ವಾಡಿಕೆ ಇರುವುದು ಜ್ಞಾಪಕಕ್ಕೆ ಬಂತು, ತನ್ನನ್ನು ತಾನು ಶಿಕ್ಷಿಸಿಕೊಂಡು, ಶಿವನಪಾದ ಸೇರಿ, ಸನಾತನ ಧರ್ಮವನ್ನು ಎತ್ತಿ ಹಿಡಿದು, ಮನೆತನವನ್ನು ಕಾಪಾಡಿದ ಸಂಗವ್ವ, ಮನೆಯರವ ಪಾಲಿಗೆ ದೇವರಾಗಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ.

ಹೆಳವರ ಮಾದಪ್ಪನಿಗೆ ತನ್ನನ್ನು ಕ್ಷಮಿಸಲು ಕೋರಿ, ತಮ್ಮವಂಶದಲ್ಲಿ ಇತ್ತೀಚಿಗೆ ಆಗಿರುವ ಹುಟ್ಟು, ಸಾವುಗಳ ವಿವರ, ಉದ್ಯೋಗದ ವಿವರ ಎಲ್ಲವನ್ನು ಕೊಟ್ಟ ಸದಾಶಿವ. ಮಾದಪ್ಪ, ಎಲ್ಲವನ್ನು ಶ್ರದ್ಧೆ ಇಂದ ದಾಖಲಿಸಿ ಕೊಂಡ್ರು!

ಸದಾಶಿವ, ಒಮ್ಮೆ ಬಳ್ಳಾರಿ ಸಮೀಪ ಜಟಂಗಿ ರಾಮೇಶ್ವರಕ್ಕೆ ಹೋಗಿ ತಮ್ಮ ಪೂರ್ವಜರ ಮನೆದೇವ್ರನ್ನು ನೋಡಿ ಬಂದ್ರು!

ಈಗಲೂ ಸದಾಶಿವ ಬೆಂಗಳೂರಿನಲ್ಲಿ ಇದ್ದಾರೆ, ಆಗಾಗ ಪೂರ್ವಿಕರ ನೆನಪನ್ನು ಮೆಲಕು ಹಾಕುತ್ತಾರೆ! ಜ್ಯೋತಿಷ್ಯದಲ್ಲಿ ನಿಮಗೆ ನಂಬಿಕೆ ಇದ್ಯಾ ಅಂತ ಕೇಳಿದ್ರೆ, ಮೇಲಿನ ಕಥಾನಕ ಬಿಚ್ಚಿಡುತ್ತಾರೆ!

*ಮೈಸೂರು ವಿನ್ಯಾ*

ಚಿನ್ನಿ-ಕೋಲು: ಸದಾಶಿವ ಅವರ ಮನೆತನದ ಇನ್ನೊಂದು ಕವಲು, ಆದಿಲ್ ಶಾಹಿಗಳ ಕಾಲದಲ್ಲೇ ಇಸ್ಲಾಂ ಧರ್ಮವನ್ನು ಅಳವಡಿಸಿಕೊಂಡರಂತೆ, ಇದರ ವಿವರಗಳನ್ನು ಹೆಳವರ ಮಾದಪ್ಪ ಹಂಚಿಕೊಳ್ಳಲು ಮುಂದೆಬಂದಾಗ ಬೇಡವೆಂದು ಇವರೇ ತಡೆದರಂತೆ!!

ಹೆಳವರು - ಕರ್ನಾಟಕದ ಇತಿಹಾಸ ಹೆಳವರ ಪುಟಗಳಲ್ಲಿ ಹುದುಗಿ ಹೋಗಿದೆ! ಇದನ್ನು ಹೆಕ್ಕಿ ತೆಗೆಯುವ, ಡಿಜಿಟಲೈಜ್ ಮಾಡಿ ಕಾಪಾಡುವ ಕಾರ್ಯ ಆಗಬೇಕಿದೆ! ಹೆಳವರ ಪುಟಗಳಲ್ಲಿ ಅಡಗಿರುವುದು, ರಾಜ ಮಹಾರಾಜರ ಇತಿಹಾಸವಲ್ಲ, ಜನ ಸಾಮಾನ್ಯರ ಇತಿಹಾಸ! ಇಲ್ಲಿ ಘೋರ ಸತ್ಯಗಳಿವೆ, ರಾಜ ಮಹಾರಾಜರ, ಸುಲ್ತಾನರ, ಆದಿಲ್ ಶಾಹಿಗಳ ನಿಜದ ಅನಾವರಣವಿದೆ. ಇದನ್ನು ಓದಿ ಅರಗಿಸಿಕೊಳ್ಳುವ ಕ್ಷಾತ್ರ ಮನೋಭಾವದ್ದೇ ಕೊರತೆ!!!



# ಶ್ರದ್ಧಾಂಜಲಿ



# ಓ ಲೀಲಾವತಿಯವರೇ .. ಎಲ್ಲಿ ಹೋದಿರಿ...

**ಹರಿಣಿ ಸ್. ರಾವ್ (ಚಲನ ಚಿತ್ರದ ಹಿರಿಯ ನಟಿ)**

ಓ ಲೀಲಾವತಿಯವರೇ .. ಎಲ್ಲಿ ಹೋದಿರಿ...

ನಿಮ್ಮ ಕಠಿಣ ಸಾಧನೆಯಿಂದ ಕಲಾದೇವಿಯ ಪಾತ್ರರಾದಿರಿ. ನಿಮ್ಮ ವೈವಿಧ್ಯವಾದ ಅಭಿನಯದ ಮೂಲಕ ಕನ್ನಡ ಚಿತ್ರಪ್ರೇಮಿಗಳ ನೆಚ್ಚಿನ ತಾರೆಯಾದಿರಿ, ಅವರೆಲ್ಲರಿಗೂ ನಿಮ್ಮ ವಿವಿಧ ಅಭಿನಯದಿಂದ ಮೆಚ್ಚುಗೆಯಾದಿರಿ. ಅನೇಕ ಚಿತ್ರ ಪ್ರೇಮಿಗಳಿಗೆ ನೀವು ಅವರ ಮನೆಯ ಆತ್ಮೀಯರಾದಿರಿ.

ಬಿಡುವಿಲ್ಲದ ಅಭಿನಯದ ಕೆಲಸಗಳಿದ್ದರೂ, ನಿಮ್ಮ ಪ್ರೀತಿಯನ್ನು ತೋರಿಸಲು ಸುಂದರ ತೋಟ ಬೆಳೆಸಿದಿರಿ. ನಿಮ್ಮ ಕೈಗುಣದಿಂದಲೂ ಒಳ್ಳೆ ಮನಸಿನಿಂದಲೂ ಇತರರು ಅನೇಕ ವಿಷಯಗಳನ್ನು ಕಲಿಯುವಂತೆ ಮಾಡಿತು. ನಿಮ್ಮ ತೋಟ ನೋಡುವುದೇ ಒಂದು ಸಂಭ್ರಮ; ನಮ್ಮೆಲ್ಲರಿಗೂ ಮನಸಿಗೆ ಆನಂದ ನೀಡುತ್ತಿತ್ತು


ನಿಮ್ಮಲ್ಲಿದ್ದ ಬಹು ದೊಡ್ಡ ಗುಣವೆಂದರೆ ಬಡವರಿಗೆ ಸಹಾಯ ಮಾಡುವುದು, ಅದನ್ನು ಹಲವಾರು ರೂಪದಲ್ಲಿ ಮಾಡುತ್ತಿದ್ದೀರಿ. ಆ ಲಾಭವನ್ನು ಪಡೆದವರು ಬಡ ಕಲಾವಿದರು ಮಾತ್ರವಲ್ಲ. ನಿಮ್ಮ ತೋಟದಲ್ಲಿ ಕೆಲಸ ಮಾಡುವವರು, ಅಕ್ಕಪಕ್ಕದವರು, ಹೀಗೆಯೇ ಅನೇಕರು. ನೀವಿದ್ದ ಊರಲ್ಲಿ ಒಂದು ಆಸ್ಪತ್ರೆಯನ್ನೂ ತೆರೆದಿರಿ. ಇನ್ನು, ಪಶು, ಪಕ್ಷಿಗಳಿಗಾಗಿಯೂ ಒಂದು ಆಸ್ಪತ್ರೆಯನ್ನು ತೆರೆದಿರಿ. ಹೀಗೆ ಇನ್ನೂ ಅನೇಕ ಒಳ್ಳೆಯ ಕೆಲಸಗಳು ಮಾಡುವ ಆಲೋಚನೆಯಿತ್ತು.

ಹೇಳುವ ಯೋಚನೆಯಲ್ಲ, ಮಾಡುವ ಯೋಚನೆ! ಎಷ್ಟೋ ಜನಗಳು ನಿಮ್ಮ ದಯೆಯಿಂದ ಇವತ್ತು ಅವರ ಮನೆಗಳಲ್ಲಿ 'ದೀಪ' ಹಚ್ಚುತ್ತಿದ್ದಾರೆ. ಎಷ್ಟೋ ತೋಟಗಾರರು ನಿಮ್ಮ ಸಲಹೆಗಳಿಂದ ತಮ್ಮ ತೋಟದ ಬೆಳೆಯನ್ನು ಹೆಚ್ಚಿಸಿದ್ದಾರೆ.

'ನಂಗೇನೂ ಗೊತ್ತಿಲ್ಲ' ಎಂದು ಆಗಾಗ ಹೇಳುತ್ತಿದ್ದೀರಿ. ನಿಮ್ಮಿಂದ ಎಷ್ಟೋ ಗೊತ್ತು ಮಾಡಿಕೊಂಡವರಿಗೆ ನೀವು ಬೇಕು. ಮತ್ತೆ ಬೇಗ ಬನ್ನಿ 'ಲೀಲಾ'!






ಈ ವರ್ಷ ನಮ್ಮನ್ನಗಲಿದ
ಗಣ್ಯರು :: ಬೃಂದಾವನದ
ಅಶ್ರುತರ್ಪಣ
ಶ್ರೀ ರತನ ಟಾಟಾ


ಶ್ರೀ ಜಕೀರ್ ಹುಸೈನ್
ಶ್ರೀ ದ್ವಾರಕೀಶ್








ಶ್ರೀಮತಿ ಅಪರ್ಣ ವಸ್ತ್ರೀ

# ಕವನಗಳು



# ಮನಸಿದು ಮಾಯಾಮೃಗ

**ಹರಿಕುಮಾರ್.**

ಮನಸಿದು ನಿರಂತರ ಕುಶಲಕರ್ಮಿ

ಹಲವು ಯೋಚನೆಗಳ ಬೀಡು

ಎಲ್ಲ ಮಾಯಾ ಮೃಗಗಳ ಕಾಡು

ವಿಜೃಂಭಸಿದೆ ಹಲವು ತಾಳಮೇಳವಿಲ್ಲದ ಹಾಡು

ಆಸೆ ಅಭಿಲಾಶೆಗಳ ಮೀರಿದಮನದ ದಾಹ

ಇದರಲ್ಲಿ ಎಲ್ಲಮೌಲ್ಯಗಳೂ ಸ್ವಾಹ

ಕುರುಡುಬಾಳು ಸಾರವಿಲ್ಲದೆ ಬರಿಬರುಡು

ಮನವಿನ್ನು ಆಗಬೇಕಿದೆ ಪರಿಮಳದ ಕೊರಡು

ನಾನೇನಿರ್ಮಿಸಿದ ಗಾಳಕೆಮೀನಾದೆ

ಅರ್ಥಗಳ ಅರಿಯಲು ಹೋಗಿ ಅಡವಿ ತಲುಪಿದೆ

ಚಂದಿರನ ಬೆಳೆದಿಂಗಳು ಉಡುಪಲ್ಲ ಮನಸಿಗೆ

ಇದೊಂದು ರೀತಿಯ ಧೀರ್ಘನಿದ್ದೆ

ಒಲವು ಚೆಲವುಗಳ ನಡುವೆ ಮನದ ಓಟ

ಅರಿಯಲಾಗದ ಜೀವನ ಪರಿಪಾಠ

ಹಾಡಿಹೊಗಳಿದರೂ.. ಬರೀ ತೆಗಳಿದರೂ

ನಿಲ್ಲದ ನಿಲ್ಲಿಸಿದ ಈ ಗಾನ ಒಂದು ಉಸಿರಿಲ್ಲದ ಬಸಿರು..!





# ಚಿಂತೆ ಎಂಬ ಕಂತೆ

ಎಂ. ಶಾಂತಾರಾಮ್ ರಾವ್

ಚಿಂತೆ ಮಾಡುವಿಯೇಕೆ ಮನುಜ

ಚಿತೆಗೆ ಹತ್ತಿರ ದಾರಿ ಅದೊಂದೇ ಸಾಕು;

ನಾಳೆ ಬಪ್ಪದು ಬಂದೇ ತೀರುವುದು,

ಅದಕ್ಕಾಗಿ ಇಂದು ಸಡಗರವೇಕೆ.

ಚಿಂತೆ ಯಾರನ್ನು ಬಿಟ್ಟಿಲ್ಲ!

ಹಣವಿದ್ದವನಿಗೆ ಬಡತನವು ಚಿಂತೆ;

ಹಣವಿದ್ದವನಿಗೆ ಕರಕೊಡುವ ವ್ಯಥೆ,

ಇದ್ದರೂ, ಚಿಂತೆ, ಇಲ್ಲದಿದ್ದರೂ ಚಿಂತೆ.

ಕೆಲವರಿಗೆ ರೋಗ ಕಾಡಿದರೆ,

ಇನ್ನು ಕೆಲವರಿಗೆ ನಿರೋಗಿಗಳಾಗಿ ಇಲ್ಲದ ರೋಗದ ಚಿಂತೆ;

ಚಿಂತೆ ಎಂಬುದು ಯಾರನ್ನೂ ಬಿಟ್ಟಿಲ್ಲ,

ಅದನ್ನು ನಾವೇ ನಮ್ಮ ಮನೆಯಂಗಳಕ್ಕೆ ಬಿಟ್ಟಿಲ್ಲ,

ಅದನ್ನು ನಾವೇ ನಮ್ಮ ಮನೆಯಂಗಳಕ್ಕೆ ಓಲೈಸುತ್ತೇವೆ.

ಮುಪ್ಪು ಬರುವುದು ಖಂಡಿತ ಆದರೆ ಚಿಂತೆಯಿಂದ,

ಅದರ ಆಗಮನದ ವೇಗ ವರ್ಧಿಸುತ್ತದಷ್ಟೇ ;

ಇದನ್ನು ಬರೆದವನಿಗೆ ಚಿಂತೆ ಇಲ್ಲವೆಂದು ತಿಳಿದೆಯಾ,

ಅವನಿರುವುದೇ ಚಿಂತೆಯ ಗೂಡಿನಲ್ಲಿ.

ಹೊರಬರಲು ಅವನು ಪಟ್ಟಪಾಡು ಅಷ್ಟಿಷ್ಟಲ್ಲ,

ಹಾಗೆಂದು ಅವನು ಚಿಂತಾಮುಕ್ತನೇ ? ಹಾಗೇನಿಲ್ಲ

ಚಿಂತೆ ಅವನೊಂದಿಗೇ ಹುಟ್ಟಿತು,

ಅದರ ಸಾವು ಅವನೊಂದಿಗೇ .

ಪಲಾಯನವಾದದಿಂದ ಚಿಂತೆ ದೂರವಾಗಲಾರದು,

ಅದಕ್ಕೆ ಪರಿಹಾರ ಪುರಂದರದಾಸರ ಉಕ್ತಿಯ ನೆನಪು-

ತಲ್ಲಣಿಸದಿರು ಕಂಡ್ಯ ತಾಳು ಮನವೇ,

ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ.

ಸುಖ ಬಂದಾಗ ಹಿಗ್ಗದಿರು, ದುಃಖ ಬಡಿದಾಗ ಕುಗ್ಗದಿರು;

ಅವುಗಳು ಒಂದೊಂದಾಗಿ ಎರಗುತ್ತವೆ.

ದುಃಖವಾದಾಗಲೂ ಒಸರುವ ಕಣ್ಣೀರು,

ಸುಖವಾದಾಗಲೂ ಸಾಯಿ ಅನ್ನುತ್ತದೆ. ಆದರೆ ಕಣ್ಣೀರು ಉಪ್ಪೇ;

ಸುಖ, ದುಃಖಗಳು ಒಂದೇ ನಾಣ್ಯದ ಎರಡು ಮುಖಗಳು,

ನಾಣ್ಯದ ಬೆಲೆ ಏರುಪೇರಾಗುವುದಿಲ್ಲವಂತೆ;

ಸುಖದೊಂದಿಗೆ ದುಃಖ ಅಂಟಿಕೊಂಡೇ ಬರುತ್ತದೆ,

ಯಾವುದು ಮೊದಲು, ಯಾವುದು ಕೊನೆ ಎಂದು ಯಾರೂ ಹೇಳರು.

ಸುಖವನ್ನು ಹೇಗೆ ಸಹಿಸುತ್ತಿಯೋ ,

ಸುಖ ಬಂದಾಗಲೂ ಹಾಗೆಯೇ ಸಹಿಸು;

ಆಗಿ ಹೋದ ನಿನ್ನೆಯ ದುಃಖಕ್ಕೆ ಬರುವ ನಾಳೆಯನ್ನು ಕಳಕೊಳ್ಳಬೇಡ,

ಸುಖವನ್ನು ಹಂಚಿಕೋ ದುಃಖ ನಿನಗೊಬ್ಬನಿಗೇ ಇರಲಿ, ಯಾರೊಂದಿಗೂ ಹೇಳಬೇಡ.

ದುಃಖ ಆವರಿಸಿದಾಗ, ಯಾರೂ ನಿನ್ನ ಬಳಿ ಸುಳಿಯರು,

ಹಾಗೆಂದು ಜನರಿಂದ ದೂರವಿರಬೇಡ;


ಕೋಟಿಗೊಬ್ಬನು ನಿನಗಾಗಿ ಅಳಲಾರನೇ,

ಸುಖಕ್ಕೆ ದುಂಬಾಲು ಬೇಡ, ದುಃಖ ನಿನಗೊಬ್ಬನಿಗೇ ಸಾಕು,

ಇದನ್ನರಿತವನೇ ಸುಖಿ, ಇದ ಇಂದಿಗೂ ಮರೆಯದಿರು.


# ಚಿಣ್ಣರ ಮುತ್ತುಗಳು

KARNATAKA CULTURAL ORGANIZATION BRINDAVANA (KCOB) NJ, USA
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



# ಚಿತ್ರ ಕಲೆ

**ಸುಪ್ರಿಯಾ ರಾಘವೇಂದ್ರ , ನ್ಯೂಜೆರ್ಸಿ**



# ಕ್ಯಾಮೆರಾ ಕಣ್ಣು



**ಶ್ರೀವಿದ್ಯಾ ಪ್ರಶಾಂತ್**, *ನ್ಯೂಜೆರ್ಸಿ*









# ಧನ್ಯವಾದಗಳು

KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ